ಸಂಪುಟ: 06 ಸಂಚಿಕೆ: 17 ಪುಟಗಳು: 08 ಬುಧವಾರ 01 ಏಪ್ರಿಲ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಪ್ರತಿಕೂಲವಾದ ಸನ್ನಿವೇಶಗಳನ್ನು ಎದುರಿಸಿ ಜೀವಿಯು ವಿಕಾಸ ಮತ್ತು ಬೆಳವಣಿಗೆಯನ್ನು ಹೊಂದುವುದೇ ಜೀವನ.

## ಯುದ್ಧ: ಅಗತ್ಯ ವಸ್ತುಗಳ ಬೆಲೆ ಏರಿಕೆ, ಕೇಂದ್ರದ ವಿರುದ್ಧ ಕೈ ಪಡೆ ಅಖಾಡಕ್ಕೆ


**ಇದೇನಾ ಅಚ್ಚೇ ದಿನ್**

• ಉದಯವಾಹಿನಿ, ಬೆಂಗಳೂರು

ಕೇಂದ್ರ, ಬಿಜೆಪಿ ಸರ್ಕಾರ ಜನರಿಗೆ ಉಜ್ವಲ ಯೋಜನೆ ಬದಲಾಗಿ ಸೌದೆ ಒಲೆ ಯೋಜನೆ ನೀಡಿದೆ. ಅಚ್ಛೇದಿನ ಏನಾಯ್ತು ಈಗ ಇರುವುದನ್ನು ಕಚ್ಚಾ ದಿನ ಎಂದು ಹೇಳಬೇಕಾ ಎಂದು ಬಿಜೆಪಿ ನಾಯಕರನ್ನು ಕೇಳಬಯಸುತ್ತೇನೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ವಾಗ್ದಾಳಿ ನಡೆಸಿದ್ದಾರೆ.

ಪಂಚರಾಜ್ಯ ಚುನಾವಣೆ ನಡೆಯುತ್ತಿದೆ. ಜನರು ಪರದಾಡುತ್ತಿದ್ದು, ಹೊಟೇಲ್‌ಗಳು ಬಂದ್ ಆಗುತ್ತಿವೆ. ಜನ ವಿದ್ಯುತ್ ಒಲೆ ಬಳಸುವ ಅನಿವಾರ್ಯತೆ ಎದುರಾಗಿದೆ. ಕಳೆದ ಹದಿನೈದು ದಿನಗಳಿಂದ ರಾಜ್ಯದಲ್ಲಿ ವಿದ್ಯುತ್ ಬಳಕೆ ಪ್ರಮಾಣ 10% ಏರಿಕೆಯಾಗಿದೆ. ಕೇಂದ್ರ ಸರ್ಕಾರ ಜನರಿಗೆ ಸೌದೆ ಭಾಗ್ಯ ನೀಡಿದ್ದು, ಎಲ್ಲಿಂದ ಸೌದೆ ಒದಗಿಸುವುದು ಎಂದು ಲೇವಡಿ ಮಾಡಿದರು.

**ಯುದ್ಧಗಳ ನೆಪ ಅಷ್ಟೇ!:** ಯುದ್ಧಗಳು ಕೇವಲ ನೆಪವಷ್ಟೇ, ಕೇಂದ್ರ ಸರ್ಕಾರದ ತಪ್ಪು ನಿರ್ಧಾರ, ನೀತಿಗಳಿಂದಾಗಿ ಇಂದು ದೇಶದ ಜನ ಬೆಲೆ ಏರಿಕೆಯಿಂದ ನರಳುತ್ತಿದ್ದಾರೆ ಎಂದು ಅವರು ಆರೋಪ ಮಾಡಿರು. ಅಲ್ಲದೆ, ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ಮಾತ್ರವಲ್ಲ, ಟೋಲ್ ಶುಲ್ಕ, ರೈಲ್ವೇ ಟಿಕೆಟ್ ದರ ಎಲ್ಲಾವೂ ಹೆಚ್ಚಾಗಿದೆ. ಕೆಲವು ಅನಿವಾರ್ಯ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಬೆಲೆ ಏರಿಕೆ ತೀರ್ಮಾನ ಮಾಡಿದಾಗ ಯಾವ ರೀತಿ ಟೀಕೆ ಟಿಪ್ಪಣಿ ಬಂದಿವೆ ಎಂದು ಎಲ್ಲಾರಿಗೂ ಗೊತ್ತಿದೆ. ಸಾಮಾನ್ಯ ಜನರ ಮೇಲೆ ಕೇಂದ್ರ ಸರ್ಕಾರ ಬೆಲೆ ಏರಿಕೆ ಯುದ್ಧ ಮಾಡುತ್ತಿದೆ ಎಂದು ಆರೋಪಿಸಿದರು.



**ಸರ್ಕಾರ ಜನರನ್ನು ಫೂಲ್ ಮಾಡುತ್ತಿದೆ**

ಜನರನ್ನ ಕೇಂದ್ರ ಸರ್ಕಾರ ಫೂಲ್ ಮಾಡುತ್ತಿದೆ. ನಾವು ಪಾದಯಾತ್ರೆ ಮಾಡಿದಾಗ ಈ ಬೆಲೆ ಏರಿಕೆ ಸಮಸ್ಯೆಯಿಂದ ಜನರು ಕಂಗೆಟ್ಟಿದ್ದು, ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ನಮ್ಮ ಸರ್ಕಾರ ಐದು ಗ್ಯಾರಂಟಿ ಯೋಜನೆ ನೀಡಿ ಅವರಿಗೆ ಶಕ್ತಿ ತುಂಬಿದ್ದೇವೆ. ಈಗ ನಮ್ಮ ಗ್ಯಾರಂಟಿ ಯೋಜನೆಗಳು ಜನರಿಗೆ ಆರ್ಥಿಕವಾಗಿ ರಕ್ಷಣೆ ನೀಡಿವೆ ಎಂದು ಅರೋಪಿಸಿದರು.

**ಔಷಧಗಳ ದರ ಏರಿಕೆ:** 900 ಔಷಧಗಳ ದರ ಏರಿಕೆ ಮಾಡಲಾಗಿದೆ. 12% ಜಿಎಸ್‌ಟಿ ವಿಧಿಸಲಾಗಿದೆ. ಎನ್ ಪಿಪಿಎ ಬೆಲೆ ಏರಿಕೆ ಮಾಡಿ ಇವುಗಳಿಗೆ ಶೇ 10.7 ರಷ್ಟು ಇದ್ದ ತೆರಿಗೆಯನ್ನು ಶೇ 12 ಕ್ಕೆ ಏರಿಕೆ ಮಾಡಲಾಗಿದೆ. ಅಗತ್ಯ ವಸ್ತುಗಳಾದ ಪ್ಲಾಸ್ಟಿಕ್ ಪೈಪ್ ಸೇರಿದಂತೆ ಇತರೇ ವಸ್ತುಗಳ ಬೆಲೆಯನ್ನು ಟನ್‌ಗೆ 7 ಸಾವಿರ ಹೆಚ್ಚಳ ಮಾಡಲಾಗಿದೆ. ಈಗಾಗಲೇ ಲೋಕೋಪಯೋಗಿ ಇಲಾಖೆಯಿಂದ ಬಿಟುಮಿನ್ ಹಾಕಲು ಟೆಂಡರ್ ಕರೆಯಲಾಗಿದೆ. ಈಗಾಗಲೇ ಕೆಲಸ ಪ್ರಾರಂಭ ಮಾಡಲಾಗಿದೆ. ಬೆಲೆ ಹೆಚ್ಚಳದಿಂದ ಕೆಲಸ ನಿಲ್ಲಿಸುವುದು ಬೇಡ ಸರ್ಕಾರವೇ ನೇರವಾಗಿ ಬಿಟುಮಿನ್ ಅನ್ನು ಸರಬರಾಜು ಮಾಡಲಿದೆ ಎಂದು ಬೆಂಗಳೂರಿನ ಗುತ್ತಿಗೆದಾರರು ಹಾಗೂ ಅಧಿಕಾರಿಗಳಿಗೆ ತಿಳಿಸಿದ್ದೇನೆ ಎಂದರು.

**ಸಿಮೆಂಟ್, ಕಬ್ಬಿಣ ಬೆಲೆ ಹೆಚ್ಚಳ:** ಸಿಮೆಂಟ್ ಬೆಲೆಯೂ ಸಹ 50 ರಿಂದ 100 ರೂಪಾಯಿಗೆ ಹೆಚ್ಚಳವಾಗಿದೆ. ಇದರ ಹಿಂದೆ ದೊಡ್ಡ ಸಿಮೆಂಟ್ ಮಾಫಿಯಾವೇ ಇದೆ. ಇದನ್ನು ಯಾರು ನಿಯಂತ್ರಣ ಮಾಡುತ್ತಿದ್ದಾರೆ ಎಂಬುದು ಎಲ್ಲಾರಿಗೂ ಗೊತ್ತಿದೆ. ಕಬ್ಬಿಣದ ಬೆಲೆ 47 ಸಾವಿರದಿಂದ 59 ಸಾವಿರಕ್ಕೆ ಹೆಚ್ಚಳವಾಗಿದೆ. ಹೀಗಾದರೆ ಜನಸಾಮಾನ್ಯ ಮನೆ ಕಟ್ಟುವುದು ಹೇಗೆ. ಇದಿರಿಂದ ಸರ್ಕಾರದ ಕಾಮಗಾರಿಗಳಿಗೂ ಹಿನ್ನಡೆಯಾಗುತ್ತಿದೆ. ಅಲ್ಲದೇ ಇದ್ದಕ್ಕಿದ್ದಂತೆ ವಿಮಾನ ಪ್ರಯಾಣದರವನ್ನ ಶೇ 18 ರಷ್ಟು ಏರಿಕೆ ಮಾಡಲಾಗಿದೆ ಎಂದು ಹೇಳಿದರು. ಅರಣ್ಯಗಳಿಗೆ ಜನರು ಹೋಗಬಾರದು ಎಂದು ಹೇಳಿರುವ ಕಾರಣಕ್ಕೆ ಸೌದೆ ಅಭಾವ ನಿಜಕ್ಕೂ ಹೆಚ್ಚಾಗಲಿದೆ. ಹಳ್ಳಿಗಳಲ್ಲೂ ಸಹ ಗ್ಯಾಸ್ ಬಳಕೆ ಹೆಚ್ಚಾಗಿ ಜನ ಸೌದೆ ಬಳಸುತ್ತಿಲ್ಲ. ಒಮ್ಮೆಲೆ ಬಳಕೆ ಹೆಚ್ಚಾದರೆ ಅಭಾವ ಉಂಟಾಗಲಿದೆ. ಬ್ಲಾಕ್ ಮಾರ್ಕೆಟ್ ಕೆಲಸ ಮಾಡುತ್ತಿದ್ದು 2 ಸಾವಿರದವರೆಗೆ ಗೃಹಬಳಕೆ ಗ್ಯಾಸ್, 4 ಸಾವಿರದವರೆಗೆ ಕಮರ್ಷಿಯಲ್ ಗ್ಯಾಸ್ ಬೆಲೆ ಹೆಚ್ಚಾಗಿದೆ ಎಂದರು.

## ಏ.1 ರಿಂದ ಜನರ ಲೂಟಿಗಿಳಿದ ಕೇಂದ್ರ: ಕಾಂಗ್ರೆಸ್ ವಾಗ್ದಾಳಿ

• ಉದಯವಾಹಿನಿ, ಬೆಂಗಳೂರು

'ವಿವಿಧ ವಸ್ತುಗಳ ಬೆಲೆ ಬುಧವಾರದಿಂದ ಏರಿಕೆಯಾಗಲಿದ್ದು, ಜನಸಾಮಾನ್ಯರನ್ನು ನೋಯಿಸುವ ಮೂಲಕ ಸಂಭ್ರಮಿಸಲು ಬಿಜೆಪಿ ಸಜ್ಜಾಗಿದೆ. ಈ ದಿನ ಕೇಂದ್ರ ಸರ್ಕಾರದ ಪಾಲಿಗೆ ಜನರನ್ನು ಲೂಟಿ, ಸುಲಿಗೆ ಮಾಡುವ ದಿನ' ಎಂದು ಕಾಂಗ್ರೆಸ್ ಟೀಕಿಸಿದೆ. ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಏ.1 ರಿಂದ ಜಾರಿಗೆ ಬರಲಿರುವ ವಿವಿಧ ಬೆಲೆ ಏರಿಕೆಗಳು ಜನಸಾಮಾನ್ಯರಿಗೆ ಶಾಪವಾಗಿ ಪರಿಣಮಿಸಲಿವೆ' ಎಂದು ಆಕ್ರೋಶ ವ್ಯಕ್ತಪಡಿಸಿದರು. 'ಕೇಂದ್ರ ಬಿಜೆಪಿ ಹಾಗೂ ಮೋದಿ ಅವರ ಸರ್ಕಾರ ಕನ್ನಡಿಗರು ಹಾಗೂ ದೇಶದ ಜನರ ಮೇಲೆ ಬೆಲೆ ಏರಿಕೆಯ ದಾಳಿ ನಡೆಸಲಿದೆ. ಜನರ ಪರಿಶ್ರಮದ ಹಣವನ್ನು ವಂಚಿಸಿ, ಲೂಟಿ ಮಾಡಿ, ದೋಚುವ ಸಾಧನವಾಗಿದೆ. ಜನಸಾಮಾನ್ಯರ ಜೇಬಿನಿಂದ ಹಣ ಕಳವು ಮಾಡುತ್ತಿದ್ದು, ಚುನಾವಣೆಗಳಲ್ಲಿ ಮತ ಕೇಳುವ ಮುನ್ನ ಪ್ರಧಾನಿ ಹಾಗೂ ಬಿಜೆಪಿಯ ಪ್ರತಿಯೊಬ್ಬ ನಾಯಕರು ಕರ್ನಾಟಕದ ಜನರು ಹಾಗೂ ದೇಶದ ಜನರ ಮೇಲೆ ಎಳೆದಿರುವ ಬೆಲೆ ಏರಿಕೆ ಬರೆಯ ಬಗ್ಗೆ ಉತ್ತರ ನೀಡಬೇಕು' ಎಂದು ಆಗ್ರಹಿಸಿದರು.

## ಯಾರೇ ಬಂದು ನಮ್ಮ ಅಭ್ಯರ್ಥಿಗಳ ಪ್ರಚಾರ ಮಾಡಿದರೂ ಸ್ವಾಗತಿಸುತ್ತೇವೆ

• ಉದಯವಾಹಿನಿ, ಬೆಂಗಳೂರು



ಬಾಗಲಕೋಟೆ, ದಾವಣಗೆರೆ ದಕ್ಷಿಣ ಕ್ಷೇತ್ರಗಳಲ್ಲಿನ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಉಚ್ಛಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ಯಾರೇ ಬಂದು ಪ್ರಚಾರ ನಡೆಸಿದರೂ ಸ್ವಾಗತಿಸುತ್ತೇನೆ ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ತಿಳಿಸಿದ್ದಾರೆ.

ಯಾರೇ ಬಂದು ನಮ್ಮ ಅಭ್ಯರ್ಥಿಗಳ ಪ್ರಚಾರ ಮಾಡಿದರೂ ಸ್ವಾಗತಿಸುತ್ತೇವೆ. ಯಾರೇ ಬಂದರೂ ಪ್ರಚಾರ ನಡೆಸಲು ಅವಕಾಶ ಇದೆ. ಅವರು ಪ್ರಚಾರಕ್ಕೆ ಬರಲಿ, ಸ್ವಾಗತ ಮಾಡುತ್ತೇವೆ. ನಮಗೆ ಗೆಲುವು ಮುಖ್ಯ ಅಗಿರುವುದರಿಂದ ಯಾವುದೇ ಸಮಸ್ಯೆ ಇಲ್ಲ ಎಂದು ವಿವರಣೆ ನೀಡಿದರು. ನಾನು ದಾವಣಗೆರೆಯಲ್ಲಿ ಪ್ರಚಾರ ಮಾಡುತ್ತೇನೆ. ಏ.5, 6ರಂದು ಬಾಗಲಕೋಟೆಯಲ್ಲಿ ಪಕ್ಷದ ಅಭ್ಯರ್ಥಿ ವೀರಣ್ಣ ಚರಂತಿಮಠ ಪರವಾಗಿ ಪ್ರಚಾರಕ್ಕೆ ತೆರಳುತ್ತೇನೆ. ನನಗೆ ನೂರಕ್ಕೆ ನೂರು ವಿಶ್ವಾಸ ಇದೆ. ಎರಡೂ ಕಡೆಯೂ ದೊಡ್ಡ ಅಂತರದಲ್ಲಿ ನಮ್ಮ ಅಭ್ಯರ್ಥಿಗಳು ಗೆಲ್ಲಲ್ಲಿದ್ದಾರೆ ಎಂದು ಯಡಿಯೂರಪ್ಪ ಇದೇ ವೇಳೆ ವಿಶ್ವಾಸ ವ್ಯಕ್ತಪಡಿಸಿದರು.

## ರಾಷ್ಟ್ರಪತಿ ದೌಪದಿ ಮುರ್ಮು ಸ್ವಾಗತಿಸಿದ ರಾಜ್ಯಪಾಲ ಗೆಹ್ಲೋಟ್

• ಉದಯವಾಹಿನಿ, ಬೆಂಗಳೂರು

ತುಮಕೂರಿನ ಶ್ರೀ ಸಿದ್ದಗಂಗಾ ಮಠದಲ್ಲಿ ಆಯೋಜಿಸಲಾಗಿರುವ ಡಾ. ಶ್ರೀಶಿವಕುಮಾರ ಸ್ವಾಮೀಜಿ 199ನೇ ಜಯಂತೋತ್ಸವ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಲುವಾಗಿ ಆಗಮಿಸಿದ ರಾಷ್ಟ್ರಪತಿ ದೌಪದಿ ಮುರ್ಮು ಅವರನ್ನು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಸ್ವಾಗತಿಸಿದರು. ಮಂಗಳವಾರ ರಾತ್ರಿ ಹೊಸದಿಲ್ಲಿಯಿಂದ ಭಾರತೀಯ ವಾಯು ಸೇನೆಯ ವಿಶೇಷ ವಿಮಾನದ ಮೂಲಕ ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಮುರ್ಮು ಅವರನ್ನು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪುಷ್ಪಾಗುಚ್ಛವನ್ನು ನೀಡಿ ಆತ್ಮೀಯವಾಗಿ ರಾಜ್ಯಕ್ಕೆ ಬರಮಾಡಿಕೊಂಡರು.

ಅನಂತರ ಎಚ್‌ಎಎಲ್ ವಿಮಾನ ನಿಲ್ದಾಣದಿಂದ ಲೋಕ ಭವನಕ್ಕೆ ತೆರಳಿದರು. ಈ ವೇಳೆ ಕೇಂದ್ರ ರೈಲ್ವೆ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಸಾರಿಗೆ ಸಚಿವ ರಾಮಲಿಂಗರೆಡ್ಡಿ ಸರಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಮ್, ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ಜಿ. ಸೇರಿದಂತೆ ಹಿರಿಯ ಅಧಿಕಾರಿಗಳು, ಗಣ್ಯರು ಉಪಸ್ಥಿತರಿದ್ದರು.

**ದಾವಣಗೆರೆ ಉಪಚುನಾವಣೆ**

**ಉಪ ರಣ ಕಹಳೆ**

# ಕೇಸರಿಯ ಭರವಸೆ ಸುರಿಮಳೆ

**ಬಸ್‌ಗಳಿಗೆ ಬ್ಯಾಟರಿ, ಟಯರ್‌ಗಳು ಇಲ್ಲದೆ ನಿಂತಿವೆ**

ಬಸ್‌ಗಳಿಗೆ ಬ್ಯಾಟರಿ, ಟಯರ್‌ಗಳು ಇಲ್ಲದೆ ನಿಂತಿವೆ. ಮಕ್ಕಳನ್ನು ಪ್ರವಾಸ ಕರೆದುಕೊಂಡು ಹೋಗಲು ಟಿಪ್ಪರ್‌ಗಳಲ್ಲಿ ಕಳುಹಿಸುತ್ತಿದ್ದಾರೆ. ಮೊನ್ನೆ ಬೆಳ್ತಂಗಡಿಯಲ್ಲಿ ಮಕ್ಕಳನ್ನು ಯಾವುದರಲ್ಲಿ ಕರೆದುಕೊಂಡು ಹೋದ್ರು ಅಂತ ಗೊತ್ತಲ್ವಾ. ಅನಾಥ ಮಕ್ಕಳ ಅನ್ನಕ್ಕೆ ಕನ್ನಾ ಹಾಕಿದ್ದು ಸಿದ್ದರಾಮಯ್ಯ.



ಬಿಕ್ಷುಕರ ಕಲ್ಯಾಣ ಹಣವನ್ನೂ ಕೂಡ ನುಂಗಿ ಹಾಕಿದ್ದಾರೆ. ಎಸ್ಸಿ, ಎಸ್ಟಿ ಹಣವನ್ನು ಕೂಡ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ತಿಳಿಸಿದರು.ನಮ್ಮಲ್ಲಿ ಇಷ್ಟು ಸಮಸ್ಯೆ ಇದ್ದರೂ ವಯನಾಡಿಗೆ ಎರಡು ಬಾರಿ ಹತ್ತು ಕೋಟಿ ನೀಡಿದ್ದೀರಿ. ಅದೇ ಹಣವನ್ನು ದಾವಣಗೆರೆ, ಬಾಗಲಕೋಟೆಗೆ ನೀಡಬಹುದಿತ್ತಲ್ವಾ. ರಾಹುಲ್ ಗಾಂಧಿಯನ್ನು ಮೆಚ್ಚಿಸಲು ಅಲ್ಲಿಗೆ ಹಣ ನೀಡಿದ್ದೀರಿ. ಯಾವ ಮುಖ ಇಟ್ಟುಕೊಂಡು ಜನರಲ್ಲಿ ಮತ ಕೇಳ್ತೀರಿ. ಜಲಜೀವನ್ ಮಿಷನ್‌ಗೆ ಖರ್ಚಾಗಿರುವ ಹಣದ ಲೆಕ್ಕವನ್ನೇ ನೀಡುತ್ತಿಲ್ಲ. ಈಗ ಕೇಂದ್ರ ಸರ್ಕಾರದಿಂದ ಹಣ ಬರ್ತಾ ಇಲ್ಲ ಎಂದು ಗೂಬೆ ಕೂರಿಸುತ್ತಿದ್ದಾರೆ ಎಂದರು.

**ಬಿಜೆಪಿ ಪ್ರಣಾಳಿಕೆ ಬಿಡುಗಡೆ ಮಾಡಿದ ಆರ್. ಅಶೋಕ್**

**ಭ್ರಷ್ಟ, ಮನೆಹಾಳ ಕಾಂಗ್ರೆಸ್ ತೊಲಗಿಸಲು,ಲಂಚದ ಸರ್ಕಾರ ಕಿತ್ತೊಗೆಯಲು ಬಿಜೆಪಿ ಬೆಂಬಲಿಸಿ**

• ಉದಯವಾಹಿನಿ, ದಾವಣಗೆರೆ

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಹಿನ್ನೆಲೆ ಬಿಜೆಪಿ ಕಚೇರಿಯಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಬಿಜೆಪಿ ಪ್ರಣಾಳಿಕೆ ಬಿಡುಗಡೆ ಮಾಡಿದರು. 12 ಅಂಶಗಳಿರುವ ಪ್ರಣಾಳಿಕೆ ಬಿಡುಗಡೆ ಬಳಿಕ ಸಿಎಂ ಹಾಗೂ ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದರು.

**ನಮ್ಮ ದೃಷ್ಟಿ (ನಮ್ಮ ಮಿಷನ್) :** ದಾವಣಗೆರೆ ದಕ್ಷಿಣ ಕ್ಷೇತ್ರವನ್ನು ರಾಜ್ಯದ ಮಾದರಿ ಕ್ಷೇತ್ರವನ್ನಾಗಿ ರೂಪಿಸುವುದು. ಸುಧಾರಿತ ಮೂಲಸೌಕರ್ಯ, ಉದ್ಯೋಗಾವಕಾಶಗಳು ಮತ್ತು ಪ್ರತಿಯೊಬ್ಬ ನಾಗರಿಕನಿಗೂ ಗೌರವಯುತ ಜೀವನ ಕಲ್ಪಿಸುವುದು ನಮ್ಮಗುರಿ. ಎಲ್ಲಾ ಪ್ರಮುಖ ರಸ್ತೆಗಳ ಪುನರ್ ನಿರ್ಮಾಣ ಮತ್ತು ಗುಂಡಿ ಮುಕ್ತ ರಸ್ತೆ ಯೋಜನೆ. ಒಳ ರಸ್ತೆಗಳ ಡಾಂಬರೀಕರಣ ಮತ್ತು ಕಾಂಕ್ರಿಟೀಕರಣ. ಟ್ರಾಫಿಕ್ ಸಮಸ್ಯೆ ಪರಿಹಾರಕ್ಕೆ ಸ್ಮಾರ್ಟ್ ಸಿಗ್ನಲ್ ವ್ಯವಸ್ಥೆ. ಕ್ಷೇತ್ರದಲ್ಲಿರುವ 39 ಸ್ಲಂ ಪ್ರದೇಶಗಳ ಅಭಿವೃದ್ಧಿ. ಮಾದರಿ ಉದ್ಯಾನಗಳನ್ನು ನಿರ್ಮಿಸಲು ಆದ್ಯತೆ. ಗ್ರಾಮ ಮತ್ತು ನಗರ ಪ್ರದೇಶಗಳ ಸಮತೋಲನ ಅಭಿವೃದ್ಧಿಗೆ ಕ್ರಮ.

**ಆರೋಗ್ಯ ಸೇವೆಗಳು:** ಸರ್ಕಾರಿ ಆಸ್ಪತ್ರೆಗಳನ್ನು ಆಧುನಿಕತೆಯೊಂದಿಗೆ ಮೇಲ್ದರ್ಜೆಗೇರಿಸುವುದು, ಉಚಿತ ಸಂಚಾರಿ ಕ್ಲಿನಿಕ್, ಹಿರಿಯ ನಾಗರಿಕರಿಗೆ ಮನೆ ಬಾಗಿಲಿಗೆ ಆರೋಗ್ಯ ಸೇವೆ. ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಸುಧಾರಿಸಿ ನಾಗರಿಕರಿಗೆ ಉತ್ತಮ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುವುದು.

**ಶಿಕ್ಷಣ ಮತ್ತು ಯುವಜನತೆ :** ಸರ್ಕಾರಿ ಶಾಲಾ - ಕಾಲೇಜುಗಳ ಅಭಿವೃದ್ಧಿ ಹಾಗೂ 'ಸ್ಮಾರ್ಟ್ ಕ್ಲಾಸ್'ಗೆ ರೂಪಾಂತರ. ಯುವ ಜನರಿಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅಗತ್ಯ ಸೌಲಭ್ಯ. ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಆಟದ ಮೈದಾನ, ಗರಡಿ ಮನೆ, ವ್ಯಾಯಾಮ ಶಾಲೆಗಳ ಅಭಿವೃದ್ಧಿ.

**ಉದ್ಯೋಗ ಮತ್ತು ಕೈಗಾರಿಕೆ :** ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಉತ್ತೇಜನ. ಉದ್ಯೋಗ ಅವಕಾಶಕ್ಕಾಗಿ ಕೌಶಲ್ಯಾಭಿವೃದ್ಧಿಗೆ ಉತ್ತೇಜನ. ಸ್ವಯಂ ಉದ್ಯೋಗ ಯೋಜನೆಗಳಿಗೆ ಹಾಗೂ ಸ್ಟಾರ್ಟಪ್‌ಗಳ ಆರಂಭಕ್ಕೆ ಆದ್ಯತೆ. **ಸ್ವಚ್ಛತೆ ಮತ್ತು ನಗರ ನಿರ್ವಹಣೆ** : ನಗರದಲ್ಲಿ ಪರಿಸರ ಸಂರಕ್ಷಣೆ ಮತ್ತು ಸ್ವಚ್ಛತಾ ಅಭಿಯಾನಕ್ಕೆ ಆದ್ಯತೆ. ಮನೆಮನೆಗೆ ಕಸ ಸಂಗ್ರಹಣೆ ಚುರುಕುಗೊಳಿಸುವಿಕೆ ಮತ್ತು ವೈಜ್ಞಾನಿಕ ತ್ಯಾಜ್ಯ ವಿಲೇವಾರಿ.ಮಹಿಳಾ ಮತ್ತು ಸಮಾಜ ಕಲ್ಯಾಣ, ಮಹಿಳಾ ಸುರಕ್ಷತೆಗಾಗಿ ವಿಶೇಷ ಕ್ರಮಗಳು. ಸ್ವಸಹಾಯ ಸಂಘಗಳ ಬೆಳವಣಿಗೆಗೆ ಬೆಂಬಲ. ಹಿರಿಯ ನಾಗರಿಕರ ಕುಂದು ಕೊರತೆಗಳ ನಿವಾರಣೆಗೆ ಆದ್ಯತೆ. ರೈತ ಹಿತಾಸಕ್ತಿ : ಬೆಲೆ ಕುಸಿತದಿಂದ ರೈತರು ಆರ್ಥಿಕ ಸಂಕಷ್ಟಕ್ಕೀಡಾದಾಗ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿ ಕೇಂದ್ರಗಳನ್ನು ತೆರೆಸಿ, ರೈತರ ಹಿತಾಸಕ್ತಿಯನ್ನು ಕಾಪಾಡಲಾಗುವುದು. ಅತಿವೃಷ್ಟಿ, ಅನಾವೃಷ್ಟಿಯಿಂದ ರೈತ ಬಳಲಿದಾಗ ಬೆಳೆವಿಮೆ ಮತ್ತು ಪರಿಹಾರ ಕೊಡಿಸಲು ಪ್ರಯತ್ನಿಸಲಾಗುವುದು.

**ಸಾರಿಗೆ ಮತ್ತು ಸಂಪರ್ಕ :** ಸುಗಮ ವಾಹನ ಸಂಚಾರಕ್ಕಾಗಿ ಟ್ರಾಫಿಕ್ ನಿಯಂತ್ರಣಕ್ಕೆ ಆದ್ಯತೆ. ಉತ್ತಮ ಸಾರ್ವಜನಿಕ ನಗರ ಸಾರಿಗೆ ವ್ಯವಸ್ಥೆಗೆ ಆದ್ಯತೆ. **ಪಾರದರ್ಶಕ ಆಡಳಿತ :** ಶಾಸಕರಾಗಿ ಆಯ್ಕೆಯಾದ ಒಂದು ತಿಂಗಳೊಳಗೆ ಜನಸಂಪರ್ಕ ಕಚೇರಿ ಉದ್ಘಾಟನೆ. ಭ್ರಷ್ಟಾಚಾರ ರಹಿತ ಆಡಳಿತ ಮತ್ತು ನಾಗರೀಕರ ಸಮಸ್ಯೆಗಳಿಗೆ ತ್ವರಿತ ಪರಿಹಾರಕ್ಕೆ ಆದ್ಯತೆ. ಸರ್ಕಾರದ ಸೌಲಭ್ಯಗಳು ನೇರವಾಗಿ ಅರ್ಹ ಫಲಾನುಭವಿಗಳಿಗೆ ತಲುಪಿಸಲು ಆದ್ಯತೆ.

**ಕುಡಿಯುವ ನೀರು ಮತ್ತು ಒಳಚರಂಡಿ :** 24X7 ಶುದ್ಧ ಕುಡಿಯುವ ನೀರು ಪೂರೈಕೆ ಯೋಜನೆಗೆ ಆದ್ಯತೆ. ಒಳಚರಂಡಿ ವ್ಯವಸ್ಥೆಯ ಸುಧಾರಣೆ - ನಿರ್ಮಾಣ ಮತ್ತು ಮಳೆನೀರು ಸಂಗ್ರಹಣೆ ಯೋಜನೆಗೆ ಉತ್ತೇಜನ.ವಿದ್ಯುತ್ ಮತ್ತು **ಮೂಲಸೌಕರ್ಯ :** ಸೌರ ಶಕ್ತಿ ವಿದ್ಯುತ್ ಉತ್ಪಾದನೆಗೆ ಆದ್ಯತೆ. ಸೌರಶಕ್ತಿ ಆಧಾರಿತ ಬೀದಿ ದೀಪಗಳ ಸಂಪೂರ್ಣ ಆಧುನೀಕರಣ.

**ನಮ್ಮ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ :** ಆರ್. ಅಶೋಕ್ ಮಾತನಾಡಿ, 'ದಕ್ಷಿಣ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಣಾಳಿಕೆ ಬಿಡುಗಡೆ ಮಾಡಲಾಗಿದೆ. ಮಾದರಿ ದಾವಣಗೆರೆ ದಕ್ಷಿಣ ಕ್ಷೇತ್ರ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ. ಇಡೀ ದಾವಣಗೆರೆ ಜನತೆ ಒಂದು ಬದಲಾವಣೆ ಆಗುತ್ತೆ, ಆ ಕುಟುಂಬ ಬಿಟ್ಟು ಸಾಮಾನ್ಯ ಕಾರ್ಯಕರ್ತರಿಗೆ ಟಿಕೆಟ್ ಸಿಗುತ್ತದೆ ಎಂದುಕೊಂಡಿದ್ದರು. ಅಹಿಂದ ಸಮುದಾಯಕ್ಕೆ ಟಿಕೆಟ್ ನೀಡಿಲ್ಲ, ಮುಸ್ಲಿಮರನ್ನು ಹತ್ತಿರಕ್ಕೆ ಕರೆದುಕೊಂಡಿಲ್ಲ. ಈಗ ಈ ಕಾಂಗ್ರೆಸ್ ಅಭ್ಯರ್ಥಿ ಗೆದ್ದರೆ ನಿಮ್ಮ ನಿಮ್ಮ ಮಕ್ಕಳ ಕಾಲಕ್ಕೂ ಕೂಡ ನೀವು ಚುನಾವಣೆಗೆ ನಿಲ್ಲಲು ಸಾಧ್ಯವಿಲ್ಲ. ಆದ್ದರಿಂದ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿದರೆ ನಿಮಗೆ ಮುಂದೆ ಭವಿಷ್ಯ ಇದೆ. ಎಸ್. ಎಸ್. ಮಲ್ಲಿಕಾರ್ಜುನ್ ಅಧಿವೇಶಕ್ಕೆ ಬರೋದಿಲ್ಲ, ಕ್ಷೇತ್ರದಲ್ಲಿ ಸಿಗೋದಿಲ್ಲ. ಒಂದೇ ಮನೆಯಲ್ಲಿ ಅಧಿಕಾರ ಇದ್ದರೆ ದೌರ್ಜನ್ಯ, ದರ್ಪ ಇರುತ್ತೆ. ಈ ಸರ್ವಾಧಿಕಾರವನ್ನು ಧಿಕ್ಕರಿಸಿ ಬಿಜೆಪಿಯ ದಲಿತ ಅಭ್ಯರ್ಥಿಗೆ ಆಶೀರ್ವಾದ ಮಾಡಿ' ಎಂದರು.



**ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು, ಔಷಧಿಗಳು ಸಿಗ್ತಾ ಇಲ್ಲ**

ಹೊರಗೆ ಖಾಸಗಿ ಮೆಡಿಕಲ್ ಸ್ಟೋರ್‌ಗಳಿಗೆ ಬರೆದುಕೊಡುವಂತೆ ಡಾಕ್ಟರ್‌ಗಳಿಗೆ ಆದೇಶ ನೀಡಿದ್ದೀರಿ. ಎಲ್ಲಾ ಶುಲ್ಕಗಳನ್ನು ಹೆಚ್ಚು ಮಾಡಿ ಜನರಿಗೆ ಹೊರೆ ಮಾಡಿದ್ದಾರೆ. ಗುತ್ತಿಗೆದಾರರಲ್ಲಿ, ಮದ್ಯ ವ್ಯಾಪಾರ ಸೇರಿದಂತೆ ಎಲ್ಲಾ ಕಡೆ 60% ಕಮಿಷನ್ ಇದೆ. ಈ ಸರ್ಕಾರ ಲಂಚವನ್ನು ಫೋನ್ ಪೇನಲ್ಲಿ ಪಡೆಯುವ ಸರ್ಕಾರ. ಭ್ರಷ್ಟ ಮನೆಹಾಳು ಸರ್ಕಾರವನ್ನು ಕಿತ್ತು ಹಾಕಲು ಈ ಬೈ ಎಲೆಕ್ಷನ್ ಇದೆ. ಡಬಲ್ ಇಂಜಿನ್ ಸರ್ಕಾರ ಬಂದರೆ ಮಾತ್ರ ರಾಜ್ಯ ಅಭಿವೃದ್ಧಿ. ಮುಸ್ಲಿಂ ಹಾಗೂ ದಲಿತರಿಗೆ ಮೋಸ ಮಾಡಿದ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಿ. ಕಾಂಗ್ರೆಸ್ ಅಭ್ಯರ್ಥಿ ಡಿಕೆಶಿ ಕಡೆಯವರು ಆಗಿರುವುದರಿಂದಾಗಿ ಸಿಎಂ ಸಿದ್ದರಾಮಯ್ಯ ಸರಿಯಾಗಿ ಆಸಕ್ತಿ ತೋರುತ್ತಿಲ್ಲ. ಕಾಂಗ್ರೆಸ್‌ನ ಬಣ ಬಡಿದಾಟ ಇಲ್ಲಿಗೆ ಶಿಫ್ಟ್ ಆಗಿದೆ. ಮೇಕೆದಾಟು ಅಂತ ಹೇಳಿದ್ರೂ ಮೇಕೆ ದಾಟಿ ಹೋಗಿದೆ. ಆದರೆ, ಕಾಂಗ್ರೆಸ್‌ನವರು ಅಲ್ಲೇ ಕುಳಿತ್ತಿದ್ದಾರೆ. ಮಸಾಲೆ ಹಾಕಿ ಚಾಪ್ಸ್ ತಿನ್ನೋಣಾ ಅಂತ ಕಾಯ್ತ ಇದ್ದಾರೆ' ಎಂದು ಹೇಳಿದರು.

**ಸಿಎಂ ವಿರುದ್ಧ ವಾಗ್ದಾಳಿ**

ಕಾಂಗ್ರೆಸ್ ಅಧಿಕಾರಕ್ಕೆ ಬಂದು ಮೂರು ವರ್ಷವಾದ್ರೂ ಅಭಿವೃದ್ಧಿಯಾಗಿಲ್ಲ. ಅಭಿವೃದ್ಧಿ ಕಲ್ಲುಗಳು ಎಲ್ಲಿಯಾದ್ರು ಇದ್ಯಾ. ಸಿದ್ದರಾಮಯ್ಯ ಈಗ ಸಾಲದ ರಾಮಯ್ಯ ಆಗಿದ್ದಾರೆ. ಸಾಲ ಮಾಡೋದ್ರಲ್ಲಿ ನಿಸ್ಸೀಮರಾಗಿದ್ದಾರೆ. 2023 ರಲ್ಲಿ 81 ಸಾವಿರ ಕೋಟಿ, 2024 ರಲ್ಲಿ 91 ಸಾವಿರ ಕೋಟಿ ಹೀಗೆ ಮಾಡಿದ್ದಾರೆ. ವರ್ಷದಿಂದ ವರ್ಷಕ್ಕೆ ಸಾಲ ಜಾಸ್ತಿಯಾಗುತ್ತಲೇ ಹೋಗುತ್ತಿದೆ. ಸಿದ್ದರಾಮಯ್ಯ ಆಡಳಿತದಲ್ಲಿ ಪ್ರತಿಯೊಬ್ಬರ ತಲೆ ಮೇಲೆ 1.40 ಲಕ್ಷ ಸಾಲ ಹೊರಿಸಿದ್ದಾರೆ ಎಂದು ಆರೋಪಿಸಿದರು. ಸಮಾಜವಾದಿ ಸಿದ್ದರಾಮಯ್ಯ ಆಗಿಲ್ಲ, ಮಜಾವಾದಿ ಸಿದ್ದರಾಮಯ್ಯ ಆಗಿದ್ದಾರೆ. ಗೃಹಲಕ್ಷ್ಮಿ ಪ್ರತಿ ತಿಂಗಳು ಕೊಡಬೇಕು. ಆದರೆ, ಅದನ್ನು ಕೊಡುತ್ತಿಲ್ಲ. ವರ್ಷಕ್ಕೆ 12 ತಿಂಗಳು ಇದ್ದರೆ ಕಾಂಗ್ರೆಸ್‌ನವರಿಗೆ 10 ತಿಂಗಳು ಮಾತ್ರ ಇದೆ. ಎರಡು ತಿಂಗಳ ಹಣವನ್ನು ಕೊಡದೇ ಯಾಮಾರಿಸಿದ್ದಾರೆ. ಅನ್ನಭಾಗ್ಯದ ಅಕ್ಕಿಯ ಹಣ ಕೂಡ ಬಂದಿಲ್ಲ. 17 ಬಜೆಟ್ ಮಂಡನೆ ಮಾಡಿ ಚಾಂಪಿಯನ್ ಅಂತ ಹೇಳ್ತಾ ಇದ್ದಾರೆ. ಬಂದ ಹಣವೆಲ್ಲ ಸಾಲದ ಬಡ್ಡಿ ಕಟ್ಟಲು ಹೋಗುತ್ತಿದೆ. ಇನ್ನೆಲ್ಲಿ ಅಭಿವೃದ್ಧಿ. ಬಿಜೆಪಿಯವರು ಇದ್ದಾಗ ಅಭಿವೃದ್ಧಿ ಇಲ್ಲ ಅಂತ ನಿನ್ನೆ ಸಿದ್ದರಾಮಯ್ಯ ಬಾಗಲಕೋಟೆಯಲ್ಲಿ ಹೇಳಿದ್ದಾರೆ. ನಾನು ಚಾಲೆಂಜ್ ಮಾಡ್ತಿನಿ, ನಿಮ್ಮ ಅಭಿವೃದ್ಧಿ ಕಲ್ಲು ತೋರಿಸಿ. ಒಂದು ಬಸ್ ನಿಲ್ದಾಣವಾದ್ರೂ ಕಟ್ಟಿದ್ದೀರಾ ತೋರಿಸಿ. 3617 ಕನ್ನಡ ಶಾಲೆಗಳಿಗೆ ಬೀಗ ಜಡಿಯುವ ಕೆಲಸ ಮಾಡಿದ್ದಾರೆ. ಕೆಲ ಸರ್ಕಾರಿ ಶಾಲೆಗಳಿಗೆ ಮಕ್ಕಳೇ ಬರುತ್ತಿಲ್ಲ. ಏಕೆಂದರೆ ಮೂಲ ಸೌಕರ್ಯವೇ ಇಲ್ಲ. 14 ಸಾವಿರ ಶಿಕ್ಷಕರ ನೇಮಕ ಮಾಡಿಕೊಳ್ಳುತ್ತೇವೆ ಎಂದು ಪ್ರತಿ ಬಜೆಟ್‌ನಲ್ಲಿ ಹೇಳ್ತಾ ಇದ್ದಾರೆ. ಆದರೆ ಒಂದು ಬಜೆಟ್‌ನಲ್ಲಿ ಅದು ಕಾರ್ಯರೂಪಕ್ಕೆ ಬರುತ್ತಿಲ್ಲ ಎಂದರು.

## ವಿಬಿ ಗ್ರಾಮ್ ಜಿ ಯೋಜನೆ ಜಾರಿಗೊಳಿಸುವ ಲಕ್ಷಣಗಳು ಕಾಣುತ್ತಿಲ್ಲ

**ಕೇಂದ್ರದ ವಿರುದ್ಧ ಪ್ರಿಯಾಂಕ್ ಆಕ್ರೋಶ**

• ಉದಯವಾಹಿನಿ, ಬೆಂಗಳೂರು

ಗ್ರಾಮೀಣ ಭಾರತಕ್ಕೆ ಎರಡು ದಶಕಗಳ ಜೀವನಾಡಿಯಾಗಿದ್ದ ಮನರೇಗಾ ಯೋಜನೆಯು ಸದ್ದಿಲ್ಲದೆ ಕೊನೆಗೊಳ್ಳಲಿದೆ.

ಮಾ.31ರಂದು ಸೂರ್ಯ ಮುಳುಗುತ್ತಿದ್ದಂತೆ, ಏ.1ರಂದು ವಿಬಿ ಗ್ರಾಮ್ ಜಿ ಯೋಜನೆಯು ಜಾರಿಯಾಗುವ ಸಣ್ಣ ಲಕ್ಷಣಗಳೂ ಕಾಣುತ್ತಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಇಷ್ಟರಲ್ಲಾಗಲೇ ವಿಬಿ ಗ್ರಾಮ್ ಜಿ ಯೋಜನೆಯು ಗ್ರಾಮೀಣ ಕಾರ್ಮಿಕರಿಗೆ, ಗ್ರಾಮಗಳಿಗೆ ತಲುಪಿಸಲು ಬೇಕಾದ ಅಗತ್ಯ ರೂಪುರೇಷೆಗಳನ್ನು ಕೇಂದ್ರ ಸರಕಾರ ಸಿದ್ಧಪಡಿಸಬೇಕಿತ್ತು, ಆದರೆ ಇನ್ನೂ ಯಾವುದೇ ನಿಯಮಗಳು ರೂಪುಗೊಂಡಿಲ್ಲ ಎಂದು ಹೇಳಿದ್ದಾರೆ.

ನಿಧಿ ಹಂಚಿಕೆಯ ಬಗ್ಗೆ ಸ್ಪಷ್ಟತೆ ಇಲ್ಲ ಗ್ರಾಮ ಪಂಚಾಯತ್‌ಗಳನ್ನು ವರ್ಗೀಕರಿಸಲು ಯಾವುದೆ ಅಂತಿಮ ನಿಯತಾಂಕಗಳು ತಯಾರಾಗಿಲ್ಲ, ಸಾಮಾಜಿಕ ಲೆಕ್ಕ ಪರಿಶೋಧನೆಯಂತಹ ಪ್ರಮುಖ ಪ್ರಕ್ರಿಯೆಗಳು ವ್ಯಾಖ್ಯಾನಿಸಲ್ಪಟ್ಟಿಲ್ಲ ಎಂದು ಪ್ರಿಯಾಂಕ್ ಖರ್ಗೆ ಕೇಂದ್ರ ಸರಕಾರದ ನಿರ್ಲಕ್ಷ್ಯದ ವಿರುದ್ಧ ಕಿಡಿಕಾರಿದ್ದಾರೆ. ಅತ್ಯಂತ ಕೆಟ್ಟ ಸಮಯದಲ್ಲಿ ಗ್ರಾಮೀಣ ಉದ್ಯೋಗದ ಬಗೆಗಿನ ಈ ನಿರ್ವಾತವು ತಲೆದೋರಿದೆ. ಈ ಬೇಸಿಗೆಯ ಸಮಯವು ಗ್ರಾಮೀಣ ಜನರಿಗೆ ಉದ್ಯೋಗದ ಗರಿಷ್ಠ ಬೇಡಿಕೆಯ ತಿಂಗಳುಗಳಾಗಿವೆ, ಉದ್ಯೋಗ ಖಾತರಿಗೆ ಹೆಚ್ಚಿನ ಅವಲಂಬನೆ ಹೊಂದುವ ಸಮಯವಿದು, ಇಂತಹ ಸಮಯದಲ್ಲೆ ಉದ್ಯೋಗ ಒದಗಿಸುವ ಯೋಜನೆಯು ಸ್ಥಗಿತಗೊಂಡಿದೆ ಎಂದು ಅವರು ಟೀಕಿಸಿದ್ದಾರೆ.



ಅನುಮೋದನೆಗಳು ವಿಳಂಬವಾಗುತ್ತಿವೆ ಮತ್ತು ಬೇಡಿಕೆಯ ಹೊರತಾಗಿಯೂ ಕುಟುಂಬಗಳು ಉದ್ಯೋಗವನ್ನು ಪಡೆಯಲಾಗುತ್ತಿಲ್ಲ ಎಂಬ ವರದಿಗಳು ಬಂದಿವೆ. ಕೇಂದ್ರ ಸರಕಾರವು ಕಾನೂನಾತ್ಮಕ ಉದ್ಯೋಗದ ಖಾತರಿಯನ್ನು ತೆಗೆದು ನಿಯಮ ಆಧಾರಿತ ಹಂಚಿಕೆಯಾಗಿ ಬದಲಾವಣೆ ಮಾಡಿರುವುದು ನಕಾರಾತ್ಮಕ ಪರಿಣಾಮವನ್ನು ತೋರಿಸಲು ಪ್ರಾರಂಭಿಸಿದೆ ಎಂದು ಪ್ರಿಯಾಂಕ್ ಖರ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದರ ಜೊತೆಗೆ, ಕೃಷಿ ಚಟುವಟಿಕೆಗಳ ಅವಧಿಗಳಲ್ಲಿ 60 ದಿನಗಳ ಕಡ್ಡಾಯ ಸ್ಥಗಿತವು ಗ್ರಾಮೀಣ ಜನರು ಉದ್ಯೋಗ ಪಡೆಯುವ ಅವಕಾಶವನ್ನು ಮತ್ತಷ್ಟು ನಿರ್ಬಂಧಿಸುತ್ತದೆ. ಕೇಂದ್ರದ ಬಿಜೆಪಿ ಸರಕಾರ ವಿಬಿ ಗ್ರಾಮ್ ಜಿ ಯೋಜನೆಯು ಗ್ರಾಮೀಣ ಭಾರತವನ್ನು ಪರಿವರ್ತಿಸುತ್ತದೆ ಎಂದು ಹೇಳಿಕೊಂಡಿತು.

## ಹಿಂದಿ ಭಾಷಾ ವಿಷಯಕ್ಕೆ ಅಂಕದ ಬದಲಿಗೆ ಗ್ರೇಡ್ ನೀಡುವ ನಿರ್ಧಾರಕ್ಕೆ ಖಂಡನೆ

### ■ ಕೂಡಲೇ ಈ ದ್ವಿಭಾಷ ನೀತಿಯನ್ನು ಕೈಬಿಟ್ಟು ಮೊದಲಿನ ಪದ್ಧತಿಯನ್ನೇ ಅನುಸರಿಸಬೇಕು: ಹೊರಟ್ಟಿ

• ಉದಯವಾಹಿನಿ, ಬಾಗಲಕೋಟೆ

SSLC ಪರೀಕ್ಷೆಯಲ್ಲಿ ತೃತೀಯ ಭಾಷೆ ಆಗಿರುವ ಹಿಂದಿ ಭಾಷಾ ವಿಷಯಕ್ಕೆ ನೀಡಲಾಗುತ್ತಿದ್ದ ಅಂಕ ಪದ್ಧತಿಯನ್ನು ತೆಗೆದು ಅದರ ಬದಲಿಗೆ ಗ್ರೇಡಿಂಗ್ ನೀಡಲು ರಾಜ್ಯಸರ್ಕಾರ ಕೈಗೊಂಡಿರುವ ನಿರ್ಧಾರಕ್ಕೆ ಸಭಾಪತಿ ಬಸವರಾಜ ಹೊರಟ್ಟಿ ಪ್ರತಿಕ್ರಿಯೆ ನೀಡಿದ್ದು, ರಾಜ್ಯ ಸರ್ಕಾರಕ್ಕೆ ಸಾಮಾನ್ಯ ಜ್ಞಾನವಿಲ್ಲ, ಈ ನೀತಿಯನ್ನು ಕೂಡಲೇ ಕೈಬಿಟ್ಟು ಮೊದಲಿನ ಪದ್ಧತಿಯನ್ನೆ ಅನುಸರಿಸಬೇಕು ಎಂದು ಕಿಡಿ ಕಾರಿದ್ದಾರೆ.

**ತೃತೀಯ ಭಾಷೆಗೆ ಗ್ರೇಡ್ ನೀಡುವ ಸರ್ಕಾರದ ನಿರ್ಣಯಕ್ಕೆ ಹೊರಟ್ಟಿ ಖಂಡನೆ:** ಮಾಧ್ಯಮಗಳೊಂದಿಗೆ ಮಾತನಾಡಿದ ಬಸವರಾಜ ಹೊರಟ್ಟಿ ಅವರು SSLC ಪರೀಕ್ಷೆಯಲ್ಲಿ ಹಿಂದಿ ಸೇರಿ ತೃತೀಯ ಭಾಷೆಗೆ ಗ್ರೇಡಿಂಗ್ ನೀಡುವ ಶಿಕ್ಷಣ ಇಲಾಖೆಯ ಧಿಡೀರ್ ನಿರ್ಧಾರ ಖಂಡನೀಯವಾಗಿದೆ. ಅಲ್ಲದೆ, ಕೆಲವೆಡೆ ಹಿಂದಿಯಲ್ಲೇ ಕನ್ನಡ ಸಂಸ್ಕೃತ, ಉರ್ದು, ಇಂಗ್ಲಿಷ್, ಮರಾಠಿ ಭಾಷೆಗಳಿವೆ ತೃತೀಯ ಭಾಷೆಗಳಾಗಿವೆ. ಅಲ್ಲದೆ, ಈಗಾಗಲೇ ಕಳೆದ ಒಂದು ವರ್ಷದಿಂದ ಶಿಕ್ಷಕರು ಮಕ್ಕಳಿಗೆ ಪಾಠ ಮಾಡಿದ್ದಾರೆ. ಆದರೆ, ಪರೀಕ್ಷೆಯ ಸಮಯದಲ್ಲಿ ತಜ್ಞರೊಂದಿಗೆ ಸಮಾಲೋಚನೆ ನಡೆಸದೇ ತೆಗೆದುಕೊಂಡಿರುವ ಸರ್ಕಾರದ ಈ ತರಾತುರಿಯ ನಿರ್ಧಾರದಿಂದಾಗಿ ಎಲ್ಲಾ ಭಾಷೆಗಳಿಗೂ ಹೊಡೆತ ಬೀಳಲಿದೆ. ಹಾಗಾಗಿ ಸರ್ಕಾರದ ಈ ನಿರ್ಣಯ ಸೂಕ್ತವಾಗಿಲ್ಲ ಎಂದು ತಿಳಿಸಿದ್ದಾರೆ. ಮುಂದುವರೆದು, ಸರ್ಕಾರ ಮಕ್ಕಳ ಕಲಿಕೆಯಲ್ಲಿ ಮೇಲೆ ದ್ವಿಭಾಷ ನೀತಿಯನ್ನು ಹೇರುವುದು ಸರಿಯಲ್ಲ. ಆಡಳಿತ ಭಾಷೆ ಮಾಡುವಂತೆ ನಾನು ಒತ್ತಾಯಿಸುವುದಿಲ್ಲ, ಆದಾಗ್ಯೂ, ಶಾಲಾ-ಕಾಲೇಜುಗಳಲ್ಲಿ ಕಲಿಯುವ ವಿಷಯದಲ್ಲಿ ಹೀಗೆ ಬದಲಾವಣೆ ಮಾಡುವುದು ಸೂಕ್ತವಲ್ಲ. ಅಲ್ಲದೆ, ಈಗ ಹಿಂದಿ ಭಾಷೆಗೆ ಅಂಕ ಪದ್ಧತಿಯನ್ನು ತೆಗೆದುಹಾಕಿ ಗ್ರೇಡ್ ನೀಡಿದ್ದಾರೆ. ಮುಂದೆ ಎಲ್ಲಾ ಭಾಷೆಗಳಿಗೂ ಗ್ರೇಡ್ ಬೇಕೆಂದು ಕೇಳುತ್ತಾರೆ, ಆಗ ನೀಡಲು ಆಗುತ್ತದೆಯೇ ಎಂದು ಪ್ರಶ್ನಿಸಿದ್ದಾರೆ.



**ಏನಿದು ಗ್ರೇಡಿಂಗ್ ನೀತಿ**

SSLC ಪರೀಕ್ಷೆಯಲ್ಲಿ ತೃತೀಯ ಭಾಷೆಯಾದ ಹಿಂದಿ, ಅರೇಬಿಕ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಮರಾಠಿ ಇತ್ಯಾದಿ ಅಂಕಗಳ ಅಂಕವನ್ನು ತೆಗೆದು ಹಾಕಿ ಅವುಗಳಿಗೆ ಗ್ರೇಡ್ ನೀಡುವ ನೀತಿಯನ್ನು ಶಿಕ್ಷಣ ಇಲಾಖೆ ಘೋಷಿಸಿದೆ. ಇದರ ಅನ್ವಯ ಈ ತೃತೀಯ ಭಾಷೆಯ ಅಂಕಗಳನ್ನು ಒಟ್ಟು ಫಲಿತಾಂಶಕ್ಕೆ ಪರಿಗಣಿಸಲಾಗುವುದಿಲ್ಲ. ಬದಲಾಗಿ ಅಂಕಗಳ ಆಧಾರದಲ್ಲಿ A, B, C ಅಥವಾ D ಎಂದು ಗ್ರೇಡ್ ನೀಡಲಾಗುವುದು. ಇದು SSLC ಫಲಿತಾಂಶದಲ್ಲಿ ಈ ಮೊದಲು ಇದ್ದ 625 ಅಂಕಗಳನ್ನು ಗಣನೀಯವಾಗಿ ಕಡಿಮೆ ಮಾಡಿದ್ದು, ಕೇವಲ 525 ಅಂಕಗಳಿಗೆ ಪರೀಕ್ಷೆ ನಡೆಯಲಿದ್ದು, ಈ ನಿರ್ಧಾರ ಈ ವರ್ಷದ SSLCಪರೀಕ್ಷೆಯಿಂದಲೇ ಜಾರಿಗೆ ಬರಲಿದೆ.

ಅಲ್ಲದೆ, ದಶಕಗಳಿಂದ ಜಾರಿಯಲ್ಲಿರುವ ನೀತಿಯನ್ನು ಬದಲಾಯಿಸುವುದು ಸರಿಯಿಲ್ಲ ಎಂದಿರುವ ಹೊರಟ್ಟಿ, ಈ ಕುರಿತು 1960ರಿಂದ ಬಂದ ಪದ್ಧತಿ ಬದಲಿಸುತ್ತಿರುವುದು ಸರಿಯಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ಇಂಗ್ಲಿಷ್ ಹೊರತುಪಡಿಸಿದರೆ ಹಿಂದಿಯನ್ನೇ ಭಾಷೆಯನ್ನು ಹೆಚ್ಚಾಗಿ ಮಾತನಾಡುತ್ತಾರೆ. ಹಾಗಾಗಿ ಈ ನಿರ್ಣಯವನ್ನು ಕೂಡಲೇ ಕೈಬಿಟ್ಟು ಮೊದಲಿದ್ದ ನೀತಿಯನ್ನೇ ಅನುಸರಿಸುವಂತೆ ಈಗಾಗಲೇ ಸರ್ಕಾರದ ಮುಖ್ಯ ಕಾರ್ಯದರ್ಶಿ, ಶಿಕ್ಷಣ ಇಲಾಖೆ ಕಾರ್ಯದರ್ಶಿಗಳೊಂದಿಗೆ ಮಾತನಾಡಿದ್ದೇನೆ. ಇದ ಜೊತೆಗೆ ಈ ಕುರಿತು ಸರ್ಕಾರಕ್ಕೆ ಪತ್ರ ಬರೆಯುವ ಮೂಲಕ ಮುಖ್ಯಮಂತ್ರಿಗಳಿಗೆ ಒತ್ತಾಯಿಸುತ್ತೇನೆ ಎಂದು ತಿಳಿಸಿದ್ದಾರೆ.

| ಈ ದಿನದ ದರ | |
| --- | --- |
| ಪೆಟ್ರೋಲ್: | 102.96 ₹/L |
| ಡೀಸೆಲ್ : | 90.99 ₹/L |
| ಬಂಗಾರ: | ₹14,951/Gram24ct ₹13,705/Gram22ct |
| ಬೆಳ್ಳಿ: | ₹250.00/Gram |

# ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ ಪ್ರಯಾಣ ಮತ್ತಷ್ಟು ತುಟ್ಟಿ, ಟೋಲ್ ದರ ಹೆಚ್ಚಾಯ್ತು

• ಉದಯವಾಹಿನಿ, ಬೆಂಗಳೂರು

ರಾಜ್ಯದ ಬ್ಯುಸಿ ಹೆದ್ದಾರಿಯಾಗಿರುವ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಸಂಚರಿಸುವ ವಾಹನ ಸವಾರರಿಗೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತೊಂದು ದರ ಏರಿಕೆಯ ಶಾಕ್ ನೀಡಿದೆ. ಪ್ರತಿ ವರ್ಷದಂತೆ ಈ ವರ್ಷವೂ ಟೋಲ್ ಶುಲ್ಕವನ್ನು ಶೇ. 3 ರಷ್ಟು ಹೆಚ್ಚಳ ಮಾಡಲಾಗಿದ್ದು, ಇನ್ಮುಂದೆ ಎಕ್ಸ್‌ಪ್ರೆಸ್ ವೇ ಪ್ರಯಾಣ ಮತ್ತಷ್ಟು ದುಬಾರಿ ಎನಿಸಲಿದೆ.

ಏಪ್ರಿಲ್ 1 ರಿಂದ ಹೊಸ ಟೋಲ್ ದರ ಅನ್ವಯವಾಗಲಿದೆ. ಪ್ರತಿ ವರ್ಷ ಏಪ್ರಿಲ್ 1 ರಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಶೇ. 3 ರಿಂದ ಶೇ.5 ರಷ್ಟು ಬೆಲೆ ಹೆಚ್ಚಳ ಮಾಡಲು ಅವಕಾಶವಿದೆ. ಅದರಂತೆಯೇ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಈ ಬಾರಿ ಶೇ. 3 ರಷ್ಟು ಬೆಲೆ ಹೆಚ್ಚಳ ಮಾಡಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಆದೇಶ ಹೊರಡಿಸಿದೆ. ನೂತನ ಟೋಲ್ ದರ ವಾಹನ ಮಾದರಿಯನ್ನು ಆಧರಿಸಿ 5 ರೂ. ನಿಂದ 25 ರೂ.ವರೆಗೆ ಹೆಚ್ಚಳವಾಗಿದೆ.

ಕೆಂಗೇರಿ ಬಳಿಯ ಕಣಮಿಣಿಕೆಯಿಂದ ಮಂಡ್ಯ ಜಿಲ್ಲೆಯ ನಿಡಘಟ್ಟ ನಿಡಘಟ್ಟದಿಂದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಗಣಂಗೂರು ಟೋಲ್‌ವರೆಗೆ ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ಪರಿಷ್ಕೃತ ದರವನ್ನು ಎನ್‌ಎಚ್‌ಎಐ ಪ್ರಕಟಿಸಿದೆ. ಟೋಲ್ ಮೂರು ಬಾರಿ ಹೆಚ್ಚಳವಾಗಿದೆ.

# ದಾಸರ ಪದಗಳ ಗಾಯನ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಪವಮಾನಪುರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀಶ್ರೀ ಸುಬುಧೇಂದ್ರತೀರ್ಥ ಶ್ರೀ ಪಾದಂಗಳವರ ಆದೇಶದಂತೆ ಶ್ರೀ ಮಠದ ವಿಚಾರಣಾಕರ್ತರಾದ ಶ್ರೀ ಗಿರಿರಾಜಾಚಾರ್ ಅವರ ನೇತೃತ್ವದಲ್ಲಿ ಏಪ್ರಿಲ್ 2, ಗುರುವಾರ ಸಂಜೆ 7–00ಕ್ಕೆ ವಿದುಷಿ ಶ್ರೀಮತಿ ಅನುಕೃಪ ಆರ್. ಪುರೋಹಿತ್ ಇವರಿಂದ ದಾಸರ ಪದಗಳ ಗಾಯನ. ಕೀಬೋರ್ಡ್ ಶ್ರೀಬಿಆರ್ ಪ್ರಕಾಶ್, ತಬಲಾ ಶ್ರೀ ಶ್ರೀನಿವಾಸ ಕಾಖಂಡಕಿ. ಸ್ಥಳ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಬೆಂಗಳೂರು

# ಉ.ಕರ್ನಾಟಕದ 4 ಜಿಲ್ಲೆಗಳಲ್ಲಿ ಸರ್ಕಾರಿ ಕಚೇರಿ ಸಮಯ ಬದಲಾವಣೆ

• ಉದಯವಾಹಿನಿ, ಬೆಂಗಳೂರು

ಬಿಸಿಲಿನ ತಾಪಮಾನ ಹೆಚ್ಚಾಗಿರುವುದಿಂದ ಉತ್ತರ ಕರ್ನಾಟಕ ಭಾಗದ ನಾಲ್ಕು ಜಿಲ್ಲೆಗಳಲ್ಲಿ ಸರ್ಕಾರಿ ಕಚೇರಿ ಸಮಯದಲ್ಲಿ ಬದಲಾವಣೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಬೆಳಗಾವಿ ವಿಭಾಗದ ವಿಜಯಪುರ, ಬಾಗಲಕೋಟೆ ಹಾಗೂ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗಿದ್ದು, ನೌಕರರು ಕರ್ತವ್ಯ ನಿರ್ವಹಿಸುವಲ್ಲಿ ತೊಂದರೆ ಎದುರಿಸುತ್ತಿದ್ದಾರೆ. ಹೀಗಾಗಿ ಮಾನವೀಯ ದೃಷ್ಟಿಯಿಂದ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಬೆಳಿಗ್ಗೆ 8 ರಿಂದ ಮಾಧ್ಯಾಹ್ನ 1:30ರವರೆಗೆ ಕಚೇರಿಗಳಲ್ಲಿ ಕೆಲಸ ನಿರ್ವಹಿಸಲು ಸೂಚಿಸಲಾಗಿದೆ. ಇದರ ಹೊರತಾಗಿ ತುರ್ತು ಸಂದರ್ಭಗಳಲ್ಲಿ ಸಮಯದ ಪರಿವೇ ಇಲ್ಲದಂತೆ ಕೆಲಸ ಮಾಡಬೇಕು.

ಸಾಮಾನ್ಯ ಸಂದರ್ಭಗಳಲ್ಲಿ ಮಾತ್ರ ಕೆಲಸದ ವೇಳೆಯಲ್ಲಿ ಬದಲಾವಣೆ ಮಾಡಲಾಗಿದೆ. ಇದು ಸಮಯ ಬದಲಾವಣೆ ವೇಳಾಪಟ್ಟಿ ಕೇವಲ ಏಪ್ರಿಲ್, ಮೇ ತಿಂಗಳಿಗೆ ಮಾತ್ರ ಅನ್ವಯವಾಗಲಿದೆ ಎಂದು ತಿಳಿಸಿದೆ.

ಈ ಎಲ್ಲಾ ಜಿಲ್ಲೆಗಳಲ್ಲಿನ ಸರ್ಕಾರಿ ನೌಕರರು ಬದಲಾದ ಸಮಯದಲ್ಲಿ ಎಂದಿನಂತೆ ಯಾವುದೇ ಲೋಪ/ಅಡೆತಡೆಯಿಲ್ಲದೆ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕು. ಸಾರ್ವಜನಿಕರಿಗೆ ಯಾವುದೇ ಅನಾನುಕೂಲತೆಯಾಗದಂತೆ ಮತ್ತು ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತುರ್ತು ಸಂದರ್ಭದಲ್ಲಿ ಯಾವುದೇ ಕಾರ್ಯವನ್ನು ನಿರ್ವಹಿಸಲು ನಿರ್ದೇಶಿಸಿದಲ್ಲಿ ಸಮಯದ ಪರಿಮಿತಿಯಿಲ್ಲದೆ ಕರ್ತವ್ಯ ನಿರ್ವಹಿಸಬೇಕು ಎಂದರು.

# ಬಟ್ಟೆ ಮಾರಾಟ ನೆಪದಲ್ಲಿ ಡ್ರಗ್ ಪೆಡ್ಲಿಂಗ್ ನೈಜೀರಿಯಾ ಪ್ರಜೆ ಅರೆಸ್ಟ್

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಬಟ್ಟೆ ಮಾರಾಟ ನೆಪದಲ್ಲಿ ಡ್ರಗ್ ಪೆಡ್ಲಿಂಗ್ ಮಾಡುತ್ತಿದ್ದ ವ್ಯಕ್ತಿಯನ್ನು ಅರೆಸ್ಟ್ ಮಾಡಿ, ಯಲಹಂಕ ಪೊಲೀಸರು 2 ಕೋಟಿ ರೂ. ಮೌಲ್ಯದ ಮಾದಕ ವಸ್ತು ಜಪ್ತಿ ಮಾಡಿದ್ದಾರೆ. ನೈಜೀರಿಯಾ ಮೂಲದ ಸ್ಯಾಮುಯೆಲ್ ಇಕ್ಕೆನಾ ಬಂಧಿತ ಆರೋಪಿ. ಬಟ್ಟೆ ಮಾರಾಟದ ನೆಪದಲ್ಲಿ ಮಾದಕವಸ್ತು ಡೀಲಿಂಗ್ ಮಾಡುತ್ತಿದ್ದ ಎನ್ನಲಾಗಿದೆ. 2012ರಲ್ಲಿ ಬ್ಯುಸಿನೆಸ್ ವೀಸಾದಡಿಯಲ್ಲಿ ಭಾರತಕ್ಕೆ ಬಂದಿದ್ದ ಈತ ಬಟ್ಟೆ ಮಾರಾಟದ ನೆಪದಲ್ಲಿ ಮಾದಕವಸ್ತು ಡೀಲಿಂಗ್ ಮಾಡುತ್ತಿದ್ದ. ದೆಹಲಿ ಮತ್ತು ಮುಂಬೈನಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದ ಸ್ಯಾಮುಯೆಲ್, ಕಳೆದ ವರ್ಷ ಬೆಂಗಳೂರಿಗೆ ಬಂದಿದ್ದ. ಬನ್ನೇರುಘಟ್ಟ ಬಳಿ ಬಟ್ಟೆ ವ್ಯಾಪಾರ ಮಾಡುವಾಗ 50 ಸಾವಿರ ರೂ. ಕೊಟ್ಟು ಡ್ರಗ್ ಖರೀದಿಸಿದ್ದಾಗಿ ವಿಚಾರಣೆ ವೇಳೆ ತಿಳಿಸಿದ್ದಾನೆ.



ಸದ್ಯ ಬಂಧಿತನಿಂದ 2 ಕೋಟಿ ರೂ. ಮೌಲ್ಯದ 2ಕೆ.ಜಿ ಎಂಡಿಎಂಎ ಮಾದಕವಸ್ತು ವಶಪಡಿಸಿಕೊಳ್ಳಲಾಗಿದ್ದು, ಯಲಹಂಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭಾರತಿ ನಗರ, ಜಾಲಹಳ್ಳಿ ಮತ್ತು ಪುಲಕೇಶಿ ನಗರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿಯೂ ಲಕ್ಷಾಂತರ ರೂ. ಮೌಲ್ಯದ ಗಾಂಜಾವನ್ನು ಜಪ್ತಿ ಮಾಡಲಾಗಿದೆ.

# ಕೇಂದ್ರದ ವಿರುದ್ಧ ಡಿಸಿಎಂ ಡಿ.ಕೆ. ಶಿವಕುಮಾರ್ ವಾಗ್ದಾಳಿ

• ಉದಯವಾಹಿನಿ,ಬೆಂಗಳೂರು

ಕೇಂದ್ರ ಬಿಜೆಪಿ ಸರ್ಕಾರ ಜನರಿಗೆ ಉಜ್ವಲ ಯೋಜನೆ ಬದಲಾಗಿ ಸೌದೆ ಒಲೆ ಯೋಜನೆ ನೀಡಿದೆ. ಅಚ್ಛೇ ದಿನ ಏನಾಯ್ತು? ಈಗ ಇರುವುದನ್ನು ಕಚ್ಚಾ ದಿನ ಎಂದು ಹೇಳಬೇಕಾ ಎಂದು ಬಿಜೆಪಿ ನಾಯಕರನ್ನು ಕೇಳಬಯಸುತ್ತೇನೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ವಾಗ್ದಾಳಿ ನಡೆಸಿದರು. ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ನಡೆದ ಜಂಟಿ ಮಾಧ್ಯಮಗೋಷ್ಠಿಯಲ್ಲಿ ಅವರು ಮಾತನಾಡಿದರು. ಪಂಚರಾಜ್ಯ ಚುನಾವಣೆ ನಡೆಯುತ್ತಿದೆ. ಜನರು ಪರದಾಡುತ್ತಿದ್ದು, ಹೋಟೆಲ್‌ಗಳು ಬಂದ್ ಆಗುತ್ತಿವೆ. ಜನ ವಿದ್ಯುತ್ ಒಲೆ ಬಳಸುವ ಅನಿವಾರ್ಯತೆ ಎದುರಾಗಿದೆ. ಕಳೆದ ಹದಿನೈದು ದಿನಗಳಿಂದ ರಾಜ್ಯದಲ್ಲಿ ವಿದ್ಯುತ್ ಬಳಕೆ ಪ್ರಮಾಣ 10% ಏರಿಕೆಯಾಗಿದೆ.

ಕೇಂದ್ರ ಸರ್ಕಾರ ಜನರಿಗೆ ಸೌದೆ ಭಾಗ್ಯ ನೀಡಿದ್ದು, ಎಲ್ಲಿಂದ ಸೌದೆ ಒದಗಿಸುವುದು ಎಂದು ಲೇವಡಿ ಮಾಡಿದರು.



ಉದಯವಾಹಿನಿ ಚಿತ್ರ

ಯುದ್ಧಗಳ ನೆಪ, ಕೇಂದ್ರ ಸರ್ಕಾರದ ತಪ್ಪು ನಿರ್ಧಾರ, ನೀತಿಗಳಿಂದಾಗಿ ದೇಶದ ಜನ ಬೆಲೆ ಏರಿಕೆಯಿಂದ ನರಳುತ್ತಿದ್ದಾರೆ. ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ಮಾತ್ರವಲ್ಲ, ಟೋಲ್ ಶುಲ್ಕ, ರೈಲ್ವೇ ಟಿಕೆಟ್ ದರ ಎಲ್ಲವೂ ಹೆಚ್ಚಾಗಿದೆ. ಕೆಲವು ಅನಿವಾರ್ಯ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಬೆಲೆ ಏರಿಕೆ ತೀರ್ಮಾನ ಮಾಡಿದಾಗ ಯಾವ ರೀತಿ ಟೀಕೆ ಟಿಪ್ಪಣಿ ಬಂದಿವೆ ಎಂದು ಎಲ್ಲರಿಗೂ ಗೊತ್ತಿದೆ. ಸಾಮಾನ್ಯ ಜನರ ಮೇಲೆ ಕೇಂದ್ರ ಸರ್ಕಾರ ಬೆಲೆ ಏರಿಕೆ ಯುದ್ಧ ಮಾಡುತ್ತಿದೆ ಎಂದು ಟೀಕಿಸಿದರು. ಜನರನ್ನು ಕೇಂದ್ರ ಸರ್ಕಾರ ಫೂಲ್ ಮಾಡುತ್ತಿದೆ.

ನಾವು ಪಾದಯಾತ್ರೆ ಮಾಡಿದಾಗ ಈ ಬೆಲೆ ಏರಿಕೆ ಸಮಸ್ಯೆಯಿಂದ ಜನರು ಕಂಗೆಟ್ಟಿದ್ದು, ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ನಮ್ಮ ಸರ್ಕಾರ ಐದು ಗ್ಯಾರಂಟಿ ಯೋಜನೆ ನೀಡಿ ಅವರಿಗೆ ಶಕ್ತಿ ತುಂಬಿದ್ದೇವೆ. ಈಗ ನಮ್ಮ ಗ್ಯಾರಂಟಿ ಯೋಜನೆಗಳು ಜನರಿಗೆ ಆರ್ಥಿಕವಾಗಿ ರಕ್ಷಣೆ ನೀಡಿವೆ ಎಂದು ಹೇಳಿದರು.

900 ಔಷಧಗಳ ದರ ಏರಿಕೆ ಮಾಡಲಾಗಿದೆ. 12% ಜಿಎಸ್‌ಟಿ ವಿಧಿಸಲಾಗಿದೆ. ಎನ್‌ಪಿಪಿಎ ಬೆಲೆ ಏರಿಕೆ ಮಾಡಿ ಇವುಗಳಿಗೆ ಶೇ 10.7 ರಷ್ಟು ಇದ್ದ ತೆರಿಗೆಯನ್ನು ಶೇ.12ಕ್ಕೆ ಏರಿಕೆ ಮಾಡಲಾಗಿದೆ. ಅಗತ್ಯ ವಸ್ತುಗಳಾದ ಪ್ಲಾಸ್ಟಿಕ್ ಪೈಪ್ ಸೇರಿದಂತೆ ಇತರೇ ವಸ್ತುಗಳ ಬೆಲೆ ಟನ್‌ಗೆ 7 ಸಾವಿರ ಹೆಚ್ಚಳ ಮಾಡಲಾಗಿದೆ.

# ಎಸ್‌ಟಿ ಮತ್ತೆ ಬಿಜೆಪಿಗೆ?


ಉದಯವಾಹಿನಿ ಚಿತ್ರ



ಎಸ್.ಟಿ.ಸೋಮಶೇಖರ್ ಅವರು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದು, ಸ್ಪಷ್ಟನೆ ನೀಡುವಂತೆ ಕೋರಿದ್ದಾರೆ.ಬಿಜೆಪಿ ಉಚ್ಚಾಟಿತ ಶಾಸಕ ಎಸ್.ಟಿ ಸೋಮಶೇಖರ್ ಮತ್ತೆ ಬಿಜೆಪಿಗೆ ಮರಳುತ್ತಾರಾ ಎಂಬ ಚರ್ಚೆ ಜೋರಾಗಿದೆ. ಮಾಜಿ ಸಿಎಂ ಯಡಿಯೂರಪ್ಪಗೆ ಪತ್ರ ಬರೆದ ಸೋಮಶೇಖರ್ ಸಾಲು ಸಾಲು ಪ್ರಶ್ನೆ ಮಾಡಿ ಉತ್ತರಕ್ಕೆ ಆಗ್ರಹಿಸಿದ್ದಾರೆ.



## ಬಿಎಸ್‌ವೈಗೆ ಪತ್ರ ಬರೆದು 13 ಪ್ರಶ್ನೆ ಕೇಳಿದ ಬಿಜೆಪಿ ಉಚ್ಚಾಟಿತ ಶಾಸಕ ಎಸ್.ಟಿ.ಸೋಮಶೇಖರ್

ಎಸ್ ಟಿ ಆಕ್ರೋಶ

### ಸ್ಪೀಕರ್‌ಗೆ ಪತ್ರ

**ಯಡಿಯೂರಪ್ಪಗೆ ಪತ್ರ ಬರೆದ ವಿಚಾರವಾಗಿ ಪ್ರತಿಕ್ರಿಯಿಸಿದ ಎಸ್.ಟಿ.ಸೋಮಶೇಖರ್, ನಮ್ಮ ಕ್ಷೇತ್ರದಲ್ಲಿ ನೈಸ್ ರಸ್ತೆ ಬಂದು ಮೂವತ್ತು ವರ್ಷ ಆಗಿದೆ. ನಮ ಭಾಗದಲ್ಲಿ ನೈಸ್ ಸೇತುವೆಗಳು ಚಿಕ್ಕದಾಗಿವೆ, ನಾವೂ ಖೇಣಿಗೆ ಹೇಳಿ ಸಾಕಾಯ್ತು, ಅವರು ಜಗ್ಗುತ್ತಿಲ್ಲ. ಭೂಮಾಲೀಕರಿಗೆ ಪರಿಹಾರನೂ ಕೊಡ್ತಿಲ್ಲ, ನಮ್ಮ ಕ್ಷೇತ್ರದಲ್ಲಿ ನೈಸ್ ಲೇಔಟ್ ಮಾಡ್ತಿದೆ. ಇದನ್ನು ರದ್ದು ಮಾಡಿ ಅಂತ ಅಸೆಂಬ್ಲಿಯಲ್ಲಿ ಪ್ರತೀ ಸಲ ಹೇಳ್ತನೇ ಬಂದಿದ್ದೇನೆ. ಮೊನ್ನೆಯೂ ಸದನದಲ್ಲಿ ನೈಸ್ ಬಗ್ಗೆ ಮಾತಾಡಿದೆ. ಅದಕ್ಕೆ ರುದ್ರೇಶ್ ಕಾಮೆಂಟ್ ಮಾಡಿದ್ದಾನೆ. ನೈಸ್ ಸಂಸ್ಥೆಯಿಂದ ಆಗಿರುವ ವ್ಯತ್ಯಾಸಗಳನ್ನು ನಾನು ಪ್ರಸ್ತಾಪ ಮಾಡಿದ್ರೆ, ಇವರು ಹೊರಗಡೆ ಮಾತಾಡ್ತಾರೆ.**

**ನಾನು ಮನಸು ಮಾಡಿದ್ರು, ಉಚ್ಚಾಟನೆ ರದ್ದು ಮಾಡಿ ಮೂರು ದಿನದಲ್ಲಿ ವಾಪಸ್ ಬರಬಲ್ಲೆ. ಮತ್ತೆ ಯಾಕೆ ಬರ್ತೀರ? ಯಡಿಯೂರಪ್ಪ, ವಿಜಯೇಂದ್ರ ಬೂಟ್ ನೆಕ್ಕೋಕೆ ಬರ್ತೀರಾ ಅಂತ ಕೇಳ್ತಾನೆ ರುದ್ರೇಶ್.**

ಬಿವೈವಿ ವಿರುದ್ಧ ಎಸ್ ಟಿ ಸೋಮಶೇಖರ ಆಕ್ರೋಶ

• ಉದಯವಾಹಿನಿ, ಬೆಂಗಳೂರು

ಬಿಜೆಪಿ ಉಚ್ಚಾಟಿತ ಶಾಸಕ ಎಸ್.ಟಿ. ಸೋಮಶೇಖರ್ ಮತ್ತೆ ಬಿಜೆಪಿ ಮರುಳುತ್ತಾರಾ ಎಂಬ ಬಗ್ಗೆ ಚರ್ಚೆ ನಡೆಯುತ್ತಿದೆ. ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ದೀರ್ಘ ಪತ್ರ ಬರೆದಿದ್ದಾರೆ. ಪತ್ರದಲ್ಲಿ ಅವರು ಯಡಿಯೂರಪ್ಪ ಅವರಿಗೆ 13 ಪ್ರಶ್ನೆಗಳನ್ನು ಕೇಳಿದ್ದಾರೆ. ಇದು

ರಾಜ್ಯ ರಾಜಕಾರಣದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿದೆ. ಬಿಜೆಪಿ ಉಚ್ಚಾಟಿತ ಶಾಸಕ ಎಸ್.ಟಿ.ಸೋಮಶೇಖರ್ ಅವರು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದು 13 ಪ್ರಶ್ನೆಗಳನ್ನು ಕೇಳಿ ಉತ್ತರ ಕೋರಿದ್ದಾರೆ.

ಬಿಎಸ್‌ವೈ ಆಪ್ತ ರುದ್ರೇಶ್ ವಿರುದ್ಧ ಪತ್ರದಲ್ಲಿ ದೂರಿದ್ದಾರೆ. ಜೊತೆಗೆ, ಇತ್ತೀಚೆಗೆ ತಮ್ಮ ವಿರುದ್ಧ ರುದ್ರೇಶ್ ನೀಡಿರುವ ಹೇಳಿಕೆಗೆ ಯಡಿಯೂರಪ್ಪ ಅವರಿಂದ ಸ್ಪಷ್ಟನೆ ಕೋರಿದ್ದಾರೆ. ಯಡಿಯೂರಪ್ಪ ಕೊಡುವ ಸ್ಪಷ್ಟನೆಯ ಬಳಿಕ ಮುಂದಿನ ನಿರ್ಧಾರ ಎಂದು ಸೋಮಶೇಖರ್ ತಿಳಿಸಿದ್ದಾರೆ.

ನಾನು ಯಾವುದೇ ಆಮಿಷ, ಅಪೇಕ್ಷೆ ಇಲ್ಲದೇ ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿದ್ದೇನೆ. ನಮ್ಮ ಸಹಕಾರದಿಂದ ನೀವು ಸಿಎಂ ಆಗಿದ್ದೀರಿ. ನನ್ನನ್ನು ಸಚಿವರಾಗಿ ಮಾಡಿದ್ದಕ್ಕೆ ನಿಮ್ಮ ಮೇಲೆ ಗೌರವ ಇದೆ. ಮತ್ತೆ 2023ಕ್ಕೆ ಬಿಜೆಪಿಯಿಂದಲೇ ಸ್ಪರ್ಧಿಸಿ ಗೆದ್ದಿದ್ದೇನೆ. ಕ್ಷೇತ್ರದಲ್ಲಿ ಸಮಸ್ಯೆ ಆದಾಗ ನನ್ನ ಮಗ ರಾಜ್ಯಾಧ್ಯಕ್ಷ ಆಗ್ತಾನೆ, ಸರಿಪಡಿಸ್ತಾನೆ ಪಕ್ಷ ಬಿಡಬೇಡಿ ಅಂತ ನೀವೇ ಹೇಳಿದ್ರಿ. ಆದರೆ ಪಕ್ಷದಿಂದ ಉಚ್ಚಾಟನೆ ಮಾಡಿದ್ರೂ ವಾಪಸ್ ತೆಗೆದುಕೊಳ್ಳಲಿಲ್ಲ. ನೈಸ್ ವಿಚಾರವಾಗಿ ಸದನದಲ್ಲಿ ಚರ್ಚೆ ಮಾಡಿದ್ದೆ, ಆದ್ರೆ ರುದ್ರೇಶ್ ಸುದ್ದಿಗೋಷ್ಠಿ ಕರೆದು ಯಾರ ಬೂಟು ನೆಕ್ಕಲು ಬರುತ್ತಿರಾ ಅಂತ ಹೇಳಿಕೆ ನೀಡಿದ್ದಾನೆ. ಈ ಕ್ಷೇತ್ರದಲ್ಲಿ ಆರು ಬಾರಿ ನಿಂತು, 4 ಬಾರಿ ಗೆದ್ದಿದ್ದೇನೆ. ನನ್ನ ಬಗ್ಗೆ ಇಷ್ಟು ಅಗೌರವವಾಗಿ ಮಾತನಾಡಿದ್ದು ಸರಿಯಲ್ಲ ಎಂದು ಸೋಮಶೇಖರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.ಇದೇ ವೇಳೆ ಯಡಿಯೂರಪ್ಪ ವಿರುದ್ಧ 13 ಪ್ರಶ್ನೆಗಳನ್ನು ಕೇಳಿದ್ದಾರೆ.

ಯಾವುದೇ ವ್ಯಕ್ತಿ ಬಿಜೆಪಿಗೆ ಬರಬೇಕೆಂದರೆ ಬೂಟ್ ನೆಕ್ಕಿ ಬರಬೇಕಾ?, ಬೂಟ್ ನೆಕ್ಕುವ ಸಂಸ್ಕೃತಿ ಬಿಜೆಪಿ ಒಳಗೆ ಇದೆಯಾ?, ಬಿಜೆಪಿಯಲ್ಲಿ ಬೂಟ್ ನೆಕ್ಕುವವರಿಗೆ ಮಾತ್ರ ಅವಕಾಶವೇ, ನಾನು ಯಾರ ಬೂಟನ್ನೂ ನೆಕ್ಕಿಲ್ಲ ಎನ್ನುವ ಕಾರಣಕ್ಕೆ ನನ್ನನ್ನು ಅಮಾನತು ಮಾಡಲಾಯಿತೇ?, ನಾನು ಒಂದು ವೇಳೆ ಬಿಜೆಪಿಗೆ ಮರಳಬೇಕು ಎಂದರೆ ನಿಮ್ಮ ಬೂಟ್ ನೆಕ್ಕಬೇಕೇ?. ನಿಮ್ಮ ಪುತ್ರ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರರ ಬೂಟ್ ನೆಕ್ಕಬೇಕೇ ಎಂದು ಖಾರವಾಗಿ ಕೇಳಿದ್ದಾರೆ.

ನೈಸ್ ದತ್ತು ಪುತ್ರ ರುದ್ರೇಶ್‌ಗೆ ರಾಜ್ಯಾಧ್ಯಕ್ಷರಾದ ವಿಜಯೇಂದ್ರ ಅವರು ಪಾರ್ಟಿಯ ಸಂಪೂರ್ಣ ಜವಾಬ್ದಾರಿ ನೀಡಿದ್ದಾರಾ?. ಕರ್ನಾಟಕ ಬಿಜೆಪಿಯನ್ನು ಮುನ್ನಡೆಸುತ್ತಿರೋದು ವಿಜಯೇಂದ್ರ ಅವರಾ ಅಥವಾ ನೈಸ್ ದತ್ತು ಪುತ್ರನೋ?.

ನೈಸ್‌ನಿಂದಾದ ಸಮಸ್ಯೆ ಬಗ್ಗೆ ಸದನದಲ್ಲಿ ನಾನು ರೈತರ ಪರ ಪ್ರಶ್ನೆ ಮಾಡಿದರೆ ರುದ್ರೇಶ್ ಎನ್ನುವ ಕ್ಷುದ್ರಗ್ರಹಕ್ಕೆ ಯಾಕೆ ಉರಿ? ಇಂತಹ ಕ್ಷುದ್ರಗ್ರಹವನ್ನು ನೀವು ಬೆನ್ನಿಗೆ ಕಟ್ಟಿಕೊಂಡು ಓಡಾಡುತ್ತೀರಾ ಎನ್ನುವುದೊಂದೇ ಆತನ ಐಡೆಂಟಿಟಿನಾ?. ಹಾಗಾದರೆ ಆತನ ಹೇಳಿಕೆಗೆ ನಿಮ್ಮ ಸಹಮತ ಇದೆಯೇ?. ಬೂಟ್ ನೆಕ್ಕಬೇಕು ಎಂದು ನೀವು ಮತ್ತು ವಿಜಯೇಂದ್ರ ಬಯಸುತ್ತಿದ್ದೀರಾ? ಕರ್ನಾಟಕದ ಯಾವುದೇ ವ್ಯಕ್ತಿ ಬಿಜೆಪಿಯಲ್ಲಿ ಬೆಳೆಯಬೇಕು ಎಂದರೆ ಯಾರ ಬೂಟ್ ನೆಕ್ಕಬೇಕು ಎಂದು ಪ್ರಶ್ನೆಗಳನ್ನು ಕೇಳಿದ್ದಾರೆ.

### ಬಿಜೆಪಿಗೆ ಮರಳಲು ಬಿಎಸ್‌ವೈ ಕೇಳುವ ಅಗತ್ಯ ಇಲ್ಲ

**ಬಿಜೆಪಿಗೆ ಮರಳುವ ಚಿಂತನೆ ಮಾಡಿಲ್ಲ. ನಾನು ಈಗ ಕ್ಷೇತ್ರದ ಶಾಸಕ, ಕ್ಷೇತ್ರಕ್ಕೆ ಅನುದಾನ ತರುತ್ತಿದ್ದೇನೆ. ಕೆಲಸ ಮಾಡುತ್ತಿದ್ದೇನೆ. 2028ರ ಚುನಾವಣೆಯಲ್ಲಿ ಎಲ್ಲಿಗೆ ಹೋಗಬೇಕು ಅಂತ ತೀರ್ಮಾನ ಮಾಡ್ತೇನೆ. ಬಿಜೆಪಿಗೆ ಮರಳಲು ಯಡಿಯೂರಪ್ಪಗೆ ಕೇಳುವ ಅವಶ್ಯಕತೆ ನನಗೆ ಇಲ್ಲ ಎಂದು ಸೋಮಶೇಖರ್ ತಿಳಿಸಿದ್ದಾರೆ.**

# ಹೊರಗುತ್ತಿಗೆ ನೌಕರರಿಗೆ ಶಾಕ್,

## ಅವಧಿ ಮುಗಿಯುತ್ತಿದ್ದಂತೆ ಬಿಡುಗಡೆ ಮಾಡಲು ಕಟ್ಟುನಿಟ್ಟಿನ ಆದೇಶ

• ಉದಯವಾಹಿನಿ, ಬೆಂಗಳೂರು

ರಾಜ್ಯದ ವಿವಿಧ ಸರ್ಕಾರಿ ಇಲಾಖೆಗಳು ಹಾಗೂ ನಿಗಮ–ಮಂಡಳಿಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಲಕ್ಷಾಂತರ ನೌಕರರಿಗೆ ರಾಜ್ಯ ಸರ್ಕಾರವು ಬಿಗ್ ಶಾಕ್ ನೀಡಿದೆ.

ಟೆಂಡರ್ ಅಥವಾ ಒಪ್ಪಂದದ ಅವಧಿ ಮುಗಿದ ಮರುಕ್ಷಣವೇ ಅಂತಹ ಸಿಬ್ಬಂದಿಯನ್ನು ಯಾವುದೇ ಮುನ್ಸೂಚನೆ ಇಲ್ಲದೆ ಕೆಲಸದಿಂದ ಬಿಡುಗಡೆಗೊಳಿಸುವಂತೆ ಕಟ್ಟುನಿಟ್ಟಿನ ಆದೇಶ ಹೊರಡಿಸಲಾಗಿದೆ. ಈ ಹೊಸ ಆದೇಶದ ಪ್ರಕಾರ, ನಿಯಮ ಮೀರಿ ಹಳೆಯ ಸಿಬ್ಬಂದಿಯನ್ನು ಕೆಲಸದಲ್ಲಿ ಮುಂದುವರಿಸಿದರೆ, ಅಂತಹ ನೌಕರರಿಗೆ ಪಾವತಿಸುವ ವೇತನವನ್ನು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರ ಸ್ವಂತ ಜೇಬಿನಿಂದಲೇ ವಸೂಲಿ ಮಾಡಲಾಗುವುದು ಎಂದು ಸರ್ಕಾರ ಎಚ್ಚರಿಸಿದೆ. ಆರ್ಥಿಕ ಶಿಸ್ತು ಕಾಪಾಡುವ ನಿಟ್ಟಿನಲ್ಲಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ.

ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಇಲಾಖೆ ಮುಖ್ಯಸ್ಥರು ಮತ್ತು ಜಿಲ್ಲಾಧಿಕಾರಿಗಳಿಗೆ ಈ ಸೂಚನೆ ಅನ್ವಯಿಸುತ್ತದೆ. ಒಪ್ಪಂದದ ಅವಧಿ ಮುಗಿದ ದಿನವೇ ಸೇವೆ ಸ್ವಯಂಚಾಲಿತವಾಗಿ ಕೊನೆಗೊಳ್ಳುತ್ತದೆ. ಇದಕ್ಕಾಗಿ ಪ್ರತ್ಯೇಕ ನೋಟಿಸ್ ನೀಡುವ ಅಗತ್ಯವಿಲ್ಲ. ಹೊರಗುತ್ತಿಗೆ ನೌಕರರು ತಮ್ಮ ಸೇವೆಯನ್ನು ಕಾಯಂಗೊಳಿಸುವಂತೆ ಅಥವಾ ಮುಂದುವರಿಸುವಂತೆ ಕೇಳುವ ಕಾನೂನಾತ್ಮಕ ಹಕ್ಕನ್ನು ಹೊಂದಿರುವುದಿಲ್ಲ ಎಂದು ಹೈಕೋರ್ಟ್ ತೀರ್ಪುಗಳನ್ನು ಉಲ್ಲೇಖಿಸಿ ಸರ್ಕಾರ ಸ್ಪಷ್ಟಪಡಿಸಿದೆ.

# ಅಶೋಕ್, ಅಶ್ವತ್ಥ್‌ನಾರಾಯಣ ಜನರ ಕ್ಷಮೆ ಕೇಳಬೇಕು!

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 3ನೇ ಭಾಷೆಗೆ ಇದ್ದ ನೂರು ಅಂಕಗಳ ವ್ಯವಸ್ಥೆಗೆ ಬ್ರೇಕ್ ಹಾಕಿದ್ದಕ್ಕೆ ಸರ್ಕಾರಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ಅಭಿನಂದನೆ ಸಲ್ಲಿಸಿದೆ. ಈ ಬಗ್ಗೆ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಕರವೇ ಅಧ್ಯಕ್ಷ ನಾರಾಯಣ ಗೌಡ, ರಾಜ್ಯ ಸರ್ಕಾರ ಕರ್ನಾಟಕದ ಮಕ್ಕಳಿಗೆ ಶಾಪವಾಗಿ ಪರಿಗಣಿಸಿದ್ದ ಶಾಪ ವಿಮೋಚನೆ ಮಾಡಿದೆ. ಪರೀಕ್ಷೆಗಳಲ್ಲಿ ಮೂರನೇ ಭಾಷೆಗೆ ಇದ್ದ 109 ಅಂಕಗಳ ವ್ಯವಸ್ಥೆ ತೆಗೆದುಹಾಕಿ, 3ನೇ ಭಾಷೆಯ ಪಾಸ್ ಫೇಲ್ ಪ್ರಶ್ನೆ ಉದ್ಭವಿಸದಂತೆ ಆದೇಶ ಮಾಡಿದೆ. ರಾಜ್ಯ ಸರ್ಕಾರದ ಆದೇಶವನ್ನು ಈಡಿ ಕರ್ನಾಟಕದ ಜನ ಸ್ವಾಗತಿಸಿದ್ದಾರೆ ಅಂತ ಹೇಳಿದ್ರು.

ಕನ್ನಡದ ಮಕ್ಕಳು ನಿಟ್ಟುಸಿರು ಬಿಟ್ಟಿದ್ದಾರೆ. ಪ್ರತಿ ವರ್ಷ ಹತ್ತನೇ ತರಗತಿಯಲ್ಲಿ ಲಕ್ಷಾಂತರ ಮಕ್ಕಳು ಫೇಲ್ ಆಗುತ್ತಿದ್ದರು. ಕನ್ನಡದ ಮಕ್ಕಳು ನಿಟ್ಟುಸಿರು ಬಿಟ್ಟಿದ್ದಾರೆ. ಕರವೇ, ನಾಡಿನ ಸಾಹಿತಿಗಳು, ಚಿಂತಕರ ಬಹಳ ವರ್ಷಗಳ ಬೇಡಿಕೆ ಇದು. 5 ರಾಜ್ಯಗಳಲ್ಲಿ ಮಾತ್ರ ತ್ರಿಭಾಷಾ ಸೂತ್ರ ಇದೆ. ತ್ರಿಭಾಷಾ ಸೂತ್ರ ಕಾಯ್ದೆ ತರಬೇಕೆಂಬ ಒತ್ತಾಯ, ಇನ್ನುಳಿದ ಯಾವ ಕಡೆಗಳಲ್ಲೂ ತ್ರಿಭಾಷಾ ಸೂತ್ರ ಇಲ್ಲ.

ಆದರೆ ತ್ರಿಭಾಷಾ ಸೂತ್ರ ನಮ್ಮ ಮಕ್ಕಳ ಮೇಲೆ ಹೇರಿಕೆ ಯಾಕೆ? ತ್ರಿಭಾಷಾ ಸೂತ್ರವನ್ನು ಜಾರಿ ಬಲವಂತದ ಹೇರಿಕೆ ಮಾಡಿ, ಲಕ್ಷಾಂತರ ಮಕ್ಕಳು ಫೇಲ್ ಆಗುತ್ತಿದ್ದರು ಅಂತ ಹೇಳಿದ್ರು.

# ಬುದ್ಧಿಮಾಂದ್ಯರ ನಿಲಯಕ್ಕೆ ದಿನಸಿ ಸಾಮಾಗ್ರಿಗಳ ವಿತರಣೆ

• ಉದಯವಾಹಿನಿ, ಬೆಂಗಳೂರು

ರಾಜರಾಜೇಶ್ವರಿನಗರದ ವಿಜಯನಗರ ಸ್ಪೋರ್ಟ್ ಆಂಡ್ ಕಲ್ಚರಲ್ ಅಸೋಸಿಯೇಷನ್ ವತಿಯಿಂದ ಎಫ್.ಎಂ.ಆರ್. ಇಂಡಿಯಾ ಆಶಾ ನಿಕೇತನ್ ಬುದ್ಧಿ ಮಾಂದ್ಯರ ನಿಲಯಕ್ಕೆ ದಿನಸಿ ಸಾಮಾಗ್ರಿಗಳನ್ನು ಅಧ್ಯಕ್ಷರಾದ ಬಿ.ಟಿ.ಕೋದಂಡರಾಮು, ಉಪಾಧ್ಯಕ್ಷರಾದ ಎಲ್.ಜಗದೀಶ್, ಕಾರ್ಯದರ್ಶಿ ದಿನೇಶ್ ಜಿ.ಎಸ್., ಪದಾಧಿಕಾರಿಗಳಾದ ಬಿ.ಕೊಟ್ರೇಶಪ್ಪ, ಶ್ರೀನಿವಾಸ್ ದಿನೇಶ್ ಬಿ.ಸಿ. (ಗುತ್ತಿಗೆದಾರ) ವೈ.ಎಸ್.ಶಿವರಾಜು, ಭೀಮಪ್ಪ ದಾಶ್ಯಾಳ ಕಿಶೋರ್ ಬಿ.ದೇಸಾಯಿ, ಶ್ರೀ ಮತಿ ಹರಿಣಿ, ಆಯಂಟಿನಿ ಮೆಂಡೋನ್ಸಾ ನವೀನ್ ಕುಮಾರ್ ಗೌಡ, ವಿಜಯಕುಮಾರ್ ಸೂಲಿಕೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ರಾಮಚಂದ್ರ ಬಿ.ವಿ., ಕೋರಮಂಗಲ ಇನ್ಸ್ ಪೆಕ್ಟರ್ ರೆಡ್ಡಿರವರು ನೀಡಿದರುಅಧ್ಯಕ್ಷರಾದ ಕೋದಂಡರಾಮುರವರು ಮಾತನಾಡಿ ವಿಜಯನಗರ ಸ್ಪೋರ್ಟ್ಸ್ ಆಂಡ್ ಕಲ್ಚರಲ್ ಅಸೋಸಿಯೇಷನ್ ಮಕ್ಕಳ ಶಿಕ್ಷಣ ಮತ್ತು ಆರೋಗ್ಯ , ಪರಿಸರ ಹಾಗೂ ಹಸಿವಿನಿಂದ ಯಾರು ಬಳಲಬಾರದು ಹಸಿವು ಮುಕ್ತವಾಗಬೇಕು ಎಂಬ ಉದ್ದೇಶ ಇಟ್ಟುಕೊಂಡು ಸಾಮಾಜಿಕ ಕಾರ್ಯಗಳನ್ನು ಮಾಡುತ್ತಾ ಬಂದಿದೆ.

ಪ್ರತಿವರ್ಷ ಬೆಂಗಳೂರಿನಲ್ಲಿ ಇರುವ ಆನಾಥಶ್ರಮ ಮತ್ತು ವೃದ್ದಾಶ್ರಮಗಳಿಗೆ ಆಹಾರ ಸಾಮಾಗ್ರಿಗಳನ್ನು ನೀಡುತ್ತಿದೆ. ಕಾಯಕವೇ ಕೈಲಾಸ ಎಂಬಂತೆ ನಾವು


ಉದಯವಾಹಿನಿ ಚಿತ್ರ

ದುಡಿಮೆಯ ಹಣದ ಸ್ವಲ್ಪ ಭಾಗವನ್ನು ಸಮಾಜದ ಅಭಿವೃದ್ಧಿಗಾಗಿ ವಿನಿಯೋಗಿಸಲಾಗುತ್ತಿದೆ.

ನಾನು ಎಂಬುದು ಅಹಂಕಾರ, ನಾವೆಲ್ಲರು ಎಂದು ಕೂಡಿ ಬಾಳಿದರೆ ಸ್ವರ್ಗ ಸುಖ ಅದ್ದರಂತೆ ವಿಜಯನಗರ ಸ್ಪೋರ್ಟ್ಸ್ ಆಂಡ್ ಕಲ್ಚರಲ್ ಅಸೋಸಿಯೇಷನ್ ವತಿಯಿಂದ ಸಾಮಾಜಿಕ ಕಾರ್ಯಗಳನ್ನು ಮಾಡಲಾಗುತ್ತಿದೆ ಎಂದು ಸಂಸ್ಥೆಯ ಉದ್ದೇಶ ಎಂದು ಹೇಳಿದರು. ಕ್ಲಬ್ ಸಿಬ್ಬಂದಿಗಳಾದ ನಾಗರಾಜ್, ಪ್ರತಾಪ್, ಮಹೇಶ, ನವೀನ್, ಪಾಂಡು ವೆಂಕಟೇಶ್

ಅಭಿವೃದ್ಧಿಗಾಗಿ ವಿನಿಯೋಗ



# ವಂಚನೆ ಪ್ರಕರಣ ಸಂಬಂಧ ನೋಟಿಸ್ ಸ್ವೀಕರಿಸದ ಆರೋಪಿಯನ್ನ ಬಂಧಿಸಿದ್ದ ಪೊಲೀಸರ ಕ್ರಮ ಎತ್ತಿಹಿಡಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ಏಳು ವರ್ಷಕ್ಕಿಂತ ಕಡಿಮೆ ಅವಧಿಯ ಶಿಕ್ಷೆ ವಿಧಿಸಬಹುದಾದ ಪ್ರಕರಣಗಳಲ್ಲಿ ಆರೋಪಿಯನ್ನು ದಸ್ತಗಿರಿಗೂ ಮುನ್ನ ನೋಟಿಸ್ ನೀಡುವುದು ಕಡ್ಡಾಯವಾಗಿದೆ.

ಆರೋಪಿಯು ಉದ್ದೇಶಪೂರ್ವಕವಾಗಿ ಪೊಲೀಸ್ ನೋಟಿಸ್ ಸ್ವೀಕರಿಸದೇ ತಲೆಮರೆಸಿಕೊಂಡು ತನಿಖೆಗೆ ಅಸಹಕಾರ ತೋರಿದ್ದಲ್ಲಿ ನೇರವಾಗಿ ಬಂಧಿಸಬಹುದಾಗಿದೆ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿಎನ್‌ಎಸ್‌ಎಸ್) ಸೆಕ್ಷನ್ 35(3)ರ ಅಡಿ ನೋಟಿಸ್ ಸ್ವೀಕರಿಸದೇ, ಪೊಲೀಸರೊಂದಿಗೆ ಸಹಕರಿಸಿದ ಆರೋಪದಲ್ಲಿ ಬಂಧಿಸಿದ್ದ ಕ್ರಮ ಪ್ರಶ್ನಿಸಿ ತಮಿಳುನಾಡಿನ ಕಡಲೂರು ನಿವಾಸಿ ಆರ್ ಯೋಗದೇವ್ ಎಂಬುವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕ ಸದಸ್ಯ ಪೀಠ ಈ ಅಭಿಪ್ರಾಯ ಪಟ್ಟಿದೆ.

ಬಿಎನ್‌ಎಸ್‌ಎಸ್ ಸೆಕ್ಷನ್ 35(3)ರ ಅಡಿ ಪೊಲೀಸರು ನೋಟಿಸ್ ಅಥವಾ ಎಫ್‌ಐಆರ್ ಪ್ರತಿಯನ್ನು ವಾಟ್ಸ್‌ಆಯಪ್ ಅಥವಾ ಇಮೇಲ್ ಮೂಲಕ ಕಳುಹಿಸುವಂತಿಲ್ಲ. ನೋಟಿಸ್ ಅನ್ನು ಭೌತಿಕವಾಗಿ ಆರೋಪಿಗೆ ತಲುಪಿಸುವುದು ಅನಿವಾರ್ಯವಾಗಿದೆ. ತನಿಖಾಧಿಕಾರಿಗಳು ನೋಟಿಸ್ ನೀಡಲು ಪ್ರಯತ್ನಿಸಿದಾಗ 40 ದಿನಗಳ ಕಾಲ ಸತತವಾಗಿ ಸ್ಥಳ ಬದಲಾಯಿಸುತ್ತಾ ಪೊಲೀಸರಿಗೆ


ಉದಯವಾಹಿನಿ ಚಿತ್ರ

ಸಿಗದಂತೆ ಓಡಾಡುವುದನ್ನು ತನಿಖೆಗೆ 'ಅಸಹಕಾರ'ನೀಡುವುದು ಎಂಬುದಾಗಿ ಪರಿಗಣಿತವಾಗುತ್ತದೆ. ಅಲ್ಲದೇ, ಅರ್ಜಿದಾರರು ತಮಿಳುನಾಡಿನ ಕಡಲೂರು ಸೇರಿದಂತೆ ವಿವಿಧೆಡೆ ಸಂಚರಿಸುತ್ತಾ ನೋಟಿಸ್ ತಪ್ಪಿಸಿಕೊಳ್ಳುತ್ತಿದ್ದರು ಎಂಬುದು ಅವರ ಕರೆ ವಿವರಗಳ ಮೂಲಕ ಸಾಬೀತಾಗಿದೆ. ಇದು ತನಿಖೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನವಾಗಿದೆ. ಇಂತಹ ಸಂದರ್ಭದಲ್ಲಿ ನೋಟಿಸ್ ನೀಡುವ ಪ್ರಕ್ರಿಯೆ ಪೂರ್ಣಗೊಳ್ಳದಿದ್ದರೂ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆಯಲು ಕಾನೂನಿನಲ್ಲಿ ಅವಕಾಶವಿದೆ.

ಆರೋಪಿಯು ನೋಟಿಸ್ ಸ್ವೀಕರಿಸಲು ನಿರಾಕರಿಸಿದಾಗ ಅಥವಾ ತನಿಖೆಗೆ ಸಹಕರಿಸದಿದ್ದಾಗ, ಪೊಲೀಸರು ಅವರನ್ನು ಬಂಧಿಸುವ ಅಧಿಕಾರ ಹೊಂದಿರುತ್ತಾರೆ. ಈ ಪ್ರಕರಣದಲ್ಲಿ ಅರ್ಜಿದಾರರು 40 ದಿನಗಳ ಕಾಲ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿದ್ದಾರೆ.

# ಮಧ್ಯಪ್ರಾಚ್ಯದಲ್ಲಿ ಯುದ್ಧದಿಂದ ಗ್ಯಾಸ್ ಟ್ರಬಲ್ ರಾಜ್ಯದಲ್ಲಿ ಎಲ್‌ಪಿಜಿ ಸಿಲಿಂಡರ್ ಹಾಹಾಕಾರಕ್ಕೆ ತತ್ತರಿಸಿದ ಜನ

## ಸಿಲಿಕಾನ ಸಿಟಿಯಲ್ಲಿ ಮುಂದುವರೆದ ಸಿಲಿಂಡರ್ ಅಭಾವ

• ಉದಯವಾಹಿನಿ, ಬೆಂಗಳೂರು

ಗ್ಯಾಸ್ ಸಿಲಿಂಡರ್ ಅಭಾವ ಮುಂದುವರಿದಿದೆ. ಗ್ಯಾಸ್ ಸಿಲಿಂಡರ್ ಗೋಳಾಟ ತೀರದಂತಾಗಿದೆ. ಜನ ಹಾಹಾಕಾರಕ್ಕೆ ಕಂಗಾಲಾಗಿದ್ದಾರೆ. ಬೆಂಗಳೂರು ಸೇರಿದಂತೆ ಬಹುತೇಕ ಜಿಲ್ಲೆಗಳಲ್ಲಿ ಇದೇ ಪರಿಸ್ಥಿತಿ ಮುಂದುವರಿದಿದ್ದು, ಗೃಹಬಳಕೆ, ಕಮರ್ಷಿಯಲ್, ಆಟೋ ಗ್ಯಾಸ್‌ಗೆ ಪರದಾಡುವಂತಾಗಿದೆ.

ರಾಜ್ಯದಲ್ಲಿ ಗ್ಯಾಸ್ ಸಿಲಿಂಡರ್ ಗೋಳಾಟ ಮುಂದುವರಿದಿದೆ. ಬೆಂಗಳೂರು ನಗರದ ಹಲವು ಏಜೆನ್ಸಿಗಳಿಗೆ ವಾಣಿಜ್ಯ ಸಿಲಿಂಡರ್ ತಲುಪಿಲ್ಲ. ಏಜೆನ್ಸಿ ಆವರಣಗಳಲ್ಲೇ ಖಾಲಿ ಖಾಲಿ ಸಿಲಿಂಡರ್‌ಗಳು ಉಳಿದಿವೆ. ಸಂಜಯನಗರದ ಎಚ್‌ಪಿ ಗ್ಯಾಸ್ ಏಜೆನ್ಸಿಗೆ ಗ್ರಾಹಕರು ಅಲೆದಾಡುತ್ತಿದ್ದಾರೆ. 20 ದಿನಗಳ ಹಿಂದೆ ಬುಕ್ ಮಾಡಿದ್ದ ಗೃಹಬಳಕೆ ಸಿಲಿಂಡರ್ ಈಗ ವಿತರಣೆ ಮಾಡಲಾಗ್ತಿದೆ. ಬುಕ್ ಮಾಡಿದ 20 ದಿನಗಳ ನಂತರ ಗ್ರಾಹಕರಿಗೆ ಸಿಲಿಂಡರ್ ಸಿಕ್ಕಿದೆ. ಈ ಮಧ್ಯೆ ಹೋಟೆಲ್‌ಗಳಿಗೆ ಅಲ್ಪ ಪ್ರಮಾಣದಲ್ಲಿ ಸಿಲಿಂಡರ್ ಸಪ್ಲೈ ಆಗ್ತಿದೆ. 10 ಸಿಲಿಂಡರ್ ವಿತರಣೆ ಮಾಡ್ತಿದ್ದ ಜಾಗಕ್ಕೆ 2–3 ಸಿಲಿಂಡರ್ ವಿತರಣೆ ಮಾಡಲಾಗ್ತಿದೆ.

**ದಿನೇ ದಿನೇ ಏರಿಕೆಯಾಗುತ್ತಿದೆ ಬಾಕಿ ಬಿಲ್:** ಬೆಂಗಳೂರಿನಲ್ಲಿ ಸಿಲಿಂಡರ್ ಟ್ರಬಲ್ ಮುಂದುವರಿದಿದೆ. ಮನೆಗಳಿಗೆ ಗ್ಯಾಸ್ ಸಪ್ಲೈಗೂ ಗ್ಯಾಸ್ ಏಜೆನ್ಸಿ ಪರದಾಡುವಂತಾಗಿದೆ. ಮಲ್ಲೇಶ್ವರದಲ್ಲಿರುವ ಇಂಡೇನ್ ಗ್ಯಾಸ್ ಏಜೆನ್ಸಿಯಲ್ಲಿ 4,000 ಕ್ಕೂ ಹೆಚ್ಚು ಬಿಲ್ ಬಾಕಿ ಇದೆ. ಏಜೆನ್ಸಿಗೆ ಕಡಿಮೆ ಪ್ರಮಾಣದ ಸಿಲಿಂಡರ್ ಲೋಡ್ ಸಪ್ಲೈ ಆಗ್ತಿದೆ. ಇದರಿಂದ ದಿನೇ ದಿನೇ ಬಾಕಿ ಬಿಲ್ ಏರಿಕೆಯಾಗುತ್ತಿದ್ದು, ಪ್ರತಿನಿತ್ಯ 50, 60 ಸಿಲಿಂಡರ್ ಮಾತ್ರ ಸಪ್ಲೈ ಆಗ್ತಿದೆ. ಹೀಗಾದ್ರೆ


ಉದಯವಾಹಿನಿ ಚಿತ್ರ

ಬಿಲ್ ಕ್ಲಿಯರ್ ಹೇಗೆ ಅನ್ನೋ ಟೆನ್ಷನ್ ಗ್ಯಾಸ್ ಏಜೆನ್ಸಿಗಳಿಗೆ ಶುರುವಾಗಿದೆ. ಹೋಟೆಲ್‌ಗಳಿಗೆ

**ಪೂರೈಕೆಯಾಗದ ಸಿಲಿಂಡರ್:** ಬೆಂಗಳೂರಿನ ಹೋಟೆಲ್‌ಗಳಿಗೆ ಕಮರ್ಷಿಯಲ್ ಸಿಲಿಂಡರ್ ಪೂರೈಕೆ ಆಗ್ತಿಲ್ಲ. ಸರ್ಕಾರ ಶೇ 60 ರಷ್ಟು ಸಿಲಿಂಡರ್ ನೀಡ್ತಿದ್ದೀವಿ ಅಂತಿದೆ. ಆದರೆ ನಮಗೆ ಇಲ್ಲಿವರೆಗೆ ಒಂದೇ ಒಂದು ಸಿಲಿಂಡರ್ ಕೂಡ ಬಂದಿಲ್ಲ ಅಂತ ಹೋಟೆಲ್ ಮಾಲೀಕರು ಆಕ್ರೋಶಗೊಂಡಿದ್ದಾರೆ. ಸೌದೆ ಒಲೆಯಲ್ಲಿ ಅಡುಗೆ ಮಾಡ್ತೀವಿ, ಮೆನುಕೂಡ ಕಟ್ ಮಾಡಿದ್ದೀವಿ ಅಂತ ಜಯನಗರದ ಮಯೂರ ಕಫೆ ಹೋಟಲ್‌ನ ಮ್ಯಾನೇಜರ್ ಬೇಸರ ಹೊರಹಾಕಿದ್ದಾರೆ.

## ಸಿಲಿಂಡರ್ ಸಿಗದೇ ಹೋಟೆಲ್ ಉದ್ಯಮ ಸಂಕಷ್ಟ

**28 ಸಾವಿರಕ್ಕೆ ಸ್ಟವ್ ತಂದ ಮಾಲೀಕ:** ಕಮರ್ಷಿಯಲ್ ಸಿಲಿಂಡರ್ ಸಿಗದ ಹಿನ್ನಲೆ ಹೋಟೆಲ್ ಉದ್ಯಮ ಸಂಕಷ್ಟಕ್ಕೆ ಸಿಲುಕಿದೆ. ಕೊಪ್ಪಳದಲ್ಲಿ ಹೋಟೆಲ್ ಮಾಲೀಕರೊಬ್ಬ ಬರೋಬ್ಬರಿ 28 ಸಾವಿರ ಕೊಟ್ಟು ಸ್ಟವ್ ತಂದಿದ್ದಾರೆ. ಹೊಟೆಲ್ ಮಾಲೀಕರಿಂದ ಪರ್ಯಾಯ ವಿಧಾನದ ಮೂಲಕ ಅಡುಗೆ ಮೊರೆ ಹೋಗಿದ್ದಾರೆ. ಸೌದೆಗೆ ಭಾರೀ ಡಿಮ್ಯಾಂಡ್ ಜೊತೆಗೆ ಬೆಲೆ ಏರಿಕೆಯೂ ಹೆಚ್ಚಾಗಿದೆ. ಹೀಗಾಗಿ ಸಿಲಿಂಡರ್ ಪರ್ಯಾಯವಾಗಿ ದುಬಾರಿ ಸ್ಟವ್ ತಂದು ಹೋಟೆಲ್ ಮಾಲೀಕರು ಉದ್ಯಮ ನಡೆಸುತ್ತಿದ್ದಾರೆ.300 ರೂ.ಗಳಿಗಷ್ಟೇ ಫಿಲ್ಲಿಂಗ್ ಬೆಂಗಳೂರಿನಲ್ಲಿ ಗ್ಯಾಸ್ ಸಮಸ್ಯೆಗೆ ಜನ ಹೈರಾಣಾಗಿದ್ದಾರೆ. ಮೈಸೂರು ರಸ್ತೆಯ ಗ್ಯಾಸ್ ಸ್ಟೇಷನ್‌ಗೆ ಆಟೋ ಗ್ಯಾಸ್‌ಗಾಗಿ ಚಾಲಕರು ಮುಗಿಬಿದ್ದಿದ್ದಾರೆ. ಒಂದೇ ಗ್ಯಾಸ್ ಸ್ಟೇಷನ್‌ನಲ್ಲಿ ನೂರಾರು ಆಟೋಗಳು ನಿಂತಿದ್ದ ದೃಶ್ಯ ಕಂಡುಬಂತು.

## ಆಟೋ ಗ್ಯಾಸ್ ದರ ಏರಿಕೆ

**ಉತ್ತರ ಕನ್ನಡ ಜಿಲ್ಲೆಯಲ್ಲಿ ಗ್ಯಾಸ್ ಟ್ರಬಲ್ ಜನರ ನಿದ್ದೆಗೆಡಿಸಿದೆ. ಕಾರವಾರದ ಗೋ ಗ್ಯಾಸ್ ಬಂಕ್ ಎರಡು ದಿನದಿಂದ ಬಂದ್ ಆಗಿದೆ. ಬಹುತೇಕ ಗ್ಯಾಸ್ ಬಂಕ್‌ನಲ್ಲಿ ನೋ ಸ್ಟಾಕ್ ಬೋರ್ಡ್ ಹಾಕಲಾಗಿದೆ. ದಿನದ ಕೂಲಿಗೂ ಸಂಕಷ್ಟ ಅನುಭವಿಸುತ್ತಿರುವ ಆಟೋ ಚಾಲಕರು ಕಂಗಲಾಗಿದ್ದಾರೆ. ಆಟೋ ಗ್ಯಾಸ್ ಅಭಾವದಿಂದ ಆಟೋ ಪ್ರಯಾಣ ದರವನ್ನ ದುಬಾರಿ ಮಾಡಿದ್ದಾರೆ. ಇದರಿಂದ ಪ್ರಯಾಣಿಕರಿಗೂ ಹೊಡೆತ ಬಿದ್ದಿದೆ.ಇನ್ನೂ ಗದಗ ಜಿಲ್ಲೆಯಲ್ಲೂ ಆಟೋ ಚಾಲಕರ ಸಮಸ್ಯೆ ಹೊರತಾಗಿಲ್ಲ. ತಿಂಗಳ ಹಿಂದೆ 54 ರೂಪಾಯಿ ಇದ್ದ ಆಟೋ ಗ್ಯಾಸ್ ದರ ಈಗ 84.95 ರೂ. ಏರಿಕೆ ಆಗಿದೆ. ಬಂಕ್ ಮಾಲಿಕರ ವಿರುದ್ಧ ಆಟೋ ಚಾಲಕರು ಆಕ್ರೋಶ ಹೊರಹಾಕಿದ್ದಾರೆ.**

**ಒಟ್ಟಿನಲ್ಲಿ ರಾಜ್ಯದಲ್ಲಿ ಗ್ಯಾಸ್ ಸಿಲಿಂಡರ್ ಅಭಾವ ಮುಂದುವರಿದಿದೆ. ಗ್ಯಾಸ್ ಸಿಲಿಂಡರ್ ಗೋಳಾಟ ತೀರದಂತಾಗಿದೆ. ಜನ ಗ್ಯಾಸ್ ಸಿಲಿಂಡರ್ ಹಾಹಾಕಾರಕ್ಕೆ ಕಂಗಾಲಾಗಿದ್ದಾರೆ**

# ಇಂದು ಸಿದ್ಧಗಂಗಾ ಮಠಕ್ಕೆ ರಾಷ್ಟ್ರಪತಿ: ಬಿಗಿ ಪೊಲೀಸ್ ಬಂದೋಬಸ್ತ್

• ಉದಯವಾಹಿನಿ, ತುಮಕೂರು

ಸಿದ್ದಗಂಗಾ ಮಠದಲ್ಲಿ ಏಪ್ರಿಲ್ 1 ಶ್ರೀ ಶಿವಕುಮಾರ ಸ್ವಾಮೀಜಿ ಅವರ 119ನೇ ಜನ್ಮ ಜಯಂತಿ ಕಾರ್ಯಕ್ರಮ ನಡೆಯಲಿದ್ದು, ರಾಷ್ಟ್ರಪತಿಗಳು ಪಾಲ್ಗೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ 1,500 ಪೊಲೀಸ್ ಸಿಬ್ಬಂದಿಯೊಂದಿಗೆ ಕಟ್ಟುನಿಟ್ಟಿನ ಬಂದೋಬಸ್ತ್ ಮಾಡಿದ್ದೇವೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್ ತಿಳಿಸಿದರು.

ಈ ಕುರಿತು ಇಂದು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಹೆಲಿಕಾಪ್ಟರ್ ಬೆಳಿಗ್ಗೆ ಇಲ್ಲಿನ ಹೆಲಿಪ್ಯಾಡ್‌ನಲ್ಲಿ ಲ್ಯಾಂಡ್ ಆಗಲಿದೆ. ಅಲ್ಲಿಂದ ಸಿದ್ದಗಂಗಾ ಮಠಕ್ಕೆ ಹೊರಟು ಕಾರ್ಯಕ್ರಮ ಮುಗಿಸಿ ಬಂದಿರುವ

ಉದಯವಾಹಿನಿ ಚಿತ್ರ



ಹೆಲಿಕಾಪ್ಟರ್‌ನಲ್ಲೇ ಅವರು ವಾಪಸ್ ತೆರಳಲಿದ್ದಾರೆ ಎಂದರು. ಬೆಳಗ್ಗೆ 10ರಿಂದ 11 ಗಂಟೆಯವರೆಗೆ ಹಾಗೂ 11:30ರಿಂದ 12:30 ಯವರೆಗೆ ಸಂಚಾರ ನಿರ್ಬಂಧಗಳಿರುತ್ತವೆ.

ಈ ಸಮಯದಲ್ಲಿ ಸಾರ್ವಜನಿಕರು ಪೊಲೀಸರೊಂದಿಗೆ ಸಹಕರಿಸಬೇಕು. ಬಿ.ಹೆಚ್. ರೋಡ್ ಮತ್ತು ಬಟ್ವಾಡಿಯಿಂದ ಎನ್‌ಹೆಚ್ ಫೋರ್ ಸರ್ಕಲ್‌ತನಕ ಎನ್‌ಹೆಚ್ ರೋಡ್, ಶಿರಾ ರೋಡ್ ಮತ್ತು ಸಿದ್ದಗಂಗಾ ಮಠದ ಆವರಣದಲ್ಲಿ ಬಂದೋಬಸ್ತ್ ಇರುತ್ತದೆ. ಸಾರ್ವಜನಿಕರು ನಾವು ಹೇಳಿರುವ ಸಮಯದಲ್ಲಿ ಪೊಲೀಸರೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.ರಾಷ್ಟ್ರಪತಿ ಮುರ್ಮು ಅವರು ಮಠದ 10,000 ಮಕ್ಕಳೊಂದಿಗೆ ಸಂವಾದ ನಡೆಸಲಿದ್ದಾರೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಇತ್ತೀಚಿಗೆ ತಿಳಿಸಿದ್ದರು. ರಾಷ್ಟ್ರಪತಿಗಳು ಮಾರ್ಚ್ 31ರಂದು ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಬಂದಿಳಿಯಲಿದ್ದಾರೆ. ನಂತರ ಬೆಂಗಳೂರಿನ



ಲೋಕ್ ಪಾಲ್ ಭವನದಲ್ಲಿ ತಂಗಲಿದ್ದಾರೆ. ಏಪ್ರಿಲ್ 1ರಂದು ಬೆಳಗ್ಗೆ 9ಕ್ಕೆ ತುಮಕೂರಿನ ಸಿದ್ದಗಂಗಾ ಮಠಕ್ಕೆ ಆಗಮಿಸಲಿದ್ದಾರೆ.

ಮಠದಲ್ಲಿನ ಶ್ರೀ ಶಿವಕುಮಾರ ಸ್ವಾಮೀಜಿಯವರ ಗದ್ದುಗೆ ದರ್ಶನ ಪಡೆಯಲಿದ್ದಾರೆ.

ಆ ಬಳಿಕ ಸ್ವಾಮೀಜಿಯ ಜನ್ಮದಿನಾಚರಣೆ ಕಾರ್ಯಕ್ರಮದ ವೇದಿಕೆಯಲ್ಲಿ ಭಾಗವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಸಚಿವರಾದ ಎಂ.ಬಿ.ಪಾಟೀಲ್ ಸೇರಿದಂತೆ ಸ್ಥಳೀಯ ಶಾಸಕರು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದರು.

# ಸಮುದಾಯ ನಿರ್ಲಕ್ಷಿಸಿದರೆ ಸರ್ಕಾರ ಪತನ

**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಕ್ತಿ ತುಂಬಿದ್ದ ಬಲಗೈ ಸಮುದಾಯಗಳನ್ನು ಮರೆಯಬಾರದು, ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆಯ ಗೆಲುವಿನಲ್ಲಿ ಬಲಗೈ ಸಮುದಾಯಗಳ ಕೊಡುಗೆ ಪ್ರಮುಖ ಕಾರಣ. ಶ್ರೀನಿವಾಸ ಪ್ರಸಾದ್ ನಾಯಕತ್ವದಲ್ಲಿ ನಡೆದ ಚುನಾವಣೆಯಲ್ಲೂ ಬಲಗೈ ಸಮುದಾಯಗಳ ಪಾತ್ರ ದೊಡ್ಡದಿದೆ.**

• ಉದಯವಾಹಿನಿ, ಚಾಮರಾಜನಗರ

ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿ ವಿಚಾರದಲ್ಲಿ ಬಲಗೈ ಸಮುದಾಯಗಳನ್ನು ತಾತ್ಸಾರದಿಂದ ನೋಡಿದರೆ ರಾಜ್ಯ ಸರ್ಕಾರ ಪತನಗೊಳ್ಳಲಿದೆ ಎಂದು ಮೈಸೂರಿನ ಉರಿಲಿಂಗಿಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಎಚ್ಚರಿಕೆ ನೀಡಿದರು. ನಗರದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ರಾಜ್ಯ ಬಲಗೈ ಜಾತಿಗಳ ಒಕ್ಕೂಟ, ಗಡಿ ಕಟ್ಟೆ ಯಜಮಾನರು ಹಾಗೂ ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಆಸ್ತಿ ಸಂರಕ್ಷಣಾ ಸಮಿತಿಯ ಸಂಯುಕ್ತ ಆಶ್ರಯದಲ್ಲಿ ನ್ಯಾ.ನಾಗಮೋಹನ ದಾಸ್ ಒಳಮೀಸಲಾತಿ ವರದಿಯ ಸಾಧಕ–ಬಾಧಕಗಳ ಕುರಿತು ಹಮ್ಮಿಕೊಂಡಿದ್ದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು.

ಮಾರ್ಚ್ 25 ರಂದು ಬೆಂಗಳೂರಿನ ಫ್ರೀಂಡ ಪಾರ್ಕ್‌ನಲ್ಲಿ ನಡೆಯುವ ಬಲಗೈ ಸಮುದಾಯಗಳ ಶಕ್ತಿ ಪ್ರದರ್ಶನ ಸರ್ಕಾರಕ್ಕೆ ಎಚ್ಚರಿಕೆಯ ಗಂಟೆಯಾಗಬೇಕು. ಸಮುದಾಯಗಳ ಬೇಡಿಕೆಯನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಒಳ ಮೀಸಲಾತಿ ವಿಚಾರದಲ್ಲಿ ಬಲಗೈ ಸಮುದಾಯಗಳಿಗೆ ಅನ್ಯಾಯವಾಗಲು ಬಿಡುವುದಿಲ್ಲ. ಬಲಗೈ ಮತ್ತು ಎಡಗೈ ಸಮುದಾಗಳ ಮಧ್ಯೆ ಭಿನ್ನಾಭಿಪ್ರಾಯ ತಂದು ವೈಮನಸ್ಸು ಮೂಡಿಸುವ ಕುತಂತ್ರ ನಡೆದಿದ್ದ ಒಟ್ಟಾಗಿ ಭೇದಿಸಬೇಕಾಗಿದೆ. ಅಂಬೇಡ್ಕರ್ ಹಾಗೂ ಬುದ್ಧನ ಅನುಯಾಯಿಗಳಾದ ದಲಿತರ ಹೋರಾಟದ ಮೂಲಕ ಹಕ್ಕುಗಳನ್ನು ಪಡೆದುಕೊಳ್ಳಬೇಕುವ ಎಂದು ಸಲಹೆ ನೀಡಿದರು.

ಒಳ ಮೀಸಲಾತಿ ಜಾರಿಗೆ ತಂದು ಬಲಗೈ ಹಾಗೂ ಎಡಗೈ ಸಮುದಾಯಗಳನ್ನು ಬೀದಿಗೆ ತಂದು ನಿಲ್ಲಿಸಲಾಗಿದೆ. ಪರಿಶಿಷ್ಟ ಜಾತಿಯೊಳಗಿರುವ 101 ಸಮುದಾಯಗಳ ಪೈಕಿ ಹೊಲಯ ಹಾಗೂ ಮಾದಿಗರು ಹೆಚ್ಚಾಗಿದ್ದು ಒಂದಾದರೆ ದಲಿತ ನಾಯಕರು ಮುಖ್ಯಮಂತ್ರಿಯಾಗಬಹುದು ಎಂಬ ಕಾರಣಕ್ಕೆ ಒಳ ಮೀಸಲಾತಿ ಜಾರಿ ಹುನ್ನಾರ ಬೀದಿಗೆ ತಂದಿದ್ದಾರೆ. ಸಹೋದರ ಸಮಾಜಗಳು ಅರ್ಥ ಮಾಡಿಕೊಳ್ಳಬೇಕು ಎಂದರು. ಕೊಳ್ಳೇಗಾಲ ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಒಳ ಮೀಸಲಾತಿ ಜಾರಿ ಮಸೂದೆಯನ್ನು ಸದನದಲ್ಲಿ ವಿರೋಧಿಸಿದರೂ ಧ್ವನಿ ಮತಕ್ಕೆ ಹಾಕುವ ಮೂಲಕ ವಿಧಾನಸಭೆಯಲ್ಲಿ ಚರ್ಚೆ ಮಾಡದೆ ಪಾಸ್ ಮಾಡಲಾಯಿತು. ಮೇಲ್ಮನವಿಯಲ್ಲಿ ಚರ್ಚೆ ನಡೆದು, ಕೆಲವು ಮಾರ್ಪಾಡು ಮಾಡಲು ಸಮಾಜ ಕಲ್ಯಾಣ ಇಲಾಖೆಯ

ಉದಯವಾಹಿನಿ ಚಿತ್ರ



ಸಚಿವರು ಒಪ್ಪಿಗೆ ಸೂಚಿಸಿದರು ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಅಯ್ಯನಪುರ ಶಿವಕುಮಾರ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಆರ್. ಮಹದೇವಯ್ಯ, ಮುಖಂಡರಾದ ನಲ್ಲೂರು ಮಹದೇವಸ್ವಾಮಿ, ರೇವಣ್ಣ, ಪಸನ್ನಕುಮಾರ್, ರವಿಕುಮಾರ್, ವೀರಣ್ಣ, ರಂಗಸ್ವಾಮಿ, ನಾಗರಾಜು, ಪಾಪಣ್ಣ, ಸೋಮಣ್ಣ, ಸಿದ್ದಯ್ಯ, ಕೆ.ರಂಗಸ್ವಾಮಿ, ಪುಟ್ಟಸ್ವಾಮಿ, ಚೆನ್ನಂಜಯ್ಯ, ಮಹದೇವಯ್ಯ, ಸೋಮೇಶ್ವರ, ನಾಗಯ್ಯ, ವೀರಭದ್ರಸ್ವಾಮಿ, ಹೆಬ್ಬಸೂರು ರಂಗಸ್ವಾಮಿ, ಗೋವಿಂದರಾಜು, ಸಿದ್ದಪ್ಪಾಜಿ. ಡಾ.ಬಿ.ಆರ್. ಅಂಬೇಡ್ಕರ್ ಸಂಘ ಸಂಸ್ಥೆಯ ಪದಾಧಿಕಾರಿಗಳು ಗಡಿಕಟ್ಟೆ ಯಜಮಾನರು, ಮುಖಂಡರು ಇದ್ದರು.

ಒಳ ಮೀಸಲಾತಿ ಜಾರಿ ಹುನ್ನಾರ



ಬಲಗೈ ಸಮುದಾಯಗಳ ಶಕ್ತಿ ಪ್ರದರ್ಶನ

## ರಾಜೀನಾಮೆ ನೀಡಲು ಸಿದ್ಧ

**ಸಮುದಾಯದ ಹಿತದೃಷ್ಟಿಯಿಂದ ಚಂದ್ರಶೇಖರ್ ಅವರಂತಹ ಅಧಿಕಾರಿಗಳು ಸಮಾಜದ ಆಸ್ತಿಯಾಗಿದ್ದಾರೆ.**

**ಮಾದಿಗ ಸಮುದಾಯಗಳಿಗೆ ಅನ್ಯಾಯವಾದರೆ ಸಮುದಾಯದ ಸಚಿವರು ರಾಜೀನಾಮೆ ನೀಡಲು ಸಿದ್ದರಿದ್ದಾರೆ ಎಂದರು. ರಾಜ್ಯ ಎಸ್‌ಸಿ, ಎಸ್‌ಟಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಿ.ಚಂದ್ರಶೇಖರಯ್ಯ ಮಾತನಾಡಿ, ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿ ಅವೈಜ್ಞಾನಿಕವಾಗಿದ್ದು, ಬಲಗೈ ಸಮುದಾಯಕ್ಕೆ ಅನ್ಯಾಯ ಮಾಡುವ ದುರುದ್ದೇಶದಿಂದಲೇ ಆಯೋಗ ರಚಿಸಿದಂತೆ ಕಾಣುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.**



**ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ ಮಾತನಾಡಿ, ಒಳ ಮೀಸಲಾತಿಯಲ್ಲಿ ಸಮುದಾಯಕ್ಕೆ ಅನ್ಯಾಯವಾದರೆ ಚಾಮರಾಜನಗರದಿಂದಲೇ ಹೋರಾಟದ ಕಿಚ್ಚು ಹೊತ್ತಿಕೊಂಡು ರಾಜ್ಯದಾದ್ಯಂತ ಪಸರಿಸಲಿದೆ. ರಾಜ್ಯ ಸರ್ಕಾರ ಪರಿಸ್ಥಿತಿ ವಿಕೋಪಕ್ಕೆ ಹೋಗುವದಕ್ಕೆ ಅವಕಾಶ ನೀಡಬಾರದು ಎಂದರು. ವಿಚಾರವಾದಿ ಡಾ.ಪಿ.ದೇವರಾಜು, ಛಲವಾದಿ ಗುರುಪೀಠದ ಬಸವರಾಜ ನಾಗಿ ಸ್ವಾಮೀಜಿ, ನಗರಸಭಾ ಮಾಜಿ ಸದಸ್ಯ ಆರ್.ಪಿ.ನಂಜುಂಡಸ್ವಾಮಿ ಮಾತನಾಡಿದರು. ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಆರ್.ಮಹದೇವ್ ಸ್ವಾಗತಿಸಿದರು.**

ನಾಗಮೋಹನ್ ದಾಸ್ ಆಯೋಗದ ವರದಿ ಅವೈಜ್ಞಾನಿಕ

## ಮೇಲುಕೋಟೆ ವೈರಮುಡಿ ಬ್ರಹ್ಮೋತ್ಸವ

• ಉದಯವಾಹಿನಿ, ಮೇಲುಕೋಟೆ

ವಿಶ್ವವಿಖ್ಯಾತ ಮೇಲುಕೋಟೆ ವೈರಮುಡಿ ಬ್ರಹ್ಮೋತ್ಸವ ಅಂಗವಾಗಿ ಮಂಗಳವಾರ ನಡೆದ ಚೆಲುವನಾರಾಯಣ ಸ್ವಾಮಿಯ ಮಹಾರಥೋತ್ಸವ ವೈಭವದಿಂದ ನಡೆಯಿತು. ಬೆಳಿಗ್ಗೆ ದೇವಾಲಯದ ಕಲ್ಯಾಣ ನಾಯಕಿ ಅಮ್ಮನ ಗುಡಿಯ ಮುಂದೆ ಚೆಲುವನಾರಾಯಣ ಸ್ವಾಮಿ, ಶ್ರೀದೇವಿ ಭೂದೇವಿ ಹಾಗೂ ರಾಮಾನುಜಾಚಾರ್ಯರ ಮೂರ್ತಿಯನ್ನು ರಥದಲ್ಲಿ ಇರಿಸಿ, ಪೂಜೆ ಸಲ್ಲಿಸಲಾಯಿತು. ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚಿನ್ ಚಲುವರಾಯಸ್ವಾಮಿ, ಶಾಸಕ ದರ್ಶನ್ ಪುಟ್ಟಣ್ಣಯ್ಯ ರಥಕ್ಕೆ ಪೂಜೆ ಸಲ್ಲಿಸಿ, ಚಕ್ರಗಳಿಗೆ ಈಡುಗಾಯಿ ಒಡೆದು ರಥೋತ್ಸವಕ್ಕೆ ಚಾಲನೆ ನೀಡಿದರು.

ಗೋವಿಂದಾ ಜಯಘೋಷಗಳೊಂದಿಗೆ ರಥವನ್ನು ಭಕ್ತರು ಎಳೆದರು. ವಿವಿಧ ಬಗೆಯ ಹೂವುಗಳಿಂದ ಸಿಂಗಾರಗೊಂಡಿದ್ದ ಚೆಲುವನಾರಾಯಣಸ್ವಾಮಿ ರಥ ಸಾಗುವ ವೇಳೆಯಲ್ಲಿ ನಿರೀಕ್ಷೆಗೂ ಮೀರಿದ ಭಕ್ತರು ಬಂದಿದ್ದರಿಂದ ಕೆಲಕಾಲ ನೂಕುನುಗ್ಗಲು ಉಂಟಾಯಿತು. ಭಕ್ತರು ಭಕ್ತಿಗೀತೆಗಳನ್ನು ಪಠಿಸುತ್ತಾ ಸಾಗಿದರು. ಮೇಲುಕೋಟೆಯ ದೇವಾಲಯದ ರಾಜಬೀದಿಯಲ್ಲಿ ಚೆಲುವನಾರಾಯಣ ಸ್ವಾಮಿಯ ಉತ್ಸವಮೂರ್ತಿ ಹಾಗೂ ಶ್ರೀದೇವಿ, ಭೂದೇವಿ ಅಮ್ಮನವರು ಮತ್ತು ರಾಮಾನುಜಾಚಾರ್ಯ ಮೂರ್ತಿಗಳನ್ನು ಕಣ್ತುಂಬಿಕೊಳ್ಳಲು ರಥಬೀದಿಯ ಇಕ್ಕೆಲ ಹಾಗೂ ಬಹುಮಹಡಿ ಕಟ್ಟಡಗಳನ್ನು ಏರಿ ಜನರು ಕಾದಿದ್ದರು. ಭಕ್ತರು ಬಾಳೆ ಹಣ್ಣು, ಜವನ ಎಸೆದು ಭಕ್ತಿಬಾವ ಮೆರೆದರು. ಚೆಲುವನಾರಾಯಣ ಸ್ವಾಮಿಯ ಮಹಾರಥೋತ್ಸವದಂದು ಪುಷ್ಪಾಲಂಕೃತ ಬಂಗಾರದ ಪಲ್ಲಕ್ಕಿ ಮೆರವಣಿಗೆ ಉತ್ಸವದ ಕೇಂದ್ರಬಿಂದು. ಈ ಉತ್ಸವವನ್ನು ದಲಿತರೇ ಮುಂದೆ ನಿಂತು ನಡೆಸುವುದು ವಿಶೇಷ. ರಾತ್ರಿಯಿಂದ ಬೆಳಗಿನವರೆಗೆ ಚೆಲುವನಾರಾಯಣನ ಉತ್ಸವಮೂರ್ತಿಯನ್ನು ಹೆಗಲ ಮೇಲೆ ಹೊತ್ತು ಉತ್ಸಾಹದಿಂದ ಮೆರವಣಿಗೆ ನಡೆಸಿದರು.

## ಮುಂದಿನ ಚುನಾವಣೆಯಲ್ಲಿ ಕಣ್ಣೀರು ಹಾಕಿಸಬೇಡಿ

• ಉದಯವಾಹಿನಿ, ನಾಗಮಂಗಲ

ಆರೋಗ್ಯವನ್ನೂ ಲೆಕ್ಕಿಸದೆ ಹಗಲಿರುಳು ಶ್ರಮಿಸಿ ಕ್ಷೇತ್ರ ಹಾಗೂ ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಇದನ್ನು ಜನರು ಅರ್ಥ ಮಾಡಿಕೊಳ್ಳಬೇಕು. ಮುಂಬರುವ ಚುನಾವಣೆಗಳಲ್ಲಿ ನನ್ನ ಕಣ್ಣಲ್ಲಿ ನೀರು ಹಾಕಿಸಬೇಡಿ' ಎಂದು ಸಚಿವ ಚಲುವರಾಯಸ್ವಾಮಿ ಹೇಳಿದರು.

ತಾಲ್ಲೂಕಿನ ಭೀಮನಹಳ್ಳಿ ಗ್ರಾಮದಲ್ಲಿ ವಿವಿಧ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ 9 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಪಕ್ಷ ಅಧಿಕಾರದಲ್ಲಿ ಇರಲಿ ಇಲ್ಲದಿರಲಿ ನಾನು ಶಾಸಕನಾಗಿದ್ದ ಅವಧಿಯಲ್ಲಿ ಇದೇ ವೇಗದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದೇನೆ.

ಕ್ಷೇತ್ರದ ಜನರ ಋಣ ತೀರಿಸುವ ಸಲುವಾಗಿ ನನ್ನ ಆರೋಗ್ಯವನ್ನೂ ಲೆಕ್ಕಿಸದೆ ತಾಲ್ಲೂಕು ಮತ್ತು ಜಿಲ್ಲೆಯ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತಿದ್ದೇನೆ. ರಾಜ್ಯ ಸರ್ಕಾರದ 5 ಗ್ಯಾರಂಟಿ ಯೋಜನೆಗಳಿಂದ ಈವರೆಗೆ ಜಿಲ್ಲೆಯ ಪ್ರತಿ ಕುಟುಂಬಕ್ಕೆ 58 ಸಾವಿರ ಹಣ ತಲುಪಿದೆ. 5 ಗ್ಯಾರಂಟಿ ಯೋಜನೆಗಳ ಜೊತೆಗೆ ತಾಲ್ಲೂಕಿನಲ್ಲಿ ಇಷ್ಟೊಂದು ಅಭಿವೃದ್ಧಿ ಕೆಲಸ ಕಾರ್ಯಗಳು ನಡೆಯುತ್ತಿವೆ ಎಂದರು. ಈ ಹಿಂದೆ ಕ್ಷೇತ್ರದಲ್ಲಿ ಶಾಸಕರಾಗಿದ್ದ ಯಾರಾದರೂ ಒಂದು ಅವಧಿಯಲ್ಲಿ ಇಷ್ಟೊಂದು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದರೆ ನಾನು ಈಗಲೇ ರಾಜಕೀಯ ನಿವೃತ್ತಿ ಘೋಷಿಸುತ್ತೇನೆ. ದೇವಲಾಪುರ ಹೋಬಳಿಯಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿರುವಂತೆ ವಿಧಾನಸಭಾ ಕ್ಷೇತ್ರದ ಎಲ್ಲಾ ಹೋಬಳಿಗಳಲ್ಲಿಯೂ ನಡೆಯುತ್ತಿವೆ. ಇಷ್ಟೆಲ್ಲಾ ಅಭಿವೃದ್ಧಿ ಕೆಲಸಗಳನ್ನು ಮಾಡಿದರೂ ಕೂಡ ಚುನಾವಣೆ ಸಂದರ್ಭದಲ್ಲಿ ಜನರು ನನ್ನನ್ನು ಪರೀಕ್ಷೆ ಮಾಡುವುದನ್ನು ನೋಡಿದರೆ ಏನು ಹೇಳಬೇಕೆಂದು ಗೊತ್ತಾಗುವುದಿಲ್ಲ ಎಂದರು.

ಕಳೆದ ಮೂರು ವರ್ಷದಲ್ಲಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ದೇವಲಾಪುರ ಹೋಬಳಿಯಲ್ಲಿ ಅತಿಹೆಚ್ಚು ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ.

## ಗ್ಯಾರಂಟಿಗೆ ದಲಿತರ ಹಣ ಬಳಸಿದರೆ ಹೋರಾಟ



• ಉದಯವಾಹಿನಿ , ಚಿಕ್ಕಬಳ್ಳಾಪುರ

ದಲಿತ ಸಮುದಾಯಗಳ ಅಭಿವೃದ್ಧಿಗೆ ಮೀಸಲಿಡುವ ಅನುದಾನವನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ವಿನಿಯೋಗಿಸಿ ದಲಿತರಿಗೆ ಮೋಸ ಮಾಡುತ್ತಿದೆ. ಗ್ಯಾರಂಟಿಗಳಿಗೆ ದಲಿತರ ಹಣ ಬಳಸುವುದಿಲ್ಲ ಎಂದು ಘೋಷಿಸದಿದ್ದಲ್ಲಿ ಎಲ್ಲಾ ದಲಿತ ಸಂಘಟನೆಗಳು ಒಗ್ಗೂಡಿ ಹೋರಾಟ ನಡೆಸುತ್ತೇವೆ ಎಂದು ಸಮತಾ ಸೈನಿಕ ದಳದ ರಾಜ್ಯ ಘಟಕದ ಅಧ್ಯಕ್ಷ ಜಿ.ಸಿ.ವೆಂಕಟರಮಣಪ್ಪ ಎಚ್ಚರಿಸಿದರು. ನಗರದಲ್ಲಿ ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ದಲಿತ ಸಮುದಾಯದ ಕೊಡುಗೆ ಹೆಚ್ಚಿದೆ.

ಆದರೆ ನಮ್ಮ ಸಮುದಾಯದ ಬೆನ್ನುಮೂಳೆ ಮುರಿಯುವ ಕೆಲಸ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕಳೆದ 2023–24 ರಿಂದ 2025–26ನೇ ಸಾಲಿನವರೆಗೆ ದಲಿತರಿಗೆ ಮೀಸಲಿಟ್ಟಿದ್ದ ಅನುದಾನದಲ್ಲಿ ಬರೊಬ್ಬರಿ 53 ಸಾವಿರ ಕೋಟಿಯನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲಾಗಿದೆ ಎಂದು ಹೇಳಿದರು.ಪ್ರಸ್ತುತದ ಬಜೆಟ್‌ನಲ್ಲಿ ದಲಿತ ಸಮುದಾಯಗಳಿಗೆ ಮೀಸಲಿಟ್ಟಿರುವ 40 ಸಾವಿರ ಕೋಟಿಯಲ್ಲಿ 13,433.48 ಕೋಟಿಯನ್ನು ಗ್ಯಾರಂಟಿಗಳಿಗೆ ಬಳಕೆ ಮಾಡಿಕೊಂಡಿದೆ. ಅನುದಾನದಲ್ಲಿಯೂ ಶೇ 25 ರಷ್ಟು ಮಾತ್ರ ಬಿಡುಗಡೆ ಮಾಡುವ ಮೂಲಕ ಸಮುದಾಯವನ್ನು ವ್ಯವಸ್ಥಿತವಾಗಿ ತುಳಿಯುವ ಕಾರ್ಯವನ್ನು ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ ಈಗ ನಡೆಯುತ್ತಿರುವ ವಿಧಾನಸಭೆ ಅಧಿವೇಶನದಲ್ಲಿ ಗ್ಯಾರಂಟಿಗಳಿಗೆ ದಲಿತ ಅನುದಾನ ಬಳಕೆ ಮಾಡುವುದಿಲ್ಲ ಎಂದು ಘೋಷಿಸಬೇಕು. ಸಂವಿಧಾನ ಎಲ್ಲರದ್ದೂ ಆಗಿದ್ದರೂ ಸಂವಿಧಾನ ರಕ್ಷಣೆ ಅಭಿಯಾನಕ್ಕೆ ಕೇವಲ ದಲಿತರ ಅನುದಾನ ಬಳಕೆ ಮಾಡುತ್ತಿರುವುದರಿಂದ ಸಮಾಜಕ್ಕೆ ತಪ್ಪು ಸಂದೇಶ ಹೋಗುತ್ತಿದೆ. ಈ ನಿಟ್ಟಿನಲ್ಲಿ ಖಜಾನೆಯಿಂದ ಹಣ ನೀಡಬೇಕು ಎಂದು ಆಗ್ರಹಿಸಿದರು.

## ಏ 21ಕ್ಕೆ ವಾಲ್ಮೀಕಿ ಭವನ ಉದ್ಘಾಟನೆ : ಶಾಸಕ ಗಣೇಶ್ ಪ್ರಸಾದ್

• ಉದಯವಾಹಿನಿ,ಗುಂಡ್ಲುಪೇಟೆ

ಪಟ್ಟಣದ 14ನೇ ವಾರ್ಡ್ ನಲ್ಲಿ ಉದ್ಘಾಟನೆಗೆ ಸಿದ್ಧವಾಗಿರುವ ವಾಲ್ಮೀಕಿ ಭವನವನ್ನು ಶಾಸಕ ಎಚ್.ಎಂ.ಗಣೇಶಪ್ರಸಾದ್ ಮಂಗಳವಾರ ವೀಕ್ಷಣೆ ಮಾಡಿದರು.ಈ ಸಂದರ್ಭದಲ್ಲಿ ಶಾಸಕ ಎಚ್.ಎಂ.ಗಣೇಶಪ್ರಸಾದ್ ಮಾತನಾಡಿ, ನಮ್ಮ ತಂದೆ ಮಹದೇವಪ್ರಸಾದ್ ಅವಧಿಯಲ್ಲಿ ಆರಂಭವಾದ ವಾಲ್ಮೀಕಿ ಭವನದ ಕಾಮಗಾರಿ ನನ್ನ ಅವಧಿಯಲ್ಲಿ ಉದ್ಘಾಟನೆಗೆ ಸಿದ್ಧವಾಗಿರುವುದು ಖುಷಿಯ ವಿಚಾರ.

ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಭವನಕ್ಕೆ ಇದೀಗ ಉದ್ಘಾಟನೆ ಭಾಗ್ಯ ಸಿಕ್ಕಿದೆ. ಏ.21ರಂದು ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಗುಂಡ್ಲುಪೇಟೆಗೆ ಆಗಮಿಸುತ್ತಿದ್ದು, ಅಂದೇ ಭವನವನ್ನು ಸಹ ಉದ್ಘಾಟನೆ ಮಾಡಲಾಗುವುದು ಎಂದು ತಿಳಿಸಿದರು. ನಾಯಕ ಸಮುದಾಯದ ಮುಖಂಡರ ಕೋರಿಕೆಯಂತೆ ಹೆಚ್ಚುವರಿ 6 ಕೊಠಡಿ, ಪಾರ್ಕಿಂಗ್ ಟೈಲ್ಸ್, ಕಾಂಪೌಂಡ್ ನಿರ್ಮಾಣಕ್ಕೆ ಮುಂದಿನ ದಿನಗಳಲ್ಲಿ ಅಗತ್ಯ ಅನುದಾನ ನೀಡುತ್ತೇನೆ.

ಈಗಾಗಲೇ ಭವನ ಬಹುತೇಕ ಕೆಲಸ ಮುಗಿದಿದ್ದು, ರಾಷ್ಟ್ರೀಯ ಹೆದ್ದಾರಿಯಿಂದ ಸಂಪರ್ಕ ಕಲ್ಪಿಸುವ ರಸ್ತೆ ನಿರ್ಮಾಣಕ್ಕೆ ಈಗಾಗಲೇ ಪುರಸಭೆ ಅನುದಾನ ನೀಡಲಾಗಿದ್ದು, ಶೀಘ್ರ ರಸ್ತೆ ಕಾಮಗಾರಿ ಪ್ರಾರಂಭವಾಗಲಿದೆ ಎಂದು ಹೇಳಿದರು. ಸಣ್ಣಪುಟ್ಟ ಕೆಲಸ ಬಾಕಿ ಉಳಿದಿದ್ದು, ಏ.21ರ ಒಳಗೆ ಪೂರ್ಣ ಗೊಳಿಸಲಾಗುವುದು ಎಂದು ಕೆ.ಆರ್.ಡಿ.ಐ.ಎಲ್ ಅಧಿಕಾರಿ ಪ್ರಸನ್ನ ಶಾಸಕರ ಬಳಿ ತಿಳಿಸಿದರು. ನಾಯಕ ಸಮುದಾಯದ

ಉದಯವಾಹಿನಿ ಚಿತ್ರ



ಯಜಮಾನರು, ಮುಖಂಡರು ಮಾತನಾಡಿ, ವಾಲ್ಮೀಕಿ ಭವನ ಸುತ್ತಲು ಕಾಂಪೌಂಡ್, ಹೆಚ್ಚುವರಿ ಕೊಠಡಿ, ಪಾರ್ಕಿಂಗ್ ಟೈಲ್ಸ್ ಮತ್ತು ರಾಷ್ಟ್ರೀಯ ಹೆದ್ದಾರಿ ಸಂಪರ್ಕ ಕಲ್ಪಿಸುವ ರಸ್ತೆ ನಿರ್ಮಾಣ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಪುರಸಭೆ ಮಾಜಿ ಸದಸ್ಯ ಎನ್.ಕುಮಾರ್, ಕಾರ್ಗಳ್ಳಿ ಸುರೇಶ್, ಯಜಮಾನರಾದ ರಾಚನಾಯಕ, ಸಿದ್ದರಾಜನಾಯಕ, ವೆಂಕಟೇಶನಾಯಕ, ಲಿಂಗರಾಜು, ಆಸ್ಪತ್ರೆ ರಾಮು, ಮಹದೇವನಾಯಕ, ಮಾಧು, ಚಿಕ್ಕಾಟಿ ರಂಗನಾಯಕ, ಬೇರಂಬಾಡಿ ರಂಗಪ್ಪ, ಪಿಣ್ಣನಾಯಕ, ಆಲಮಾದನಾಯಕ, ಹಂಗಳ ಕರಿಬಸವನಾಯಕ, ಮಹದೇವನಾಯಕ, ಸಿದ್ದನಾಯಕ, ರಮೇಶ್ ನಾಯಕ್, ಕರವೇ ರಾಜೇಂದ್ರ, ವಿ.ನಾಯಕ. ಡಾ.ರಾಜೇಶನಾಯಕ ಸೇರಿದಂತೆ ಹಲವು ಮಂದಿ ನಾಯಕ ಸಮುದಾಯದ ಮುಖಂಡರು, ಯುವಕರು ಹಾಜರಿದ್ದರು.

## ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಿಎಂರಿಂದ ಶಂಕುಸ್ಥಾಪನೆ

• ಉದಯವಾಹಿನಿ, ಗುಂಡ್ಲುಪೇಟೆ

ಏ.21 ಕ್ಕೆ ಗುಂಡ್ಲುಪೇಟೆಗೆ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಮಿಸುತ್ತಿದ್ದು 600 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ತಿಳಿಸಿದರು. ಸಿದ್ದರಾಮಯ್ಯ ಆಗಮನ ಹಿನ್ನೆಲೆ ಸಿದ್ಧತೆ ಪೂರ್ವಭಾವಿಯಾಗಿ ಅಧಿಕಾರಿಗಳೊಟ್ಟಿಗೆ ತಹಶೀಲ್ದಾರ ಕಚೇರಿಯಲ್ಲಿ ನಡೆಸಿದ ಸಭೆಯಲ್ಲಿ ಅವರು ಮಾಹಿತಿ ನೀಡಿದರು.

ತಾಲ್ಲೂಕಿನ ರೈತರ ನಿರೀಕ್ಷೆಗೆ ಮೊದಲ ಆದ್ಯತೆ ನೀಡಲಾಗಿರುವ 475 ಕೋಟಿ ವೆಚ್ಚದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸುವ ಮೂಲಕ 110 ಕೆರೆಗಳಿಗೆ ಜೀವಕಳೆ ತುಂಬುವ ಮಹತ್ಕಾರ್ಯಕ್ಕೆ ಚಾಲನೆ ನೀಡಲಾಗುವುದು ಹಾಗೂ ಬೊಮ್ಮನಹಳ್ಳಿ ಸಮೀಪ ನಿರ್ಮಾಣವಾಗಿರುವ ಅಂಬೇಡ್ಕರ್ ವಸತಿ ಶಾಲೆ , ತೆರಕಣಾಂಬಿಯ ನೂತನ ಆಸ್ಪತ್ರೆ ಕಟ್ಟಡವನ್ನ ಉದ್ಘಾಟಿಸಲಾಗುವುದು ಎಂದರು.

ಉದಯವಾಹಿನಿ ಚಿತ್ರ



ಕಾಂಗ್ರೆಸ್ ಸರ್ಕಾರ ಅಧಿಕಾರದ ಗದ್ದುಗೆ ಏರಿದ ಮೂರು ವರ್ಷಗಳ ಬಳಿಕ ಸಿಎಂ , ಡಿಸಿಎಂ ಹಾಗೂ ಸಚಿವರುಗಳು ಸಹ ಆಗಮಿಸಲಿದ್ದಾರೆ ಆದುದರಿಂದ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಅಂದು ಪಟ್ಟಣದ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡುವ ಜೊತೆಗೆ ಸ್ವಚ್ಛ ವಾತಾವರಣ ನಿರ್ಮಾಣದ ಜವಾಬ್ದಾರಿಯನ್ನ ಪುರಸಭೆ ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ತಾಕೀತು ಮಾಡಿದರು. ಸಭೆಯಲ್ಲಿ ತಹಶೀಲ್ದಾರ್ ತನ್ಮಯ್, ಇಓ ಷಣ್ಮುಗಂ, ಕೃಷಿ ಇಲಾಖೆ ಎಡಿ ಶಶಿಧರ್, ಸಿಓ ಸರವಣ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

### ಅಗತ್ಯ ಮುನ್ನೆಚ್ಚರಿಕೆ ಕ್ರಮ

### ವೇದಿಕೆ ಕಾರ್ಯಕ್ರಮ

**ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ಬಳಿಕ ದೇವರಾಜು ಅರಸು ಕ್ರೀಡಾಂಗಣದಲ್ಲಿ ವೇದಿಕೆ ಕಾರ್ಯಕ್ರಮವಿದ್ದು ಯಾವುದೇ ಲೋಪದೋಷಗಳಾಗದಂತೆ ಎಚ್ಚರವಹಿಸಬೇಕು ಎಂದು ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿದರು. ಶೀಘ್ರದಲ್ಲೇ ಜಿಲ್ಲಾಧಿಕಾರಿಗಳೊಟ್ಟಿಗೆ ಸಭೆ ನಡೆಸಿ ಮುಂದಿನ ಸಿದ್ಧತೆಗಳ ಕುರಿತು ಸಮಾಲೋಚನೆ ನಡೆಸಲಾಗುವುದು ಸಿಎಂ ಡಿಸಿಎಂ ಆಗಮನದ ದಿನದಂದು ಎಲ್ಲರ ಸಹಕಾರ ಅತ್ಯಗತ್ಯವಾಗಿದೆ ಎಂದು ಮನವಿ ಮಾಡಿದರು.**

## ಕೈವಾರದಲ್ಲಿ 3 ದಿನಗಳ ಧ್ಯಾನ ಉತ್ಸವಕ್ಕೆ ಚಾಲನೆ

• ಉದಯವಾಹಿನಿ,ಕೋಲಾರ


ಜಿಲ್ಲಾ ನ್ಯಾಯಾಧೀಶೆ ಬಿ.ಎಸ್. ಜಯಶ್ರೀ ಮಾತನಾಡಿ, ಧ್ಯಾನದಿಂದ ವ್ಯಕ್ತಿ ವಿಕಸನ ಹೊಂದುತ್ತಾನೆ. ಇದರಿಂದ ಸಮಾಜ ಪರಿವರ್ತನೆ ಸಾಧ್ಯ ಎಂದು ಹೇಳಿದರು.

ಇಂದಿನ ಯುವ ಜನರು ದುಶ್ಚಟಗಳಿಗೆ ದಾಸರಾಗುತ್ತಿರುವುದು ನೋವಿನ ಸಂಗತಿ. ಪೋಷಕರು ತಮ್ಮ ಮಕ್ಕಳ ಬಗ್ಗೆ ಗಮನಕೊಡಬೇಕು ಎಂದರು.

ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಎಂ.ಆರ್ .ಜಯರಾಮ್ ಮಾತನಾಡಿದರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಸಹೋದರ ಡಾ.ಎಂ.ಸಿ.ಬಾಲಾಜಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಗ್ರಾಂಡ್ ಮಾಸ್ಟರ್ ಪ್ರಬೋದ್ ಅಚ್ಯುತ ಧ್ಯಾನದ ಮಾರ್ಗದರ್ಶನ ನೀಡಿದರು. ಹೈದ್ರಾಬಾದ್ ಸಂಗೀತ ವಿದ್ವಾಂಸ ಪಿಪ್ಪಲ

ಉದಯವಾಹಿನಿ ಚಿತ್ರ



ಪ್ರಸಾದ್ ಮತ್ತು ತಂಡದವರಿಂದ ನಾಮ ಸಂಕೀರ್ತನೆ ಹಮ್ಮಿಕೊಳ್ಳಲಾಯಿತು.

ಉದ್ಯಮಿ ಸಿ.ಎಂ.ಆರ್.ಶ್ರೀನಾಥ್, ಎಂ.ಪ್ರದೀಪ್ ಹಾಗೂ ನಾನಾ ಭಾಗಗಳಿಂದ ಬಂದಿದ್ದ ಧ್ಯಾನಸಕ್ತರು ಭಾಗವಹಿಸಿದ್ದರು.

## ಮಿನಿ ನ್ಯೂಸ್

### ಮಂಗ ಮೃತದೇಹದ ಮೇಲೆ ಮಲಗಿ ಮೂಕರೋಧನೆ

ಉದಯವಾಹಿನಿ ಚಿತ್ರ



• ಉದಯವಾಹಿನಿ, ರಾಮನಗರ


ವೃದ್ಧೆ ಸಾವಿಗೆ ಕೋತಿಯೊಂದು ಮರುಗಿ, ಮೃತದೇಹದ ಮೇಲೆ ಮಲಗಿ ರೋಧನೆ ವ್ಯಕ್ತಪಡಿಸಿರುವ ವಿಚಿತ್ರ ಘಟನೆ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಬಿ.ವಿ.ಹಳ್ಳಿ ಗ್ರಾಮದಲ್ಲಿ ನಡೆದಿದೆ.ಗ್ರಾಮದ ನಿವಾಸಿ 80 ವರ್ಷದ ಪಾರ್ವತಮ್ಮ ಎಂಬುವವರ ಸಾವಿಗೆ ಕಪಿರಾಯ ಕಣ್ಣೀರು ಹಾಕಿದ್ದಾನೆ. ನಿತ್ಯ ಮನೆ ಬಳಿ ಬರ್ತಿದ್ದ ಕೋತಿಯನ್ನ ತಿಂಡಿ ಕೊಟ್ಟು ವೃದ್ಧೆ ಪ್ರೀತಿಯಿಂದ ನೋಡಿಕೊಳ್ತಿದ್ರು. ಕೋತಿ ಜೊತೆ ನಿತ್ಯ ಒಡನಾಟ ಹೊಂದಿದ್ದ ವೃದ್ಧೆ ಇಂದು ವಯೋಸಹಜ ಕಾಯಿಲೆಯಿಂದ ಸಾವನ್ನಪ್ಪಿದ್ದಾರೆ. ವೃದ್ಧೆ ಸಾವಿಗೆ ಕೋತಿ ಮೂಕರೋಧನೆ ವ್ಯಕ್ತಪಡಿಸಿದೆ.

ವೃದ್ಧೆ ಮೃತದೇಹದ ಮೇಲೆ ಮಲಗಿ ಕಣ್ಣೀರು ಹಾಕಿದೆ. ಕೋತಿ ಹಾಗೂ ವೃದ್ಧೆ ಬಾಂದವ್ಯ ನೋಡಿ ಗ್ರಾಮಸ್ಥರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಬದುಕಿದ್ದಾಗ ಕೋತಿ ಜೊತೆ ಆಟವಾಡ್ತಿರೋ ವಿಡಿಯೋ ಅಜ್ಜಿಯ ಸಾವಿನ ಮುಂದೆ ರೋಧನೆ ವ್ಯಕ್ತಪಡಿಸುತ್ತಿರೋ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

### ಏ.4ರಂದು ಓಂ ಶಾಂತಿಧಾಮ ಗುರುಕುಲದಲ್ಲಿ ಭಾರತೀಯ ಜ್ಞಾನ ಕಲೆ ಪ್ರದರ್ಶನ

• ಉದಯವಾಹಿನಿ, ರಾಮನಗರ

ಉದಯವಾಹಿನಿ ಚಿತ್ರ



ಕನಕಪುರದ ಸಂಗಮದ ಬಳಿ ಇರುವ ಓಂ ಶಾಂತಿಧಾಮ ವೇದ ಗುರುಕುಲ ವಿದ್ಯಾಲಯದಲ್ಲಿ ಏ.4ರ ಶನಿವಾರ ಭಾರತೀಯ ಜ್ಞಾನ ಪದ್ಧತಿಯ ಪ್ರದರ್ಶನ ಕಲೆ ನಡೆಯಲಿದೆ ಎಂದು ಗುರುಕುಲದ ಪ್ರಕಟಣೆ ತಿಳಿಸಿದೆ.

ಗುರುಕಲದ ವಿದ್ಯಾರ್ಥಿಗಳು ನಮ್ಮ ಸನಾತನ ಸಂಸ್ಕೃತಿಯ ಕಲೆಗಳ ಮತ್ತು ಸಂಸ್ಕೃತಿಯ ಪ್ರದರ್ಶನ ಮಾಡಲಿದ್ದು ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಗುರುಕುಲ ಪದ್ಧತಿಗೆ ಪ್ರೋತ್ಸಾಹ ನೀಡಬೇಕೆಂದು ಗುರುಕುಲದ ಪ್ರಾಂಶುಪಾಲರು ಮನವಿ ಮಾಡಿದ್ದಾರೆ.

ಇಲ್ಲಿನ ಗುರುಕುಲದಲ್ಲಿ ಆರನೆ ತರಗತಿಯಿಂದ ಹತ್ತನೆ ತರಗತಿವರೆಗೆ ಗಂಡು ಮಕ್ಕಳಿಗೆ ಶುದ್ಧ ಗುರುಕುಲ ಮಾದರಿಯಲ್ಲಿ ಶಿಕ್ಷಣ ನೀಡಲಾಗುತ್ತಿದೆ. ಪಠ್ಯದ ಜೊತೆಗೆ ವೇದ, ಉಪನಿಷತ್ತು, ಸಂಸ್ಕಾರ ಬೋಧನೆ ಮಾಡಲಾಗುತ್ತಿದೆ. ರಾಜ್ಯ ಹಾಗೂ ಹೊರ ರಾಜ್ಯದ ಮಕ್ಕಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.

### ಚಿಂತಾಮಣಿ ನಗರದಲ್ಲಿ ಏ.1ರಿಂದ ಜನಗಣತಿ ಕಾರ್ಯ ಆರಂಭ

• ಉದಯವಾಹಿನಿ, ಚಿಂತಾಮಣಿ

ಭಾರತ ಸರ್ಕಾರದ ಮಹತ್ವಾಕಾಂಕ್ಷೆಯ ರಾಷ್ಟ್ರೀಯ ಜನಗಣತಿ ಕಾರ್ಯ ಕ್ರಮವು ಚಿಂತಾಮಣಿ ನಗರ ವ್ಯಾಪ್ತಿಯಲ್ಲಿ ಏಪ್ರಿಲ್ 1ರಿಂದ ಅಧಿಕೃತವಾಗಿ ಚಾಲನೆ ಪಡೆಯಲಿದೆ ಎಂದು ಚಿಂತಾಮಣಿ ನಗರಸಭೆ ಪೌರಾಯುಕ್ತರಾದ ಜೆ.ಎನ್. ಚಲಪತಿ ತಿಳಿಸಿದ್ದಾರೆ.

ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು,ಜನಗಣತಿ ಪ್ರಕ್ರಿಯೆ ಜನಗಣತಿ ಪ್ರಕ್ರಿಯೆಯನ್ನು ಸುಗಮವಾಗಿ ನಡೆಸಲು ಈಗಾಗಲೇ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.ಏಪ್ರಿಲ್ 1 ರಿಂದ ಏಪ್ರಿಲ್ 15 ರವರೆಗೆ ಸಾರ್ವಜನಿಕರು ಸ್ವಯಂ ಘೋಷಿತವಾಗಿ ಮಾಹಿತಿ ನೀಡಲು ಅವಕಾಶವಿದೆ. ಸಾರ್ವಜನಿಕರು ಎಲೆಕ್ಷನ್ ಕಮಿಷನ್ ಪೋರ್ಟಲ್‌ಗೆ ಲಾಗಿನ್ ಆಗಿ ತಮ್ಮ ಕುಟುಂಬದ ವಿವರಗಳನ್ನು ದಾಖಲಿಸಬಹುದು.

ಏಪ್ರಿಲ್ 15ರ ನಂತರ ನುರಿತ ಬಿಎಲ್‌ಒ ಹಾಗೂ ಶಿಕ್ಷಕರು ಪ್ರತಿ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆ. ನಗರದ ಪ್ರತಿ ಬ್ಲಾಕ್‌ಗೆ ಒಬ್ಬರಂತೆ ಒಟ್ಟು 140 ಬಿಎಲ್‌ಒ ಗಳನ್ನು ಈ ಕಾರ್ಯಕ್ಕೆ ನಿಯೋಜಿಸಲಾಗಿದೆ ಎಂದು ವಿವರಿಸಿದರು.

ಜನಗಣತಿಯ ಸಂದರ್ಭದಲ್ಲಿ ಸಾರ್ವಜನಿಕರು ನೀಡುವ ಮಾಹಿತಿಯು ಅತ್ಯಂತ ಗೌಪ್ಯ ವಾಗಿರುತ್ತದೆ. ಈ ಮಾಹಿತಿಯನ್ನು ಯಾವುದೇ ತನಿಖಾ ಸಂಸ್ಥೆಗಳಿಗಾಗಲಿ ಅಥವಾ ಇತರ ಉದ್ದೇಶಗಳಿಗಾಗಲಿ ಬಳಸಲಾಗುವುದಿಲ್ಲ. ಇದು ಕೇವಲ ರಾಷ್ಟ್ರದ ಅಭಿವೃದ್ಧಿ ಮತ್ತು ಯೋಜನಾ ಉದ್ದೇಶಕ್ಕಾಗಿ ಮಾತ್ರ ಬಳಸಲ್ಪಡುತ್ತದೆ ಎಂದು ಪೌರಾಯುಕ್ತರು ಸ್ಪಷ್ಟಪಡಿಸಿದರು.

### ಹಣಕ್ಕಾಗಿ ವಿಜ್ಞಾನದ ಶಕ್ತಿ ಬಳಸದಿರಿ

• ಉದಯವಾಹಿನಿ, ತುಮಕೂರು

ಉದಯವಾಹಿನಿ ಚಿತ್ರ



ವಿಜ್ಞಾನದ ಶಕ್ತಿಯನ್ನು ಹಣಕ್ಕಾಗಿ ಬಳಸದೆ ಸಮಾಜದ ಉತ್ತಮ ಕೆಲಸಗಳಿಗೆ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಬೆಂಗಳೂರಿನ ನ್ಯಾನೋ ಮತ್ತು ಸಾಫ್ಟ್ ಮ್ಯಾಟರ್ ಸೈನ್ಸಸ್ ಕೇಂದ್ರದ ಹಿರಿಯ ವಿಜ್ಞಾನಿ ಪ್ರೊ.ಸಿ.ವಿ.ಯಲಮಗ್ಗಡ್ ಸಲಹೆ ಮಾಡಿದರು. ವಿಶ್ವವಿದ್ಯಾಲಯ ರಸಾಯನಶಾಸ್ತ್ರ ವಿಭಾಗಗಳ ಆಶ್ರಯದಲ್ಲಿ ಮಂಗಳವಾರ 'ರಸಾಯನ ವಿಜ್ಞಾನ ಸಂಶೋಧನೆಯಲ್ಲಿ ಉದಯೋನ್ಮುಖ ಪ್ರವೃತ್ತಿಗಳು ಕುರಿತು ಹಮ್ಮಿಕೊಂಡಿದ್ದ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ಪ್ರತಿದಿನವೂ ರಸಾಯನಶಾಸ್ತ್ರವು ಹೊಸ ಆಯಾಮ ಪಡೆಯುತ್ತಿದೆ. ಒಂದು ಚಿಂತನೆಗೂ ಮತ್ತೊಂದು ಚಿಂತನೆಗೂ ವ್ಯತ್ಯಾಸವಿರುವುದು ಸಹಜ. ವಿಜ್ಞಾನದ ಶಕ್ತಿಯನ್ನು ಒಳ್ಳೆಯದು, ಕೆಟ್ಟದ್ದಕ್ಕೂ ಬಳಸಬಹುದು. ಆದರೆ, ಹಣಕ್ಕಾಗಿ ಬಳಸಬಾರದು ಎಂದರು.

ನೀರಿನ ಸಮಸ್ಯೆಯ ಬಗ್ಗೆ ಆತಂಕಪಡುವ ಬದಲು, ನೀರೇ ಇಲ್ಲವೆಂದು ಕೊರಗುವುದಕ್ಕಿಂತ, ವಿಜ್ಞಾನದ ಮೂಲಕ ಸಮಸ್ಯೆಯನ್ನು ಹೇಗೆ ಬಗೆಹರಿಸಬಹುದು ಎಂಬುದರತ್ತ ಸಂಶೋಧನೆಗಳು ನಡೆಯಬೇಕು. ಬೆಂಗಳೂರಿನಲ್ಲಿ ನೀರಿನ ಅಭಾವವಿದ್ದರೆ, ಹೇರಳವಾಗಿದೆ. ಲಭ್ಯವಿರುವ ಸಂಪನ್ಮೂಲಗಳನ್ನು ಎಲ್ಲರಿಗೂ ತಲುಪುವಂತೆ ವಿಜ್ಞಾನದ ಮೂಲಕ ಮಾಡಬೇಕು ಎಂದು ಹೇಳಿದರು.

ಕುಲಪತಿ ಪ್ರೊ.ಎಂ.ವೆಂಕಟೇಶ್ವರಲು, ರಸಾಯಣಶಾಸ್ತ್ರ ಒಂದು ನಿಗೂಢ. ಇದು ವಿಜ್ಞಾನದ ಕೇಂದ್ರ ಬಿಂದು. ಕೆಲವರು ಸಮಸ್ಯೆ ಗುರುತಿಸಿದರೆ, ಇನ್ನು ಕೆಲವರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಾರೆ' ಎಂಬ ಆಶಯ ವ್ಯಕ್ತಪಡಿಸಿದರು.

ಅಂತರಾಳದಿಂದ... EDITORIAL

# ಎನ್‌ಜಿಒಗಳ ಮೇಲೆ ಬಿಗಿಹಿಡಿತ ಸರ್ಕಾರಕ್ಕೆ ಅನುಕೂಲಕರ ಮಸೂದೆ



ಲೋಕಸಭೆಯಲ್ಲಿ ಕಳೆದ ವಾರ ಮಂಡನೆ ಆಗಿರುವ 'ವಿದೇಶಿ ದೇಣಿಗೆ (ನಿಯಂತ್ರಣ) ತಿದ್ದುಪಡಿ ಮಸೂದೆ 2026' ಸರ್ಕಾರೇತರ ಸಂಸ್ಥೆಗಳ (ಎನ್‌ಜಿಒ) ಚಟುವಟಿಕೆ ಮೇಲೆ ನಿಯಂತ್ರಣ ಸಾಧಿಸಲು ಹಾಗೂ ಅವುಗಳ ಮೇಲಿನ ಹಿಡಿತವನ್ನು ಇನ್ನಷ್ಟು ಬಲಗೊಳಿಸಲು ಕೇಂದ್ರ ಸರ್ಕಾರಕ್ಕೆ ಅವಕಾಶ ಕಲ್ಪಿಸಲಿದೆ. ಕಾನೂನು ಪ್ರಕಾರ ನೋಂದಣಿ ರದ್ದುಗೊಂಡಿರುವ ಇಲ್ಲವೇ ನಿರ್ಬಂಧಕ್ಕೊಳಗಾಗಿರುವ ಎನ್‌ಜಿಒಗಳ ವಿದೇಶಿ ನಿಧಿಗಳು ಮತ್ತು ಸ್ವತ್ತುಗಳ ನಿರ್ವಹಣೆಗಾಗಿ 'ನಿರ್ದಿಷ್ಟ ಪ್ರಾಧಿಕಾರ'ವೊಂದನ್ನು ಸ್ಥಾಪಿಸಲು ಮಸೂದೆ ಉದ್ದೇಶಿಸಿದೆ. 2010ರ ಮೂಲಶಾಸನದಲ್ಲಿನ ಲೋಪಗಳನ್ನು ಸರಿಪಡಿಸುವುದು ಮಸೂದೆಯ ಉದ್ದೇಶವಾಗಿದೆ ಎಂದು ಸರ್ಕಾರ ಹೇಳಿದೆ. ವಿದೇಶಗಳಿಂದ ಪಡೆಯುವ ದೇಣಿಗೆಗಳ ಮೇಲ್ವಿಚಾರಣೆ ಹಾಗೂ ನಿರ್ವಹಣೆಗೆ 'ಉದ್ದೇಶಿತ ಪ್ರಾಧಿಕಾರ'ದ ಮೂಲಕ ಸಮಗ್ರ ಚೌಕಟ್ಟು ರೂಪಿಸುವ ಅವಕಾಶವನ್ನು ಈ ಮಸೂದೆ ಒಳಗೊಂಡಿದೆ ಎಂದು ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಹೇಳಿದ್ದಾರೆ. ಆದರೆ, ವಾಸ್ತವದಲ್ಲಿ ಇದು ಎನ್‌ಜಿಒಗಳನ್ನು ದುರ್ಬಲಗೊಳಿಸಲಿದೆ ಹಾಗೂ ಅವುಗಳನ್ನು ಸರ್ಕಾರದ ಕಠಿಣ ನಿಯಂತ್ರಣಕ್ಕೆ ಒಳಪಡಿಸಲಿದೆ.


ಎನ್‌ಜಿಒಗಳ ಕುರಿತ ಸರ್ಕಾರದ ಅಸಮಾಧಾನ ರಹಸ್ಯವೇನೂ ಅಲ್ಲ. ಉದ್ದೇಶಿತ ತಿದ್ದುಪಡಿಯು ಅವುಗಳನ್ನು ಮತ್ತಷ್ಟು ತೊಂದರೆಗೊಳಪಡಿಸಲು ಹೊಸ ಸಾಧನವನ್ನು ಸರ್ಕಾರಕ್ಕೆ ಒದಗಿಸಲಿದೆ. ಈ ಹಿಂದೆಯೂ ಸರ್ಕಾರ ಅಳವಡಿಸಿಕೊಂಡಿದ್ದ ನೀತಿಗಳು ಎನ್‌ಜಿಒಗಳ ಕಾರ್ಯಾಚರಣೆಯನ್ನು ಕಠಿಣಗೊಳಿಸಿದ್ದವು ಹಾಗೂ ಕೆಲವು ಸರ್ಕಾರೇತರ ಸಂಸ್ಥೆಗಳು ಮುಚ್ಚಲು ಕಾರಣವಾಗಿದ್ದವು.

ಪರವಾನಗಿ ರದ್ದಾಗಿರುವ ಅಥವಾ ಅಮಾನತುಗೊಂಡಿರುವ ಎನ್‌ಜಿಒಗಳಿಗೆ ಸೇರಿದ, ವಿದೇಶಿ ದೇಣಿಗೆಯನ್ನು ಬಳಸಿ ಕೊಂಡು ನಿರ್ಮಿಸಿರುವ ಆಸ್ತಿಗಳನ್ನು ವಶಕ್ಕೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸುವ ವಿವಾದಾಸ್ಪದ ಪ್ರಸ್ತಾವ ಮಸೂದೆಯಲ್ಲಿದೆ. ಅಂಥ ಆಸ್ತಿಗಳನ್ನು 'ಸಾರ್ವಜನಿಕ ಉದ್ದೇಶ'ಗಳಿಗಾಗಿ ಬಳಸುವ, ನಿರ್ವಹಿಸುವ, ವರ್ಗಾಯಿಸುವ ಅಥವಾ ವಿಲೇವಾರಿ ಮಾಡುವ ಅಧಿಕಾರ ಪ್ರಾಧಿಕಾರಕ್ಕೆ ದೊರೆಯಲಿದೆ. ಸರ್ಕಾರದ ಪೂರ್ವಾನುಮತಿ ಇಲ್ಲದೆ, ವಿದೇಶಿ ನಿಧಿಯಿಂದ ನಿರ್ಮಿಸಲಾದ ಸ್ವತ್ತುಗಳ ವರ್ಗಾವಣೆ ಅಥವಾ ವಿಲೇವಾರಿಗೂ ನಿರ್ಬಂಧ ವಿಧಿಸಲಾಗಿದೆ. ಈ ನಿರ್ಬಂಧಗಳು ಸರ್ಕಾರೇತರ ಸಂಸ್ಥೆಗಳ ಸ್ವಾಯತ್ತ ಕಾರ್ಯಾಚರಣೆಯ ಮೇಲೆ ದುಷ್ಪರಿಣಾಮ ಬೀರಲಿವೆ.

> **ಮಾನವ ಹಕ್ಕುಗಳು ಹಾಗೂ ನಾಗರಿಕರ ಹಕ್ಕುಗಳ ರಕ್ಷಣೆಗಾಗಿ ಕಾರ್ಯ ನಿರ್ವಹಿಸುವ ಎನ್‌ಜಿಒಗಳು ಸದಾ ಹೆಚ್ಚಿನ ಸಂಕಷ್ಟಕ್ಕೆ ಗುರಿಯಾಗುತ್ತಿರುತ್ತವೆ. ಸುಮಾರು ಒಂದು ದಶಕದ ಅವಧಿಯಲ್ಲಿ 20,711 ಸಂಸ್ಥೆಗಳ ವಿದೇಶಿ ದೇಣಿಗೆಗಳ ಪರವಾನಗಿ ರದ್ದುಪಡಿಸಲಾಗಿದೆ.**

ರಾಜ್ಯ ಸರ್ಕಾರಗಳು ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಗೆ (ಎಫ್‌ಸಿಆರ್‌ಎ) ಸಂಬಂಧಿಸಿದ ಯಾವುದೇ ತನಿಖೆಯನ್ನು ಆರಂಭಿಸುವ ಮುನ್ನ ಕೇಂದ್ರದ ಅನುಮತಿಯನ್ನು ಪಡೆಯಬೇಕು ಎನ್ನುವ ನಿಯಮವು ರಾಜ್ಯಗಳ ಅಧಿಕಾರವನ್ನು ಮಿತಗೊಳಿಸುವಂತಿದೆ ಹಾಗೂ ಒಕ್ಕೂಟ ತತ್ತ್ವಕ್ಕೆ ವಿರುದ್ಧವಾದುದಾಗಿದೆ. ಪ್ರಸಕ್ತ ಮಸೂದೆಯು 2010ರ ಕಾಯ್ದೆಯನ್ನು ಕಠಿಣಗೊಳಿಸುತ್ತಲೇ ಹೋಗಿರುವ 2016, 2018 ಮತ್ತು 2020ರಲ್ಲಿ ತರಲಾದ ತಿದ್ದುಪಡಿಗಳ ಮುಂದುವರಿಕೆಯಾಗಿದೆ. ನಿರ್ದಿಷ್ಟ ಪ್ರಾಧಿಕಾರಕ್ಕೆ ನೀಡಲಾಗುವ ಅಧಿಕಾರವು ವಿವೇಚನೆಗೆ ಒಳಪಟ್ಟಿದ್ದು, ಅನಿಯಂತ್ರಿತ ಹಾಗೂ ವ್ಯಕ್ತಿನಿಷ್ಠತೆಗೆ ಅವಕಾಶ ಕಲ್ಪಿಸುವ ಸಾಧ್ಯತೆಯಿದೆ. ಆಸ್ತಿ ಜಪ್ತಿ ಮಾಡುವ ಪರಮಾಧಿಕಾರವು, ಸಂಸ್ಥೆಯನ್ನು ಕೊನೆಗಾಣಿಸುವುದಕ್ಕೂ ಕಾರಣ ಆಗಬಹುದಾಗಿದೆ. ಸ್ವದೇಶಿ ನಿಧಿ ಹಾಗೂ ವಿದೇಶಿ ದೇಣಿಗೆ ಎರಡನ್ನೂ ಬಳಸಿಕೊಂಡು ಸ್ವತ್ತುಗಳನ್ನು ಸೃಜಿಸಿರುವ ಉದಾಹರಣೆಗಳೂ ಇದ್ದು, ತೊಡಗಿಸಿರುವ ಸಂಪನ್ಮೂಲವನ್ನು ಪ್ರತ್ಯೇಕಿಸಿ ನೋಡುವುದು ಸುಲಭವಲ್ಲ. ಈ ಮಸೂದೆಯು ಸರ್ಕಾರದ ಅನುಕೂಲಕ್ಕೆ ಪೂರಕವಾಗಿ ನಿಯಮಗಳನ್ನು ಪಾಲಿಸಲು ಒತ್ತಡವನ್ನು ಸೃಷ್ಟಿಸುವಂತಿದೆ. ಸದುದ್ದೇಶದ ನಿಯಮಗಳು ಹಾಗೂ ನಿಬಂಧನೆಗಳು ಸಹ ಸರ್ಕಾರದ ನೀತಿಗಳನ್ನು ಪ್ರಶ್ನಿಸುವ ಅಥವಾ ಸರ್ಕಾರಕ್ಕೆ ಇಷ್ಟವಿಲ್ಲದ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುವ ಸಂಸ್ಥೆಗಳನ್ನು ಗುರಿಯಾಗಿಸಲು ಅನುಕೂಲ ಆಗುವಂತೆ ತಪ್ಪಾಗಿ ಅರ್ಥೈಸಬಹುದು, ದುರುಪಯೋಗಕ್ಕೆ ಕಾರಣವಾಗಬಹುದು. ಮಾನವ ಹಕ್ಕುಗಳು ಹಾಗೂ ನಾಗರಿಕರ ಹಕ್ಕುಗಳ ರಕ್ಷಣೆಗಾಗಿ ಕಾರ್ಯ ನಿರ್ವಹಿಸುವ ಎನ್‌ಜಿಒಗಳು ಸದಾ ಹೆಚ್ಚಿನ ಸಂಕಷ್ಟಕ್ಕೆ ಗುರಿಯಾಗುತ್ತಿರುತ್ತವೆ. ಸುಮಾರು ಒಂದು ದಶಕದ ಅವಧಿಯಲ್ಲಿ 20,711 ಸಂಸ್ಥೆಗಳ ವಿದೇಶಿ ದೇಣಿಗೆಗಳ ಪರವಾನಗಿಗಳನ್ನು ರದ್ದುಪಡಿಸಲಾಗಿದೆ. ಪ್ರಸ್ತುತ ಎಫ್‌ಸಿಆರ್‌ಎ ಪ್ರಮಾಣಪತ್ರವನ್ನು ಹೊಂದಿರುವ 16,000 ಸಂಸ್ಥೆಗಳಷ್ಟೇ ಉಳಿದುಕೊಂಡಿವೆ. ಸರ್ಕಾರದ ಮತ್ತೊಂದು ರಾಜಕೀಯ ಆಯುಧವಾಗಿ ಎಫ್ ಸಿಆರ್‌ಎ ಬಳಕೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿಯೇ, ವಿದೇಶಿ ದೇಣಿಗೆ ಮಸೂದೆಯನ್ನು 'ಅಪಾಯಕಾರಿ' ಎಂದು ಕರೆದಿರುವ ವಿರೋಧ ಪಕ್ಷಗಳ ಟೀಕೆ ಹಾಗೂ ನಾಗರಿಕ ಸಂಘಟನೆಗಳ ವ್ಯಾಪಕ ವಿರೋಧವನ್ನು ಗಮನಿಸಬೇಕಾಗಿದೆ.

# ಹನುಮಾನ ಜಯಂತಿ



**ಉಪಾಸನೆ**

**ಉದ್ದೇಶ : ಮಾರುತಿಯಲ್ಲಿನ ಪ್ರಕಟ ಶಕ್ತಿಯು (ಶೇ.72) ಇತರ ದೇವತೆಗಳ ಪ್ರಕಟ ಶಕ್ತಿಯ (ಶೇ.10) ತುಲನೆಯಲ್ಲಿ ಅಧಿಕ ಪ್ರಮಾಣದಲ್ಲಿರುವುದರಿಂದ ಮುಂದಿನ ಕಾರಣಗಳಿಗಾಗಿ ಮಾರುತಿಯ ಉಪಾಸನೆಯನ್ನು ಮಾಡುತ್ತಾರೆ.**

**ಮಾರುತಿಗೆ ಮಾಡಬೇಕಾದ ಕೆಲವು ಪ್ರಾರ್ಥನೆಗಳು**

ಹೇ ಮಾರುತಿ, ನೀನು ಹೇಗೆ ಶ್ರೀರಾಮಚಂದ್ರನ ದಾಸ್ಯಭಕ್ತಿಯನ್ನು ಮಾಡಿದೆಯೋ, ಹಾಗೆಯೇ ನನಗೂ ಭಕ್ತಿಯನ್ನು ಮಾಡಲು ಕಲಿಸು, ಇದೇ ನಿನ್ನ ಚರಣಗಳಲ್ಲಿ ಪ್ರಾರ್ಥನೆ !

ಹೇ ಮಾರುತಿ, ರಾಷ್ಟ್ರರಕ್ಷಣೆ-ಧರ್ಮರಕ್ಷಣೆಗಾಗಿ ನೀನು ನನಗೆ ಭಕ್ತಿ ಮತ್ತು ಶಕ್ತಿಯನ್ನು ಕೊಡು, ಇದೇ ನಿನ್ನ ಚರಣಗಳಲ್ಲಿ ಪ್ರಾರ್ಥನೆ !

ರಾಜಾ ದಶರಥನು ಪುತ್ರಪ್ರಾಪ್ತಿಗಾಗಿ 'ಪುತ್ರಕಾಮೇಷ್ಟಿ ಯಜ್ಞ'ವನ್ನು ಮಾಡಿದನು. ಆಗ ಯಜ್ಞದಿಂದ ಅಗ್ನಿದೇವನು ಪ್ರತ್ಯಕ್ಷನಾಗಿ ದಶರಥನ ರಾಣಿಯರಿಗಾಗಿ ಪಾಯಸವನ್ನು ನೀಡಿದನು. ದಶರಥನ ರಾಣಿಯರಂತೆಯೇ ತಪಸ್ಸನ್ನು ಮಾಡುವ ಅಂಜನೀಗೂ ಪಾಯಸವು ದೊರಕಿತ್ತು ಮತ್ತು ಅದರಿಂದಲೇ ಮಾರುತಿಯ ಜನ್ಮವಾಗಿತ್ತು. ಆ ದಿನ ಚೈತ್ರ ಪೌರ್ಣಿಮೆಯಾಗಿತ್ತು. ಈ ದಿನವನ್ನು 'ಹನುಮಾನ್ ಜಯಂತಿ' ಎಂದು ಆಚರಿಸುತ್ತಾರೆ.


**ತಿಥಿ :** ಕೆಲವು ಪಂಚಾಂಗಗಳ ಪ್ರಕಾರ ಆಶ್ವಯುಜ ಕೃಷ್ಣ ಚತುರ್ದಶಿಯು ಹನುಮಂತನ ಜನ್ಮತಿಥಿಯಾಗಿದೆ ಮತ್ತು ಇನ್ನೂ ಕೆಲವರ ಪ್ರಕಾರ ಚೈತ್ರ ಹುಣ್ಣಿಮೆಯು ಹನುಮಂತನ ಜನ್ಮತಿಥಿಯಾಗಿದೆ. ಕರ್ನಾಟಕದಲ್ಲಿ ಹನುಮಂತ ಜಯಂತಿಯನ್ನು ಚೈತ್ರ ಹುಣ್ಣಿಮೆಯಂದು ಆಚರಿಸುತ್ತಾರೆ.

**ಮಹತ್ವ :** ಹನುಮಂತ ಜಯಂತಿಯಂದು ಹನುಮಂತತತ್ತ್ವವು ಎಂದಿಗಿಂತ 1000 ಪಟ್ಟು ಹೆಚ್ಚು ಕಾರ್ಯನಿರತವಾಗಿರುತ್ತದೆ. ಈ ತಿಥಿಗೆ 'ಶ್ರೀ ಹನುಮತೇ ನಮಃ ।' ನಾಮಜಪ, ಹಾಗೆಯೇ ಹನುಮಂತನ ಇತರ ಉಪಾಸನೆಯನ್ನು ಭಾವಪೂರ್ಣವಾಗಿ ಮಾಡುವುದರಿಂದ ಹನುಮಂತತತ್ತ್ವದ ಲಾಭವು ಹೆಚ್ಚೆಚ್ಚು ದೊರೆಯಲು ಸಹಾಯವಾಗುತ್ತದೆ.

**ಉತ್ಸವವನ್ನು ಆಚರಿಸುವ ಪದ್ಧತಿ :** ಈ ದಿನ ಹನುಮಂತನ ದೇವಸ್ಥಾನದಲ್ಲಿ ಸೂರ್ಯೋದಯಕ್ಕೆ ಮೊದಲೇ ಕೀರ್ತನೆಯು ಪ್ರಾರಂಭವಾಗುತ್ತದೆ. ಸೂರ್ಯೋದಯಕ್ಕೆ ಕೀರ್ತನೆ ಮುಕ್ತಾಯಗೊಳ್ಳುತ್ತದೆ ಮತ್ತು ಹನುಮಂತನ ಜನ್ಮವಾಗುತ್ತದೆ. ನಂತರ ಹನುಮಂತನ ಮೂರ್ತಿಯನ್ನು ಪೂಜಿಸುತ್ತಾರೆ ಮತ್ತು ಎಲ್ಲಾರಿಗೂ ಪ್ರಸಾದವನ್ನು ಕೊಡುತ್ತಾರೆ.

**ಕಾರ್ಯ ಮತ್ತು ವೈಶಿಷ್ಟ್ಯಗಳು**

**ಸರ್ವಶಕ್ತಿವಂತ :** ಹುಟ್ಟಿದ ಕೂಡಲೇ ಮಾರುತಿಯು ಸೂರ್ಯನನ್ನು ನುಂಗಲು ಹಾರಿದನು ಎಂಬ ಕಥೆಯಿದೆ, ಇದರಿಂದ ವಾಯುಪುತ್ರ ಮಾರುತಿಯು ಸೂರ್ಯನನ್ನು ಜಯಿಸುವವನಾಗಿದ್ದನು ಎನ್ನುವುದು ತಿಳಿಯುತ್ತದೆ. ಪೃಥ್ವಿ, ಆಪ, ತೇಜ, ವಾಯು ಮತ್ತು ಆಕಾಶ ಈ ತತ್ತ್ವಗಳಲ್ಲಿ ವಾಯುತತ್ತ್ವವು ತೇಜತತ್ತ್ವಕ್ಕಿಂತಲೂ ಹೆಚ್ಚು ಸೂಕ್ಷ್ಮ, ಅಂದರೆ ಹೆಚ್ಚು ಶಕ್ತಿಯುಳ್ಳದ್ದಾಗಿದೆ.



**ಭೂತ ಮತ್ತು ಮಾರುತಿ :** ಎಲ್ಲಾ ದೇವತೆಗಳಲ್ಲಿ ಕೇವಲ ಮಾರುತಿಗೆ ಮಾತ್ರ ಕೆಟ್ಟ ಶಕ್ತಿಗಳು ತೊಂದರೆಗಳನ್ನು ಕೊಡುವುದಿಲ್ಲ, ಲಂಕೆಯಲ್ಲಿ ಲಕ್ಷಗಟ್ಟಲೆ ರಾಕ್ಷಸರಿದ್ದರು, ಆದರೆ ಅವರಿಗೆ ಮಾರುತಿಗೆ ತೊಂದರೆ ಕೊಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಮಾರುತಿಗೆ 'ಭೂತಗಳ ಸ್ವಾಮಿ' ಎನ್ನುತ್ತಾರೆ. ಯಾರನ್ನಾದರೂ ಭೂತವು ಹಿಡಿದಿದ್ದರೆ, ಆ ವ್ಯಕ್ತಿಯನ್ನು ಮಾರುತಿಯ ದೇವಸ್ಥಾನಕ್ಕೆ ಒಯ್ಯುತ್ತಾರೆ ಅಥವಾ ಮಾರುತಿ ಸ್ತೋತ್ರವನ್ನು ಪಠಿಸುತ್ತಾರೆ. ಇದರಿಂದ ಅವನ ತೊಂದರೆಗಳು ಕಡಿಮೆಯಾಗದಿದ್ದರೆ ಅವನ ಮೇಲಿನಿಂದ ತೆಂಗಿನಕಾಯಿಯನ್ನು ನಿವಾಳಿಸಿ ಮಾರುತಿಯ ದೇವಸ್ಥಾನದಲ್ಲಿ ಒಡೆಯುತ್ತಾರೆ. ಅವನ ಮೇಲಿನಿಂದ ತೆಂಗಿನಕಾಯಿಯನ್ನು ನಿವಾಳಿಸುವುದರಿಂದ ಅವನಲ್ಲಿದ್ದ ಕೆಟ್ಟ ಶಕ್ತಿಯು ತೆಂಗಿನಕಾಯಿಯಲ್ಲಿ ಪ್ರವೇಶಿಸುತ್ತದೆ ಮತ್ತು ಆ ತೆಂಗಿನಕಾಯಿಯನ್ನು ಮಾರುತಿಯ ದೇವಸ್ಥಾನದಲ್ಲಿ ಒಡೆಯುವುದರಿಂದ ಅದರಲ್ಲಿರುವ ಕೆಟ್ಟ ಶಕ್ತಿಯು ಮಾರುತಿಯ ಸಾಮರ್ಥ್ಯದಿಂದ ನಾಶವಾಗುತ್ತದೆ. ನಂತರ ಆ ತೆಂಗಿನಕಾಯಿಯನ್ನು ವಿಸರ್ಜನೆ ಮಾಡುತ್ತಾರೆ.

**ಮಹಾಪರಾಕ್ರಮಿ :** ರಾಮ-ರಾವಣರ ಯುದ್ಧದಲ್ಲಿ ಬ್ರಹ್ಮಾಸ್ತ್ರದಿಂದ ರಾಮ, ಲಕ್ಷ್ಮಣ, ಸುಗ್ರೀವ ಇತ್ಯಾದಿ ವೀರರು ಮೂರ್ಛೆ ಹೋದಾಗ ಜಾಂಬವಂತನು ಹನುಮಂತನ ಪರಾಕ್ರಮದ ಬಗ್ಗೆ ಹೀಗೆ ವರ್ಣನೆ ಮಾಡಿದ್ದನು – ವಾನರಶ್ರೇಷ್ಠ ಹನುಮಂತನು ಜೀವಂತವಾಗಿದ್ದಾಗ ಎಲ್ಲಾ ಸೈನ್ಯವು ಮರಣ ಹೊಂದಿದರೂ ಅವರು ಮರಣ ಹೊಂದದಂತೆ ಆಗಿದೆ; ಆದರೆ ಹನುಮಂತನು ಪ್ರಾಣತ್ಯಾಗ ಮಾಡಿದರೆ ನಾವು ಜೀವಂತವಾಗಿದ್ದರೂ ಮೃತರಾದಂತೆಯೇ ಆಗಿದೆ. ಹನುಮಂತನು ಜಂಬು-ಮಾಲಿ, ಅಕ್ಷ, ಧೂಮ್ರಾಕ್ಷ, ನಿಕುಂಭ ಇತ್ಯಾದಿ ಬಲಾಢ್ಯ ವೀರರನ್ನು ನಾಶ ಮಾಡಿದನು.

ಅವನು ರಾವಣನನ್ನೂ ಮೂರ್ಛಿತಗೊಳಿಸಿದನು. ಸಮುದ್ರ ಉಡ್ಡಾಣ, ಲಂಕೆಯ ದಹನ, ದ್ರೋಣಗಿರಿ ಪರ್ವತವನ್ನು ತರುವುದು ಇತ್ಯಾದಿ ಘಟನೆಗಳು ಹನುಮಂತನ ಶೌರ್ಯದ ಪ್ರತೀಕವಾಗಿವೆ.

**ಜಿತೇಂದ್ರಿಯ :** ಸೀತೆಯನ್ನು ಶೋಧಿಸಲು ರಾವಣನ ಅಂತಃಪುರದೊಳಗೆ ಪ್ರವೇಶಿಸಿದ ಮಾರುತಿಯ ಮನಃಸ್ಥಿತಿಯು ಅವನ ಉಚ್ಚಚಾರಿತ್ರ್ಯದ ನಿದರ್ಶಕವಾಗಿದೆ. ಅವನು ಸ್ವತಃ ಹೇಳುತ್ತಾನೆ, 'ನಿಶ್ಚಿಂತೆಯಿಂದ ಬಿದ್ದಿರುವ ಈ ಎಲ್ಲಾ ರಾವಣನ ಸ್ತ್ರೀಯರನ್ನು ನಾನು ಹೀಗೆ ನೋಡಿರುವುದು ನಿಜ, ಆದರೆ ಅವರನ್ನು ನೋಡಿ ನನ್ನ ಮನಸ್ಸಿನಲ್ಲಿ ವಿಕಾರವುಂಟಾಗಲಿಲ್ಲ' ಅನೇಕ ಸಂತರೂ ಈ ಜಿತೇಂದ್ರಿಯ ಮಾರುತಿಯ ಪೂಜೆಯನ್ನು ಮಾಡಿ ಅವನ ಆದರ್ಶವನ್ನು ಸಮಾಜದ ಮುಂದೆ ಇಟ್ಟಿದ್ದಾರೆ.

**ಬ್ರಾಹ್ಮತೇಜ ಮತ್ತು ಕ್ಷಾತ್ರತೇಜದ ಪ್ರತೀಕ :** ಹಿಂದೂ ಧರ್ಮಗ್ರಂಥಗಳಲ್ಲೊಂದಾದ ರಾಮಾಯಣದಲ್ಲಿನ ಪ್ರಮುಖ ಪಾತ್ರಗಳಲ್ಲೊಬ್ಬ ಹಾಗೂ ಹಿಂದು ದೇವತೆಗಳಲ್ಲಿ ಒಬ್ಬ. ವಾಯುಪುತ್ರ, ಕಪಿವೀರನೆಂದು ಕರೆಯಲ್ಪಡುವ ಹನುಮಂತ ಕೇಸರಿ ಎಂಬ ವಾನರ ಮತ್ತು ಅಂಜನಾದೇವಿಯ ಮಗ ಮತ್ತು ರಾಮನ ಪರಮಭಕ್ತ. ಶಕ್ತಿಯ ದೇವತೆಯೆಂದು ಹನುಮಂತನನ್ನು ಪೂಜಿಸಲಾಗುತ್ತದೆ.

ಹನುಮಂತ ಕಿಷ್ಕಿಂಧೆಯಲ್ಲಿ ಸುಗ್ರೀವನ ಜೊತೆಯಲ್ಲಿರುತ್ತಾನೆ. ಸೀತೆಯನ್ನು ಹುಡುಕಿಕೊಂಡು ರಾಮ ಕಿಷ್ಕಿಂಧೆಗೆ ಬಂದಾಗ ಹನುಮಂತನಿಗೆ ರಾಮನೊಡನೆ ಭೇಟಿಯಾಗುತ್ತದೆ. ತನ್ನ ಸ್ವಾಮಿಯಾದ ರಾಮನಿಗೆ ಸಹಾಯ ಮಾಡಲು ಮುಂದಾಗುತ್ತಾನೆ. ನೂರು ಯೋಜನ ವಿಸ್ತಾರದ ಮಹಾ ಸಮುದ್ರವನ್ನು ಹಾರಿ ಸೀತೆಯು ಲಂಕೆಯಲ್ಲಿರುವ ವಿಷಯವನ್ನು ರಾಮನಿಗೆ ತಿಳಿಸುತ್ತಾನೆ. ಮುಂದೆ ರಾವಣನ ಜೊತೆ ಯುದ್ಧ ಮಾಡಿ, ಸೀತೆಯನ್ನು ಲಂಕೆಯಿಂದ ಕರೆದುಕೊಂಡು ಬರಲು ರಾಮನಿಗೆ ಹನುಮಂತ ಹಲವು ವಿಧದಲ್ಲಿ ನೆರವಾಗುತ್ತಾನೆ. ಹನುಮಂತನು ಧರಿಸಿರುವ ಜನಿವಾರವು ಬ್ರಾಹ್ಮತೇಜದ ಪ್ರತೀಕವಾಗಿದೆ. ಹನುಮಂತನು ಶಿವನ ಅವತಾರವಾಗಿರುವುದರಿಂದ ಅವರಲ್ಲಿ ಲಯ ಮಾಡುವ ಸಾಮರ್ಥ್ಯವಿದೆ. ರಾಮನ ಭಕ್ತನಾದ ಕಾರಣ ಅವರಲ್ಲಿ ವಿಷ್ಣುವಿನ ತತ್ತ್ವವಿದೆ. ಹೀಗಾಗಿ ಅವರಲ್ಲಿ ಸ್ಥಿತಿ ಅಂದರೆ ಸಾತ್ತ್ವಿಕ ತತ್ತ್ವವೂ ಇದೆ. ಹನುಮಂತನಲ್ಲಿ ಬ್ರಾಹ್ಮತೇಜ ಮತ್ತು ಕ್ಷಾತ್ರತೇಜ ಎರಡೂ ಇರುವುದರಿಂದ ಯುದ್ಧದಲ್ಲಿ ಹನುಮಂತನು ಅವಶ್ಯಕತೆ ಅನುಸಾರ ಅದನ್ನು ಉಪಯೋಗಿಸುತ್ತಾರೆ. ಕೌರವ ಪಾಂಡವರ ಯುದ್ಧದಲ್ಲಿ ಶ್ರೀ ಕೃಷ್ಣನು ಅರ್ಜುನನ ರಥದ ಮೇಲೆ ಹನುಮಂತನಿಗೆ ಸ್ಥಾನವನ್ನು ನೀಡಿದರು. ಆಗ ಅರ್ಜುನ ಮತ್ತು ಶ್ರೀ ಕೃಷ್ಣನ ಮೇಲೆ ಬರುವ ಎಲ್ಲಾ ಆಯುಧಗಳನ್ನು ಹನುಮಂತನು ನಾಶ ಮಾಡುತ್ತಿದ್ದರು.

ರೋಗನಿವಾರಣೆ : ರೋಗಿ ವ್ಯಕ್ತಿಗಳಿಗೆ ಒಳ್ಳೆಯದಾಗಲು ಅವರನ್ನು ಹನುಮಂತನ ದೇವಸ್ಥಾನಕ್ಕೆ ಕರೆದೊಯ್ಯುವ ಪದ್ಧತಿಯಿದೆ. ರೋಗಗಳಿಂದ ಮುಕ್ತರಾಗಲು ವೀರಹನುಮಂತನ ಮಂತ್ರವನ್ನೂ ಪಠಿಸುತ್ತಾರೆ.

**(ಹೆಚ್ಚಿನ ಮಾಹಿತಿಗಾಗಿ ಸನಾತನ ಸಂಸ್ಥೆ ನಿರ್ಮಿಸಿದ ಕಿರುಗ್ರಂಥ 'ಮಾರುತಿ' ಓದಿರಿ.)**

ಸಂಗ್ರಹ :
**ಶ್ರೀ. ವಿನೋದ್ ಕಾಮತ್**
ರಾಜ್ಯ ವಕ್ತಾರರು, ಸನಾತನ ಸಂಸ್ಥೆ
(ಸಂಪರ್ಕ : 9342599299)

# ರೈತ ದೇಶದ ಹೃದಯ, ನಮ್ಮ ಜೀವನದ ಆಧಾರ



ರೈತನು ನಮ್ಮ ದೇಶದ ಅಡಿಗಲ್ಲು. ನಾವು ದಿನನಿತ್ಯ ಸೇವಿಸುವ ಅನ್ನದ ಹಿಂದೆ ಇರುವ ಪರಿಶ್ರಮದ ಪ್ರತೀಕವೇ ರೈತ. ಅವನ ಶ್ರಮ, ಅವನ ತ್ಯಾಗ ಮತ್ತು ಅವನ ಧೈರ್ಯವೇ ನಮ್ಮ ಜೀವನವನ್ನು ಸಾಗಿಸುವ ಶಕ್ತಿ. ಆದ್ದರಿಂದಲೇ ''ರೈತ ದೇಶದ ಬೆನ್ನೆಲುಬು'' ಎಂದು ಕರೆಯಲಾಗುತ್ತದೆ.

ರೈತನ ಜೀವನ ಸುಲಭವಲ್ಲ. ಬೆಳಿಗ್ಗೆ ಸೂರ್ಯೋದಯಕ್ಕೂ ಮುನ್ನವೇ ಎದ್ದು ಹೊಲಕ್ಕೆ ಹೋಗಿ, ಸಂಜೆತನಕ ದುಡಿದು ಬೆಳೆ ಬೆಳೆಸುವುದು ಅವನ ದಿನಚರಿ. ಮಳೆ ಬಾರದೇ ಇದ್ದರೂ ಕಷ್ಟ, ಹೆಚ್ಚು ಬಂದರೂ ಕಷ್ಟ ಪ್ರಕೃತಿಯ ಮೇಲೆಯೇ ಅವನ ಜೀವನ ಅವಲಂಬಿತವಾಗಿದೆ. ಒಂದು ಬೆಳೆ ವಿಫಲವಾದರೂ ಅವನಿಗೆ ದೊಡ್ಡ ನಷ್ಟವಾಗುತ್ತದೆ. ಆದರೂ ರೈತನು ತನ್ನ ನಂಬಿಕೆಯನ್ನು ಕಳೆದುಕೊಳ್ಳುವುದಿಲ್ಲ, ಮತ್ತೆ ಮತ್ತೆ ಪ್ರಯತ್ನಿಸುತ್ತಾನೆ.

ಇಂದಿನ ಆಧುನಿಕ ಯುಗದಲ್ಲಿ ಕೃಷಿಯೂ ಸಾಕಷ್ಟು ಬದಲಾವಣೆಯನ್ನು ಕಂಡಿದೆ. ಟ್ರ್ಯಾಕ್ಟರ್‌ಗಳು, ಆಧುನಿಕ ಯಂತ್ರೋಪಕರಣಗಳು, ಸುಧಾರಿತ ಬೀಜಗಳು ರೈತನ ಕೆಲಸವನ್ನು ಸ್ವಲ್ಪ ಸುಲಭಗೊಳಿಸಿವೆ. ಆದರೆ ಈ ಸೌಲಭ್ಯಗಳು ಎಲ್ಲಾ ರೈತರಿಗೆ ಸಮಾನವಾಗಿ ಲಭ್ಯವಾಗುತ್ತಿಲ್ಲ. ವಿಶೇಷವಾಗಿ ಸಣ್ಣ ಮತ್ತು ಮಧ್ಯಮ ರೈತರು ಇನ್ನೂ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.


ರೈತರ ಪ್ರಮುಖ ಸಮಸ್ಯೆಗಳಲ್ಲಿ ನೀರಿನ ಕೊರತೆ, ಸಾಲದ ಭಾರ, ಬೆಳೆಗಳಿಗೆ ಸರಿಯಾದ ಬೆಲೆ ಸಿಗದಿರುವುದು ಪ್ರಮುಖವಾಗಿವೆ. ಹಲವಾರು ಬಾರಿ ಮಧ್ಯವರ್ತಿಗಳಿಂದ ರೈತರಿಗೆ ನ್ಯಾಯಯುತ ದರ ಸಿಗುವುದಿಲ್ಲ. ಇದರ ಪರಿಣಾಮವಾಗಿ ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗುತ್ತಾರೆ.

ಆದರೂ ರೈತನು ತನ್ನ ಹೊಣೆಗಾರಿಕೆಯನ್ನು ಎಂದಿಗೂ ಮರೆತಿಲ್ಲ. ದೇಶದ ಜನರಿಗೆ ಅನ್ನ ಒದಗಿಸುವುದು ತನ್ನ ಕರ್ತವ್ಯವೆಂದು ಅವನು ನಂಬಿದ್ದಾನೆ. ಅವನ ಈ ಸೇವಾಭಾವನೆ ನಮ್ಮೆಲ್ಲರಿಗೂ ಪ್ರೇರಣೆಯಾಗಿದೆ.

ಇನ್ನೊಂದು ಪ್ರಮುಖ ವಿಷಯವೆಂದರೆ, ರೈತರು ಪರಿಸರದ ಸಂರಕ್ಷಣೆಯಲ್ಲಿಯೂ ಮಹತ್ವದ ಪಾತ್ರ ವಹಿಸುತ್ತಾರೆ. ಅವರು ಮಣ್ಣಿನ ಆರೋಗ್ಯವನ್ನು ಕಾಪಾಡುವುದು, ಮರಗಳನ್ನು ಬೆಳೆಸುವುದು ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುವಲ್ಲಿ ಸಹ ಸಹಕರಿಸುತ್ತಾರೆ. ಹೀಗಾಗಿ ರೈತರು ಕೇವಲ ಅನ್ನದಾತರು ಮಾತ್ರವಲ್ಲ, ಪರಿಸರ ರಕ್ಷಕರೂ ಆಗಿದ್ದಾರೆ.

ನಾವು ರೈತರನ್ನು ಗೌರವಿಸುವುದು ಮತ್ತು ಅವರಿಗೆ ಸಹಾಯ ಮಾಡುವುದು ನಮ್ಮ ಕರ್ತವ್ಯ. ಸರ್ಕಾರವು ರೈತರ ಸಮಸ್ಯೆಗಳನ್ನು ಪರಿಹರಿಸಲು ಹೆಚ್ಚಿನ ಯೋಜನೆಗಳನ್ನು ರೂಪಿಸಬೇಕು. ಜೊತೆಗೆ, ನಾವು ಸಹ ರೈತರ ಉತ್ಪನ್ನಗಳನ್ನು ನೇರವಾಗಿ ಖರೀದಿಸುವುದು, ಸ್ಥಳೀಯ ಉತ್ಪನ್ನಗಳನ್ನು ಬೆಂಬಲಿಸುವುದು ಮುಂತಾದ ಕ್ರಮಗಳನ್ನು ಕೈಗೊಳ್ಳಬಹುದು.

ಒಟ್ಟಿನಲ್ಲಿ, ರೈತನು ಕೇವಲ ಒಂದು ವೃತ್ತಿಯ ವ್ಯಕ್ತಿ ಅಲ್ಲ. ಅವನು ನಮ್ಮ ಜೀವನದ ಅಡಿಪಾಯ. ಅವನ ಪರಿಶ್ರಮದಿಂದಲೇ ನಮ್ಮ ಬದುಕು ಸಾಧ್ಯವಾಗುತ್ತದೆ. ಆದ್ದರಿಂದ ರೈತನಿಗೆ ಗೌರವ ನೀಡುವುದು, ಅವನ ಸಂಕಷ್ಟಗಳನ್ನು ಅರಿತು ಸಹಾಯ ಮಾಡುವುದು ಪ್ರತಿಯೊಬ್ಬರ ಜವಾಬ್ದಾರಿ. 'ರೈತನ ಕೈಯಲ್ಲಿ ಮಣ್ಣು ಇದ್ದರೂ, ನಮ್ಮ ಜೀವನದಲ್ಲಿ ಅನ್ನವಿದೆ' ಇದು ರೈತನ ಮಹತ್ವವನ್ನು ಸಾರುವ ಶಾಶ್ವತ ಸತ್ಯ.



ವಿಶ್ವಾಸ್.ಡಿ.ಗೌಡ

# ಅಮ್ಮನ ಅಂತರಾಳ

ಅಮ್ಮನ ಅಂತರಾಳವ
ಬಲ್ಲವರಾರು ಅವಳ
ಪ್ರೀತಿ ಪ್ರೇಮ ವಾತ್ಸಲ್ಯವ
ಸವಿದವರೇ ಎಲ್ಲಾರೂ


ಬಸಿರ ಬೇನೆಯ ಸಹಿಸಿ
ನಕ್ಕಳಂದು ನನ್ನ ನೋಡಿ
ಉಸಿರ ನೀಡಿದಳು ನೋವ
ಮರೆತು ಸವಿಲಾಲಿಯ ಹಾಡಿ

ಎದೆಗೊತ್ತಿಕೊಂಡು ಕಣ್ಣಿಟ್ಟು
ಕಾಪಾಡಿದಳು ಸದಾ ಕಾಲ
ನೆತ್ತಿಯ ಮೇಲೆ ಸೂರಿನಂತೆ
ಹರಡಿಹಳು ಪ್ರೀತಿಯ ಜಾಲ

ಸಾಟಿ ಇರದ ನಿನ್ನ ಪ್ರೀತಿಯ
ಸವಿಯಬೇಕು ನಾ ಪ್ರತಿ ಕಣ
ಕೋಟಿ ಜನ್ಮವೆತ್ತಿದರೂ
ತೀರಿಸಲಾರೆ ನಾ ನಿನ್ನ ಋಣ.

ಶಿಲ್ಪ ಜಗದೀಶ್, ಹಿರಿಯೂರು





# ರಾಮಾಯಣ



ಸಂಪಾತಿಯು ಸೀತಾದೇವಿಯಿರುವ ಸ್ಥಳವನ್ನು ಅಂಗದನಿಗೆ ಹೇಳಿದ್ದು

• ಹಿಂದಿನ ಸಂಚಿಕೆಯಿಂದ

## 121 ನೆಯ ಅಧ್ಯಾಯ

**ಸಂಪಾತಿಯು ಸೀತಾದೇವಿಯಿರುವ ಸ್ಥಳವನ್ನು ಅಂಗದನಿಗೆ ಹೇಳಿದ್ದು**

ರಾವಣನು ವಿಶ್ರವಸುವಿನ ಮಗನು, ಕುಬೇರನ ತಮ್ಮನು. ಲಂಕಾಪಟ್ಟಣದಲ್ಲಿರುವನು. ಲಂಕಾದ್ವೀಪವು ಸಮುದ್ರಮಧ್ಯದಲ್ಲಿ ಇಲ್ಲಿಗೆ ನೂರುಗಾವುದ ದೂರದಲ್ಲಿರುವುದು. ಆ ದ್ವೀಪದಲ್ಲಿ ದೇವಶಿಲ್ಪಿಯಾದ ವಿಶ್ವಕರ್ಮನು ಸುವರ್ಣಮಯವಾದ ಚಾವಡಿಗಳಿಂದಲೂ ಸುವರ್ಣಮಯವಾದ ಉಪ್ಪರಿಗೆಗಳಿಂದಲೂ ಅತಿರಮಣೀಯವಾದ ಲಂಕಾಪಟ್ಟಣವನ್ನು ನಿರ್ಮಿಸಿದನು. ಆ ಪಟ್ಟಣದಲ್ಲಿ ರಾವಣನ ವಶದಲ್ಲಿ ಸೀತಾದೇವಿಯು ಹೊಂಬಣ್ಣದ ಸೀರೆಯನ್ನುಟ್ಟುಕೊಂಡು ಮುಖಕಾಂತಿಗುಂದಿ ದೈನ್ಯಭಾವದಿಂದ ರಾಕ್ಷಸಿಯರ ಕಾವಲಿನಲ್ಲಿ ಸೆರೆಯಾಗಿದ್ದಾಳೆ, ಸಮುದ್ರದಿಂದ ಸುತ್ತುವರಿಯಲ್ಪಟ್ಟ ಲಂಕಾದ್ವೀಪದಲ್ಲಿ ಜನಕರಾಯನ ಮಗಳಾದ ಸೀತಾದೇವಿಯು ಇದ್ದಾಳೆ. ನೀವು ನೂರುಗಾವುದದಾರಿ ಸಮುದ್ರವನ್ನು ದಾಟಿ ಈ ಸಮುದ್ರದ ತೆಂಕಣತೀರಕ್ಕೆ ಹೋಗಿ ಲಂಕಾಪಟ್ಟಣವನ್ನು ಪ್ರವೇಶಿಸಿದರೆ ರಾವಣನನ್ನು ಕಾಣುವಿರಿ, ಸೀತಾದೇವಿಯನ್ನೂ ಕಾಣುವಿರಿ. ನೀವು ತಾಮಸಮಾಡದೆ ವೇಗದಿಂದ ಸಮುದ್ರವನ್ನು ದಾಟಿ ಲಂಕಾಪಟ್ಟಣಕ್ಕೆ ಹೋದರೆ ಸೀತಾದೇವಿ ಯನ್ನು ಕಂಡು ತಿರುಗಿಬರುವಿರಿ. ಈ ವಿಷಯದಲ್ಲಿ ಸಂಶಯವಿಲ್ಲ. ನಾನು ಅಂತರಿಕ್ಷಲೋಕ.


ಮೂರನೆಯ ವರ್ಯಂತ ಹೋಗಿ ನಾನಾ ದಿಕ್ಕುಗಳನ್ನೂ ಕಾಂಬವನು, ಅಂತುಕ್ಷರೋಕಕ್ಕೆ ಪಕ್ಷಿಗಳೆಲ್ಲವೂ ಹೋಗುವುವಾದರೂ ಅದಕ್ಕೂ ತಾರತಮ್ಯವುಂಟು. ಅಂತರಿಕ್ಷ ಮಾರ್ಗದಲ್ಲಿರುವ ಸಪ್ತಸ್ಕಂಧಗಳಲ್ಲಿ ಭೂಲೋಕದಿಂದ ಮೊದಲನೆಯ ಸ್ಕಂಧಪರ್ಯಂತ ಧಾನ್ಯೋಪಜೀವಿಗಳಾದ ಪಕ್ಷಿಗಳು ಸಂಚರಿಸುವುವು, ಎರಡನೆಯ ಸ್ಕಂಧವರ್ಯಂತ ವಾಯಸಗಳಿಗೆ ಸಂಚಾರವುಂಟು. ಸ್ಕಂಧಪರ್ಯಂತ ಕ್ರೌಂಚಪಕ್ಷಿ ಮೊದಲಾದವುಗಳಿಗೆ ಸಂಚಾರವುಂಟು. ಗಿಡಗಗಳಿಗೆ ನಾಲ್ಕನೆಯ ಸ್ವಂಧಿಪರ್ಯಂತ ಸಂಚಾರವುಂಟು. ಹದ್ದುಗಳಿಗೆ ಐದನೆಯ ಸ್ಕಂಧದವರೆಗೂ ಸಂಚಾರವುಂಟು. ರೂಪ ಯೌವನ ಪರಾಕ್ರಮವುಳ್ಳ, ಹಂಸಪಕ್ಷಿಗಳಿಗೆ ಆರನೆಯ ಸ್ಕಂಧಪರ್ಯಂತ ಸಂಚಾರವುಂಟು. ಗರುತ್ಮಂತನಿಗೆ ಸಪ್ತಸ್ಕಂಧಪರ್ಯಂತವೂ ಸಂಚಾರವುಂಟು. ನಾವು ಗರುತ್ಮಂತನ ವಂಶದಲ್ಲಿ ಹುಟ್ಟಿದವರಾದ ಕಾರಣ ನಮಗೆ ಎಷ್ಟು ದೂರ ಹೋಗಲೂ ಸಾಮರ್ಥ್ಯವಿದೆ. ಅದಕಾರಣ ನಾನು ಎಲ್ಲಾ ದೇಶಗಳನ್ನೂ ಬಲ್ಲೆನು. ಮಾಂಸಾಹಾರಿಯಾದ ರಾವಣನು ಲೋಕದಲ್ಲಿ ನಿಂದಿತವಾದ ದಾಷ್ಟ್ಯರ್ಮವನ್ನು ಮಾಡಿದನು. ನೀವು ನನ್ನ ತಮ್ಮನಾದ ಜಟಾಯುವನ್ನು ರಾವಣನು ಕೊಂದನೆಂದು ಹೇಳಿದ್ದರಿಂದ ರಾವಣನು ನನಗೆ ಶತ್ರುವಾಗಿದ್ದಾನೆ. ನೀವು ಲಂಕಾಪಟ್ಟಣಕ್ಕೆ ಹೋಗಿ ಸೀತಾದೇವಿಯನ್ನು ಕಂಡು ಬಂದರೆ ನಿಮ್ಮಿಂದ ರಾವಣನು ನಾಶವಾಗುವನು. ಆಗ ನಾನು ನನ್ನ ವೈರಿಯಾದ ರಾವಣನ ಹಗೆಯನ್ನು ತೀರಿಸಿಕೊಂಡವನಾಗುವೆನು. ನಾನು ಇಲ್ಲಿಂದಲೇ ಲಂಕಾಪಟ್ಟಣದಲ್ಲಿರುವ ರಾವಣನನ್ನೂ ಸೀತಾದೇವಿಯನ್ನೂ ಕಾಣುತ್ತಿದ್ದೇನೆ. ನನಗೆ ಗರುತ್ತಂತನಂತೆ ದಿವ್ಯವಾದ ದೃಷ್ಟಿ ಪಾಟವವಿದೆ.

**ಮುಂದುವರಿಯುವುದು...**

**ನಾಗರಿಕತೆಯ ವಿಕಾಸದ ಹಾದಿಯಲ್ಲಿ ಮನುಷ್ಯ ನಿರ್ಮಿಸಿಕೊಂಡ ಗೋಡೆಗಳು ಅಸಂಖ್ಯಾತ. ಆದರೆ ಈ ಎಲ್ಲಾ ಭೌತಿಕ ಮತ್ತು ಮಾನಸಿಕ ಬೇಲಿಗಳನ್ನು ಕಿತ್ತೆಸೆದು, ಮನುಷ್ಯನನ್ನು ಮನುಷ್ಯನನ್ನಾಗಿ ಸಂಧಿಸುವ ಏಕೈಕ ತಾಣವಿದ್ದರೆ ಅದು 'ಆಟದ ಮೈದಾನ'. ಮೈದಾನ ಎಂಬುದು ಕೇವಲ ಸ್ನಾಯುಬಲದ ಪ್ರದರ್ಶನಕ್ಕಷ್ಟೇ ಸೀಮಿತವಾದ ಅಂಗಳವಲ್ಲ, ಅದು ಸಹಬಾಳ್ವೆಯ ಮಹಾಪಾಠಶಾಲೆ, ಅಹಂಕಾರದ ವಿಸರ್ಜನಾ ಸ್ಥಳ ಮತ್ತು ಶುದ್ಧ ಮಾನವೀಯತೆಯ ಉಗಮ ಸ್ಥಾನ.**

# ಮಾನವೀಯತೆಯ ಮೂಲವೇ ಮೈದಾನ

ಮೈದಾನದ ಒಳಗೆ ಪ್ರವೇಶಿಸುವಾಗ ಪ್ರತಿಯೊಬ್ಬನೂ ತನ್ನ ಸಾಮಾಜಿಕ ಪದವಿ, ಆರ್ಥಿಕ ಅಂತಸ್ತು ಮತ್ತು ಜನ್ಮದತ್ತವಾದ ಶ್ರೇಷ್ಠತೆಯ ವ್ಯರ್ಥ ಹಮ್ಮುಗಳನ್ನು ಹೊರಗೇ ಬಿಟ್ಟು ಬರಬೇಕಾಗುತ್ತದೆ. ಅಲ್ಲಿ ಶ್ರೀಮಂತಿಕೆಯ ದರ್ಪಕ್ಕಾಗಲಿ ಅಥವಾ ಅಧಿಕಾರದ ಅಬ್ಬರಕ್ಕಾಗಲಿ ಕಿಂಚಿತ್ತೂ ಬೆಲೆಯಿಲ್ಲ. ಎಲ್ಲಾರೂ ಒಂದೇ ತೆರನಾದ ಸಮವಸ್ತ್ರ ಧರಿಸಿದಾಗ, ವ್ಯಕ್ತಿಗಳ ನಡುವಿನ ಕೃತಕ ಅಂತರ ಮಾಯವಾಗಿ ಕೇವಲ 'ಜೀವಪರ' ಮಿಡಿತವಷ್ಟೇ ಉಳಿಯುತ್ತದೆ. ಮೈದಾನದ ಮಣ್ಣು ಎಲ್ಲರನ್ನೂ ಸಮಾನವಾಗಿ ಅಪ್ಪಿಕೊಳ್ಳುತ್ತದೆ. ಪರಸ್ಪರರ ಬೆವರಿನ ಹನಿಗಳನ್ನು ಗೌರವಿಸುವ ಈ ಪ್ರವೃತ್ತಿಯೇ ಸುಸಂಸ್ಕೃತ ಸಮಾಜದ ಮೊದಲ ಮೆಟ್ಟಿಲು.



ಯಾವುದೇ ಕ್ರೀಡೆಯು ಕೇವಲ ಶಾರೀರಿಕ ಕೌಶಲದಿಂದ ಜಯಿಸಲ್ಪಡುವುದಿಲ್ಲ, ಬದಲಿಗೆ ಅದು ನಿಯಮಗಳ ಪಾಲನೆಯಿಂದ ಶೋಭಿಸುತ್ತದೆ. ಕ್ರೀಡಾಂಗಣದಲ್ಲಿ ಕಲಿತ ಶಿಸ್ತು ಬದುಕಿನ ಹಾದಿಗೂ ದಾರಿದೀಪವಾಗುತ್ತದೆ.

ಅಂಪೈರ್ ಅಥವಾ ರೆಫರಿಯ ತೀರ್ಪನ್ನು ಮೌನವಾಗಿ ಒಪ್ಪಿಕೊಳ್ಳುವ ಗುಣವು, ಸಮಾಜದಲ್ಲಿ ಸತ್ಯ ಮತ್ತು ನೈತಿಕತೆಗೆ ತಲೆಬಾಗುವ ಸಂಸ್ಕಾರವನ್ನು ನೀಡುತ್ತದೆ. ಕ್ರೀಡೆಯಲ್ಲಿ ವಂಚನೆ ಮಾಡುವುದು ತಪ್ಪು ಎಂಬ ಅರಿವು, ಬದುಕಿನಲ್ಲಿ ಎಂದೂ ಅಡ್ಡದಾರಿ ಹಿಡಿಯಬಾರದು ಎಂಬ ವಿವೇಕವನ್ನು ಜಾಗೃತಗೊಳಿಸುತ್ತದೆ.

ಕ್ರೀಡೆ ಎಂದರೆ ಕೇವಲ ಅಂಕಿ-ಅಂಶಗಳ ಆಟವಲ್ಲ, ಅದು ಆತ್ಮಸಾಕ್ಷಿಗೆ ನೀಡುವ ಗೌರವ ಎಂಬುದಕ್ಕೆ ಕ್ರಿಕೆಟ್ ಲೋಕದ ದ್ರುವತಾರೆ ಸಚಿನ್ ತೆಂಡೂಲ್ಕರ್ ಅವರ ಬದುಕಿನ ಘಟನೆಯೇ ಅತ್ಯುತ್ತಮ ಸಾಕ್ಷಿ.

ಅಂತರರಾಷ್ಟ್ರೀಯ ಪಂದ್ಯವೊಂದರಲ್ಲಿ ಬ್ಯಾಟಿಂಗ್ ಮಾಡುತ್ತಿದ್ದಾಗ, ಎದುರಾಳಿ ಬೌಲರ್ ಎಸೆದ ಚೆಂಡು ಸಚಿನ್ ಅವರ ಬ್ಯಾಟ್‌ಗೆ ಅಲ್ಪ ತಗುಲಿ ವಿಕೆಟ್ ಕೀಪರ್ ಕೈಸೇರಿತು. ಅಂಪೈರ್ ದೃಷ್ಟಿಯಲ್ಲಿ ಅದು 'ನಾಟ್ ಔಟ್' ಆಗಿತ್ತು. ತಾಂತ್ರಿಕವಾಗಿ ಸಚಿನ್ ಮೈದಾನದಲ್ಲೇ ಉಳಿಯುವ ಅವಕಾಶವಿತ್ತು.

ಆದರೆ, ಅಂಪೈರ್‌ನ ತೀರ್ಪಿಗಾಗಿ ಕಾಯದೆ, ತಾನು 'ಔಟ್' ಎಂದು ಮನವರಿಕೆಯಾದ ತಕ್ಷಣ ಸಚಿನ್ ಪೆವಿಲಿಯನ್ ಕಡೆಗೆ ಹೆಜ್ಜೆ ಹಾಕಿದರು.

ಲೋಕವೇ ಅವರನ್ನು ಕೊಂಡಾಡುವಂತೆ ಮಾಡಿದ್ದು ಅವರು ಗಳಿಸಿದ ಶತಕಗಳಿಗಿಂತಲೂ ಹೆಚ್ಚಾಗಿ, ಆ ಕ್ಷಣದಲ್ಲಿ ಅವರು ಪ್ರದರ್ಶಿಸಿದ 'ಮಾನವೀಯ ಘನತೆ' ಮತ್ತು 'ಪ್ರಾಮಾಣಿಕತೆ'. ಗೆಲುವು ಮುಖ್ಯವೇ ಹೊರತು ಅದು ವಂಚನೆಯ ಹಾದಿಯಲ್ಲಿ ಬರಬಾರದು ಎಂಬ ಈ ಪಾಠವೇ ಕ್ರೀಡೆ ನೀಡುವ ಶ್ರೇಷ್ಠ ಸಂಸ್ಕಾರ.

ಜಗತ್ತಿನ ಯಾವುದೇ ಮೂಲೆಯ ಕ್ರೀಡಾಪಟುಗಳು ಭೇಟಿಯಾದಾಗ ಅವರ ನಡುವೆ ಸಂವಹನಕ್ಕೆ ಭಾಷೆಯ ಹಂಗಿರುವುದಿಲ್ಲ. ಕ್ರೀಡೆಯೇ ಒಂದು ಸಾರ್ವತ್ರಿಕ ಭಾಷೆ. ಅಪ್ಪಟ ಮಾನವೀಯತೆಯ ನೆರಳಿನಲ್ಲಿ ಬೆಳೆಯುವ ಈ ಬಾಂಧವ್ಯವು ವರ್ಣಭೇದ ಮತ್ತು ದ್ವೇಷದ ವಿಷವನ್ನು ಹರಿಸಲು ಬಿಡುವುದಿಲ್ಲ. ಮೈದಾನದಲ್ಲಿ ಹರಿಯುವ ಪ್ರತಿಯೊಂದು ಬೆವರಿನ ಹನಿಗೂ ಒಂದೇ ಬಣ್ಣ, ಅದು ಪರಿಶ್ರಮದ ಬಣ್ಣ. ಈ ಸಮಷ್ಟಿ ಪ್ರಜ್ಞೆಯೇ ಸಮಾಜಮುಖಿ ಚಿಂತನೆಯ ಮೂಲ ಪ್ರೇರಣೆ. ಹಂಚಿ ಉಣ್ಣುವ, ಜೊತೆಯಾಗಿ ಹೋರಾಡುವ ಗುಣಗಳು ಕ್ರೀಡೆಯಿಂದಲೇ ಸಮಾಜಕ್ಕೆ ಹರಿಯುತ್ತವೆ.

ಇಂದಿನ ಡಿಜಿಟಲ್ ಯುಗದಲ್ಲಿ ಮನುಷ್ಯ ಯಾಂತ್ರಿಕವಾಗುತ್ತಿದ್ದಾನೆ, ಭಾವನೆಗಳ ವಿನಿಮಯ ಕ್ಷೀಣಿಸುತ್ತಿದೆ. ಇಂತಹ ಸಮಯದಲ್ಲಿ ಮೈದಾನವು ಜನರನ್ನು ಮುಖಾಮುಖಿಯಾಗಿಸಿ, ಹಸ್ತಲಾಘವದ ಮೂಲಕ ಸ್ನೇಹವನ್ನು ಹಂಚುತ್ತದೆ. ತಂಡದ ಯಶಸ್ಸಿನಲ್ಲಿ ಪ್ರತಿಯೊಬ್ಬನ ಪಾತ್ರವೂ ಮುಖ್ಯ ಎಂಬ ಅರಿವು ಮೂಡಿದಾಗ, ಸಮಾಜದಲ್ಲಿನ ಪ್ರತಿಯೊಬ್ಬ ವ್ಯಕ್ತಿಯನ್ನೂ ಗೌರವಿಸುವ ವಿಶಾಲ ಮನೋಭಾವ ಬೆಳೆಯುತ್ತದೆ. ಸೋಲನ್ನು ಸ್ಥಿತಪ್ರಜ್ಞತೆಯಿಂದ ಎದುರಿಸುವ ಕಲೆ ಸಿದ್ಧಿಸಿದರೆ, ಸಮಾಜದ ಅನೇಕ ಮಾನಸಿಕ ಸಂಕಷ್ಟಗಳಿಗೆ ಉತ್ತರ ದೊರೆಯುತ್ತದೆ. ಮೈದಾನ ಎನ್ನುವುದು ಬದುಕಿನ ಅತಿದೊಡ್ಡ ಕನ್ನಡಿ. ಅಲ್ಲಿ ಪ್ರತಿಫಲಿಸುವುದು ನಮ್ಮ ದೈಹಿಕ ಶಕ್ತಿ ಮಾತ್ರವಲ್ಲ, ನಮ್ಮ ಚಾರಿತ್ರ್ಯದ ಬಲವೂ ಹೌದು. ಸಚಿನ್ ಅಂತಹ ಮಹಾನ್ ಕ್ರೀಡಾಪಟುಗಳು ತೋರಿದ ಪ್ರಾಮಾಣಿಕತೆಯ ಹಾದಿ ನಮ್ಮ ಸಮಾಜದ ಹಾದಿಯಾಗಬೇಕಿದೆ. ಕ್ರೀಡಾ ಸಂಸ್ಕೃತಿಯು ಮನೆಯ ಹೊಸ್ತಿಲನ್ನು ದಾಟಿ ಬೀದಿಗಿಳಿದಾಗ ಮಾತ್ರ ಒಂದು ಸುಸಂಸ್ಕೃತ ಸಮಾಜದ ನಿರ್ಮಾಣ ಸಾಧ್ಯ. ಮನುಷ್ಯತ್ವದ ಉಸಿರು ಇಂದಿಗೂ ಮೈದಾನಗಳಲ್ಲಿ ಜೀವಂತವಾಗಿದೆ; ಅದನ್ನು ಪೋಷಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ.



-ಡಾ.ಸುಧಾಕರ.ಜಿ. ಲಕ್ಕವಳ್ಳಿ

### ಬೆಂಗಳೂರು-ಮಂಗಳೂರು ರೈಲು ಮಾರ್ಗದ ಆಲೂರಿನಲ್ಲಿ ರೈಲು ನಿಲುಗಡೆಗೆ ಆಂದೋಲನ

# ಸರಕಾರ ಸಾರ್ವಜನಿಕರಿಗೆ ಸೌಲಭ್ಯ ಕಲ್ಪಿಸುವುದು ಮುಖ್ಯ

• **ಉದಯವಾಹಿನಿ, ಹಾಸನ**

ತಾಲ್ಲೂಕು ಕೇಂದ್ರ ಆಲೂರಿನಲ್ಲಿ ರೈಲು ನಿಲುಗಡೆ ಮಾಡಬೇಕು ಎಂದು ಆಗ್ರಹಿಸಿ ಆರು ಸಾವಿರ ಸಹಿ ಸಂಗ್ರಹದೊಂದಿಗೆ ಕೇಂದ್ರದ ಮೇಲೆ ಒತ್ತಡ ತರುವ ಆಂದೋಲನ ಬಿರುಸಾಗಿ ಸಾಗಿದೆ. ಆಲೂರಿನಲ್ಲಿ ರೈಲ್ವೆ ನಿಲ್ದಾಣವಿದ್ದು, ಇದೇ ಮಾರ್ಗದಲ್ಲಿ ನಿತ್ಯ ರೈಲುಗಳು ಸಂಚರಿಸಿದರೂ, ಆದಾಯದ ಕೊರತೆಯ ಕಾರಣ ಮುಂದಿಟ್ಟುಕೊಂಡು ನಿಲ್ದಾಣದಲ್ಲಿ ನಿಲುಗಡೆ ಸ್ಥಗಿತಗೊಳಿಸಿರುವುದು ಪ್ರಯಾಣಿಕರ ಅಸಮಾಧಾನಕ್ಕೆ ಕಾರಣವಾಗಿದೆ. ಸಂಸದರು, ಶಾಸಕರು, ಜನಪ್ರತಿನಿಧಿಗಳ ನಿರ್ಲಕ್ಷ್ಯದ ಪರಿಣಾಮ ರೈಲು ನಿಲುಗಡೆ ಸಾಧ್ಯ ಆಗುತ್ತಿಲ್ಲ ಎಂಬುದು ಸಾರ್ವಜನಿಕರು, ಪ್ರಯಾಣಿಕರ ಆರೋಪವಾಗಿದೆ. ತಾಲ್ಲೂಕು ಅಭಿವೃದ್ಧಿಗೆ ಸಾರಿಗೆ ಸಂಪರ್ಕ ಕೂಡ ಪ್ರಮುಖ. ಬಸ್ ಸೌಲಭ್ಯದಂತೆ ರೈಲು ಸೌಲಭ್ಯ ದೊರೆತರೆ ಪ್ರಯಾಣಿಕರಿಗಷ್ಟೇ ಅಲ್ಲ ಸರಕುಗಳ ಸಾಗಣೆಗೂ, ಅಭಿವೃದ್ಧಿಗೂ ಸಹಕಾರಿ ಆಗುತ್ತದೆ ಎಂಬುದು ಸಮಾಜ ಸೇವಕ ರಾಧಮ ಸೇವಾಟ್ರಸ್ಟ್‌ನ ಸ್ಥಾಪಕ ಹೇಮಂತ್ ಕುಮಾರ್ ಅಭಿಪ್ರಾಯ. ಮಂಗಳೂರು-ಬೆಂಗಳೂರು ನಡುವೆ ಹಗಲು ವೇಳೆ ಒಂದು, ರಾತ್ರಿ ಮೂರು ರೈಲು ಸಂಚರಿಸುತ್ತವೆ. ಅವುಗಳನ್ನು ಹೆಚ್ಚಿಸಿದಲ್ಲಿ ರಾಷ್ಟ್ರೀಯ ಹೆದ್ದಾರಿ ಅವ್ಯವಸ್ಥೆಯಿಂದ ಪರದಾಡುತ್ತಿರುವ ಪ್ರಯಾಣಿಕರು, ವಾಣಿಜ್ಯ ವಹಿವಾಟಿಗೂ ಸಹಕಾರಿಯಾಗುತ್ತದೆ ಎಂಬ ಕೂಗು ಹಲವು ವರ್ಷಗಳಿಂದ ಕೇಳಿ ಬರುತ್ತಿದೆ.



**ರೈಲು ನಿಲುಗಡೆಗೆ ಆದೇಶಿಸಬೇಕು**

ಅಭಿವೃದ್ಧಿಯಲ್ಲಿ ತೀವ್ರ ಹಿಂದುಳಿದಿರುವ ಆಲೂರು ತಾಲ್ಲೂಕಿನಲ್ಲಿ ರೈಲ್ವೆ ನಿಲ್ದಾಣವಿದ್ದರೂ, ನಿರೀಕ್ಷಿತ ಆದಾಯ ಬರುತ್ತಿಲ್ಲ ಎಂದು ರೈಲು ನಿಲುಗಡೆ ಸ್ಥಗಿತಗೊಳಿಸಲಾಗಿದೆ. ನಿಲ್ದಾಣದಲ್ಲಿ ರೈಲಿನ ಸ್ವಚ್ಛತೆಗೆ ನೀರಿನ ವ್ಯವಸ್ಥೆ, ಹೆಚ್ಚಿನ ಸಿಬ್ಬಂದಿ, ಅಗತ್ಯ ಮೂಲ ಸೌಲಭ್ಯ ಕಲ್ಪಿಸಿ ರೈಲು ನಿಲುಗಡೆಗೆ ಆದೇಶಿಸಬೇಕು ಎಂದು ರೈಲ್ವೆ ಸಚಿವ ವಿ.ಸೋಮಣ್ಣ ಹಾಗೂ ಹಿರಿಯ ಅಧಿಕಾರಿಗಳಿಗೆ ಹೇಮಂತ್‌ಕುಮಾರ್ ಮನವಿ ಸಲ್ಲಿಸಿದ್ದು, ಅದಕ್ಕೆ ಸ್ಪಂದನೆ ದೊರೆತಿಲ್ಲ ಎಂಬ ಬೇಸರ ಹೊಸ ಬಗೆಯ ಹೋರಾಟಕ್ಕೆ ನಾಂದಿಯಾಗಿದೆ.

> **ಬೆಂಗಳೂರಿನಿಂದ ಆಲೂರಿಗೆ ಕೇವಲ 40 ರೂ.ನಲ್ಲಿ ಪ್ರಯಾಣಿಸಬಹುದಾಗಿದ್ದು, ಇದು ಬಡ, ಮಧ್ಯಮ ವರ್ಗಕ್ಕೂ ಹೆಚ್ಚಿನ ಅನುಕೂಲ ಆಗಲಿದೆ. ವಿದ್ಯಾರ್ಥಿಗಳಿಗೆ ಆಸರೆಯಾಗಲಿದೆ. ತಾಲ್ಲೂಕು ಕೇಂದ್ರ ಆಲೂರು ಜನಸಂಖ್ಯೆ ಹೆಚ್ಚುತ್ತಿದೆ. ಮೂಲ ಸೌಲಭ್ಯ ಹೊಂದಿದೆ. ಅಭಿವೃದ್ಧಿ ಹಾಗೂ ಪ್ರಯಾಣಿಕ ಅನುಕೂಲಕ್ಕೆ ರೈಲು ನಿಲುಗಡೆ ಅಗತ್ಯವಾಗಿದ್ದು, ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದ ಬೇಡಿಕೆ ಈಡೇರಿಲ್ಲ. ಹೀಗಾಗಿ ಸಹಿ ಸಂಗ್ರಹ ಮಾಡುತ್ತಿದ್ದೇವೆ.**
> **-ಹೇಮಂತ್‌ಕುಮಾರ್, ಸಾಮಾಜಿಕ ಹೋರಾಟಗಾರ, ಆಲೂರು.**

**ಸಹಿ ಸಂಗ್ರಹ:** ಆಲೂರು-ಬಾಳ್ಳುಪೇಟೆಯಲ್ಲಿ ರೈಲು ನಿಲುಗಡೆ ಮಾಡಲೇಬೇಕೆಂಬ ಹಕ್ಕೊತ್ತಾಯದೊಂದಿಗೆ ತಾಲೂಕಿನಲ್ಲಿ ಸಹಿ ಸಂಗ್ರಹದ ಆಂದೋಲನ ಸದ್ದಿಲ್ಲದೆ ನಡೆದಿದೆ. ಈವರೆಗೂ ಆರು ಸಾವಿರಕ್ಕೂ ಹೆಚ್ಚು ಸಹಿ ಸಂಗ್ರಹಿಸಲಾಗಿದೆ. ಬೆಂಗಳೂರು, ಮಂಗಳೂರಿಗೆ ಸಂಪರ್ಕ ಕೊಂಡಿಯಾಗಿರುವ ಹಾಸನ ಜಿಲ್ಲೆಯಲ್ಲಿ ರೈಲ್ವೆ ಸಂಪರ್ಕವಿದ್ದರೂ, ನಿರೀಕ್ಷಿತ ಮಟ್ಟದ ರೈಲು ಸಂಚಾರ ಸೌಲಭ್ಯ ಪ್ರಯಾಣಿಕರಿಗೆ ಮರೀಚಿಕೆಯಾಗಿದೆ. ರಾಜಧಾನಿ ಬೆಂಗಳೂರು, ಹೊಸದಿಲ್ಲಿ ಸೇರಿದಂತೆ ಹೊರ ರಾಜ್ಯಕ್ಕೆ ತೆರಳಲು ನೇರ ರೈಲು ವ್ಯವಸ್ಥೆ ಕಲ್ಪಿಸಬೇಕೆಂಬ ಕೂಗು ಪ್ರಬಲವಾಗಿದೆ.

**ಸಮಸ್ಯೆ ಏನು?:** ಹಾಸನ-ಸಕಲೇಶಪುರ, ಮಂಗಳೂರು ಮಾರ್ಗದಲ್ಲಿ ನಿತ್ಯ ಬೆಳಗ್ಗೆ ಒಂದು, ಸಂಜೆ ಎರಡು ರೈಲು ಸಂಚರಿಸುತ್ತವೆ. ಆದರೆ ಆದಾಯವಿಲ್ಲ, ಪ್ರಯಾಣಿಕರ ಕೊರತೆ ಎಂಬ ಕಾರಣದಿಂದ ನಿಲುಗಡೆ ಸ್ಥಗಿತಗೊಳಿಸಲಾಗಿದೆ. ಸರಕಾರ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವಾಗ ಲಾಭ-ನಷ್ಟದ ಪ್ರಶ್ನೆಗಿಂತ ಸೌಲಭ್ಯ ಕಲ್ಪಿಸುವುದು ಮುಖ್ಯ. ಇಂದಲ್ಲ ನಾಳೆ ಪ್ರಯಾಣಿಕರ ಸಂಖ್ಯೆ ಹೆಚ್ಚಳವಾಗುತ್ತದೆ ಎಂಬುದು ಪ್ರಯಾಣಿಕರ ವಾದ.

**ಮುಂದೇನು?:** ರಾಧಮ್ಮ ಸೇವಾಟ್ರಸ್ಟ್ ಸಾರ್ವಜನಿಕರ ಸಹಿ ಸಂಗ್ರಹಕ್ಕೆ ಮುಂದಾಗಿ ಆರು ಸಾವಿರ ಜನರ ಸಹಿ ಸಂಗ್ರಹ ಮಾಡಿದೆ. ಕೇಂದ್ರ ಸಚಿವ ವಿ.ಸೋಮಣ್ಣ, ಎಚ್.ಡಿ.ಕುಮಾರಸ್ವಾಮಿ ಅವರನ್ನು ಮತ್ತೊಮ್ಮೆ ಭೇಟಿ ಮಾಡಿ ಕೇಂದ್ರದ ಮೇಲೆ ಒತ್ತಡ ತಂದು ರೈಲು ನಿಲುಗಡೆ ಮಾಡಿಸುವ ನಿಟ್ಟಿನಲ್ಲಿ ಪ್ರಯತ್ನ ಮುಂದುವರಿಸಿದೆ.

> **ರೈಲ್ವೆ ಮೇಲ್ಸೇತುವೆ, ನಿಲ್ದಾಣಗಳ ಅಭಿವೃದ್ಧಿ, ಹೆಚ್ಚುವರಿ ರೈಲು ಸೌಲಭ್ಯದ ಕುರಿತು ರೈಲ್ವೆ ಸಚಿವರೊಂದಿಗೆ ಚರ್ಚಿಸಿ, ಮನವಿ ಸಲ್ಲಿಸಿದ್ದು, ಸಕಾರಾತ್ಮಕ ಸ್ಪಂದನೆ ದೊರೆತಿದೆ.**
> **-ಶ್ರೇಯಸ್ ಎಂ.ಪಟೇಲ್ ಸಂಸದರು ಹಾಸನ.**

## ಉಳಿತಾಯ ಹಣದಲ್ಲಿ ವಾಹನ ಖರೀದಿ: ಶ್ಲಾಘನೀಯ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಗಜೇಂದ್ರಗಡ**

ಗಜೇಂದ್ರಗಡ ಪುರಸಭೆ ಆಡಳಿತ ಮಂಡಳಿ, ಅಧಿಕಾರಿಗಳು ಬಜೆಟ್ ಉಳಿತಾಯ ಹಣದಲ್ಲಿ ಪೌರಕಾರ್ಮಿಕರಿಗೆ ವಿಶ್ರಾಂತಿ ಗೃಹ ನಿರ್ಮಿಸುವುದರ ಜೊತೆಗೆ ಪಟ್ಟಣದ ಸ್ವಚ್ಛತೆಗೆ ಪೂರಕವಾಗುವ ವಾಹನಗಳನ್ನು ಖರಿದಿಸಿರುವುದು ಶ್ಲಾಘನೀಯ ಎಂದು ಶಾಸಕ ಜಿ.ಎಸ್.ಪಾಟೀಲ ಹೇಳಿದರು. ಪಟ್ಟಣದ ಪುರಸಭೆ ಆವರಣದಲ್ಲಿ ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ನಗರಾಭಿವೃದ್ಧಿ ಕೋಶ ಗದಗ, ಗಜೇಂದ್ರಗಡ ಪುರಸಭೆ ವತಿಯಿಂದ 15ನೇ ಹಣಕಾಸು ಯೋಜನೆಯ ಉಳಿತಾಯ ಹಣದಲ್ಲಿ ನಿರ್ಮಿಸಲಾಗಿರುವ ಪುರಸಭೆ ಪೌರಕಾರ್ಮಿಕರ ವಿಶ್ರಾಂತಿ ಗೃಹ, ಪಟ್ಟಣದ ಸ್ವಚ್ಛತೆಗೆ ಖರಿದಿಸಿದ ವಿವಿಧ ವಾಹನಗಳನ್ನು ಉದ್ಘಾಟಿಸಿ ಬಳಿಕ ನಡೆದ 2026-27ನೇ ಸಾಲಿನ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಪುರಸಭೆ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ ಮಾತನಾಡಿ, 2025-26ನೇ ಸಾಲಿನ ಬಜೆಟ್‌ನಲ್ಲಿ 9.58 ಕೋಟಿ ಆದಾಯ ನಿರೀಕ್ಷಿಸಲಾಗಿತ್ತು. ಅದರಲ್ಲಿ ನೀರಿನ ಕರದಿಂದ ಶೇ 51, ತೆರಿಗೆಯಿಂದ ಶೇ 98, ಮಳಿಗೆಗಳಿಂದ ಶೇ 100, ವಾಣಿಜ್ಯದಿಂದ ಶೇ 98 ರಷ್ಟು ತೆರಿಗೆ ಸಂಗ್ರಹವಾಗಿದ್ದು, 2026-27ನೇ ಸಾಲಿನ ಬಜೆಟ್‌ನಲ್ಲಿ 9.75 ಕೋಟಿ ಆದಾಯ ನಿರೀಕ್ಷಿಸಲಾಗಿದೆ ಎಂದರು. 'ಕಳೆದ ವರ್ಷದ 15ನೇ ಹಣಕಾಸು ಯೋಜನೆಯ ಒಟ್ಟು 77 ಲಕ್ಷ ಉಳಿತಾಯ ಹಣದಲ್ಲಿ ಪುರಸಭೆ ಪೌರ ಕಾರ್ಮಿಕರ ವಿಶ್ರಾಂತಿ ಗೃಹ ನಿರ್ಮಾಣ (12 ಲಕ್ಷ), ಮಲ್ಟಿಜೆಟ್ ಕೆಮಿಕಲ್ ಸ್ಪ್ರೇಯರ್ (11 ಲಕ್ಷ), ಸಕ್ಕಿಂಗ್ ಆಯಂಡ್ ಜೆಟ್ಟಿಂಗ್ (40.81 ಲಕ್ಷ), ಟಿಪ್ಪರ್ (26 ಲಕ್ಷ) ವಾಹನಗಳನ್ನು ಖರಿದಿಸಲಾಗಿದೆ' ಎಂದು ತಿಳಿಸಿದರು. ಪಟ್ಟಣದಲ್ಲಿ ಅಳವಡಿಸುತ್ತಿರುವ ಕಾಮಗಾರಿಯಲ್ಲಿ ಹಳೆಯ ನಲ್ಲಿಯ ತೆರಿಗೆ ತುಂಬಿದ ಮನೆಗಳಿಗೆ ಮಾತ್ರ ಹೊಸ ಪೈಪ್‌ಲೈನ್‌ಗೆ ಸಂಪರ್ಕ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಸಭೆಗೆ ಮಾಹಿತಿ ನೀಡಿದರು.

## ಎಸ್‌ಐಆರ್ ರದ್ದತಿಗೆ ಜನಾಂದೋಲನ ಅಗತ್ಯ

• **ಉದಯವಾಹಿನಿ, ಹುಬ್ಬಳ್ಳಿ**

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಜಾಪ್ರಭುತ್ವ ವ್ಯವಸ್ಥೆ ಮೇಲಿನ ದಾಳಿಯಾಗಿದೆ. ಇದರ ರದ್ದತಿಗೆ ಬೃಹತ್ ಜನಾಂದೋಲನ ರೂಪಿಸುವ ಅಗತ್ಯ ಇದೆ ಎಂದು ಚಿಂತಕ ಶಿವಸುಂದರ್ ಹೇಳಿದರು. ಮೇ ಸಾಹಿತ್ಯ ಮೇಳ ಬಳಗ, ಸಂವಿಧಾನ ಸುರಕ್ಷಾ ಸಮಿತಿ ವತಿಯಿಂದ ಹುಬ್ಬಳ್ಳಿಯ ಅಕ್ಕನ ಬಳಗದಲ್ಲಿ ಎಸ್‌ಐಆರ್-ಪೌರತ್ವದ ಪ್ರಶ್ನೆ ಪ್ರಭುತ್ವದ ಹುನ್ನಾರಗಳು ಕುರಿತು ಗುರುವಾರ ಏರ್ಪಡಿಸಿದ್ದ ಸಂವಾದ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಎಸ್‌ಐಆರ್ ಎಂದರೆ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ದೇಶದ ನಾಗರಿಕರ ಮೇಲೆ ಹಾಕುತ್ತಿರುವ ಎಫ್‌ಐಆರ್ ಆಗಿದೆ. ಎಸ್‌ಐಆರ್ ನೆಪದಲ್ಲಿ ಅವರು ಕೇಳುವ 11 ದಾಖಲೆಗಳ ಪೈಕಿ ಯಾವುದಾದರೊಂದನ್ನು ಒದಗಿಸಬೇಕು. ಅದು ಸಾಧ್ಯವಾಗದಿದ್ದಲ್ಲಿ ನಾವು ದೇಶದ ನಾಗರಿಕರೇ ಅಲ್ಲ ಎಂದಾಗುತ್ತದೆ ಎಂದರು. ಎಸ್‌ಐಆರ್‌ನಲ್ಲಿ ಹೆಸರಿಲ್ಲದಿದ್ದರೆ ಮತದದಾರರ ಪಟ್ಟಿಯಿಂದ ಮಾತ್ರ ತಮ್ಮ ಹೆಸರು ತೆಗೆದು ಹಾಕಬಹುದು ಎಂದು ಕೆಲವರು ನಿರ್ಲಕ್ಷ್ಯ ವಹಿಸಿದ್ದಾರೆ. ಆದರೆ, ಇದು ಕೇವಲ ಒಂದು ಓಟಿನ ಪ್ರಶ್ನೆಯಲ್ಲ. ನಮ್ಮ ಅಸ್ತಿತ್ವದ ಪ್ರಶ್ನೆಯಾಗಿದೆ. ಈ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚು ಜಾಗೃತಿ ಮೂಡಿಸಬೇಕು ಎಂದರು. ಬಿಜೆಪಿ, ಸಂಘ ಪರಿವಾರವು ಕನಿಷ್ಠ 50 ವರ್ಷ ದೇಶದಲ್ಲಿ ಆಡಳಿತ ನಡೆಸಬೇಕು ಎಂಬ ಉದ್ದೇಶ ಹೊಂದಿದ್ದು, ದೇಶವನ್ನು ಹಿಂದೂ ಬ್ರಾಹ್ಮಣ ರಾಷ್ಟ್ರ ಮಾಡಲು ಹೊರಟಿದ್ದಾರೆ. ಅವರು 2024ರ ಲೋಕಸಭೆ ಚುನಾವಣೆಯಲ್ಲಿ 400 ಸೀಟು ಗೆಲ್ಲುತ್ತೇವೆ ಎಂಬ ವಿಶ್ವಾಸದಲ್ಲಿದ್ದರು. ಆದರೆ, ಉತ್ತರ ಭಾರತದ ದಲಿತರು, ಹಿಂದುಳಿದವರು ಅದಕ್ಕೆ ಪೆಟ್ಟು ಕೊಟ್ಟರು ಎಂದು ಹೇಳಿದರು.



ಉದಯವಾಹಿನಿ ಚಿತ್ರ

ಚಿಂತಕ ಜಿ.ಎನ್.ದೇವಿ ಮಾತನಾಡಿ, ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ), ರಾಷ್ಟ್ರೀಯ ನಾಗರಿಕರ ನೋಂದಣಿಯ ಮುಂದುವರಿದ ಭಾಗವೇ ಎಸ್‌ಐಆರ್ ಆಗಿದೆ.

> **ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಈಗಿರುವ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ನಾಶ ಮಾಡಿ, ಮನುವಾದಿ ಹಿಂದೂ ರಾಷ್ಟ್ರ ಮಾಡುವ ಮಸಲತ್ತು ನಡೆದಿದೆ. ಅದರ ಭಾಗವಾಗಿ ಎಸ್‌ಐಆರ್‌ನಂತಹ ಅಸ್ತ್ರಗಳನ್ನು ಪ್ರಯೋಗಿಸುತ್ತಿದ್ದಾರೆ.**
> **- ಸನತ್‌ಕುಮಾರ್ ಬೆಳಗಲಿ, ಪತ್ರಕರ್ತ**

ಇದು ಸಂವಿಧಾನ ಬಾಹಿರವಾಗಿದೆ ಎಂದರು.

ಮುಸ್ಲಿಮರು ಹೆಚ್ಚು ಇರುವ ಮತಕ್ಷೇತ್ರಗಳನ್ನು ಒಡೆದು ಹೆಚ್ಚು ಲೋಕಸಭಾ ಕ್ಷೇತ್ರಗಳನ್ನು ರಚಿಸುವ ಮೂಲಕ ಅವರಿಗೆ ಮೀಸಲಾತಿ ತಪ್ಪಿಸುವ, ಅಲ್ಪಸಂಖ್ಯಾತರಿಗೆ ಸೌಲಭ್ಯ ನಿರಾಕರಿಸುವ ಹುನ್ನಾರ ಇದರ ಹಿಂದಿದೆ' ಎಂದು ಹೇಳಿದರು.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಿಶ್ವದಲ್ಲಿ ಬೇರೆ ರೀತಿಯ ಆಡಳಿತ ತರಲು ಮುಂದಾಗಿದ್ದು, ಅದು ಭಾರತದಲ್ಲೂ ಜಾರಿಗೆ ಬರುವ ಆತಂಕ ಇದೆ. ಅದರ ಮೊದಲ ಭಾಗವೇ ಎಸ್‌ಐಆರ್. ದೇಶದ ಇತಿಹಾಸ ತಿರುಚುವ ಕಾರ್ಯ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ ಎಂದರು.

## ಆಶಾಗಳನ್ನು ತೆಗೆಯುವ ನಿರ್ಧಾರಕ್ಕೆ ಆಕ್ರೋಶ

• **ಉದಯವಾಹಿನಿ, ಬಳ್ಳಾರಿ**

ಜನಸಂಖ್ಯೆಯನ್ನು ತರ್ಕಬದ್ಧಗೊಳಿಸುವ ಹೆಸರಲ್ಲಿ ಸಾವಿರಾರು ಆಶಾಗಳನ್ನು ವಜಾಗೊಳಿಸುವ ಆರೋಗ್ಯ ಇಲಾಖೆ, ರಾಜ್ಯ ಸರ್ಕಾರದ ನಿರ್ಧಾರಕ್ಕೆ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಆಕ್ಷೇಪ ವ್ಯಕ್ತಪಡಿಸಿದೆ. ಈ ಕುರಿತು ನಗರದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಗೊಂಡಿದ್ದು, ಸರ್ಕಾರದ ನಿರ್ಧಾರವನ್ನು ಆಶಾಗಳು ವಿರೋಧಿಸಿದ್ದಾರೆ.

ಸರ್ಕಾರದ ನಿರ್ಧಾರ ಆಘಾತ ತಂದಿದೆ. ಇದೇ ವೃತ್ತಿಯನ್ನು ನಂಬಿರುವ ಆಶಾ ಮತ್ತವರ ಕುಟುಂಬಗಳು ಬೀದಿಗೆ ಬರುವ ಆತಂಕ ಎದುರಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ 200ಕ್ಕೂ ಹೆಚ್ಚು ಆಶಾ ಕಾರ್ಯಕರ್ತೆಯರನ್ನು ಕೆಲಸದಿಂದ ಕೈ ಬಿಡುವ ಯೋಜನೆ ಈಗಾಗಲೆ ಸಿದ್ಧವಾಗಿರುವುದು ಅತ್ಯಂತ ಖಂಡನೀಯ. ಈ ಕ್ರಮವು ಕೇಂದ್ರದ ಮಾರ್ಗಸೂಚಿಯ ಉಲ್ಲಂಘನೆ. ದೇಶದ ಯಾವುದೇ ರಾಜ್ಯದಲ್ಲಿ ಇಲ್ಲದ ಕ್ರಮವನ್ನು ರಾಜ್ಯ ಸರ್ಕಾರ ಜಾರಿಗೆ ತರಲು ಹೊರಟಿದೆ.



ಉದಯವಾಹಿನಿ ಚಿತ್ರ

ಕೈಬಿಟ್ಟ ಆಶಾಗಳನ್ನು ನಿಯಮಾನುಸಾರ 'ಡಿ' ಗ್ರೂಪ್ ನೌಕರರನ್ನಾಗಿ ತೆಗೆದುಕೊಳ್ಳಲಾಗುವುದು ಎಂಬುದು ಕೇವಲ ಬಾಯಿ ಮಾತಿನ ಹೇಳಿಕೆಯಷ್ಟೇ. ಸಾವಿರಾರು ಆಶಾಗಳನ್ನು ವಜಾಗೊಳಿಸುವುದು ಇದರ ಹಿಂದಿರುವ ಉದ್ದೇಶವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆಶಾ ಕಾರ್ಯಕರ್ತೆಯರು ಸಮಾಜದ ಆರೋಗ್ಯಕ್ಕಾಗಿ ಹಗಲಿರುಳು ಕಷ್ಟಪಡುತ್ತಿದ್ದರೂ, ಗೌರವ ಘನತೆಯಿಂದ ಬದುಕುವ ವೇತನದಿಂದ ಕಡೆಗಣಿಸಲಾಗಿದೆ. ಇದಲ್ಲದೆ ಆರ್.ಸಿ.ಎಚ್ ಪೋರ್ಟಲ್ ಸಮಸ್ಯೆಯಿಂದಾಗಿ, ಅವರಿಗೆ ದುಡಿದಷ್ಟು ವೇತನ ಬರುತ್ತಿಲ್ಲ. ಇದರ ನಡುವೆ ಇತ್ತೀಚಿಗೆ ಜಾರಿಗೆ ತಂದ ಹೊಸ 'ಸ್ಪರ್ಶ್' ಆ್ಯಪ್‌ನಿಂದ 3 ತಿಂಗಳಿಗೊಮ್ಮೆ ಇನ್ಸೆಂಟಿವ್ ಹಣ ಬರುವಂತಾಗಿದೆ. ಈ ಸಮಸ್ಯೆಗಳಿಗೆ ಪರಿಹಾರ ನೀಡುವ ಬದಲು ಮೌಲ್ಯಮಾಪನ, ತರ್ಕಬದ್ಧಗೊಳಿಸುವ ಹೆಸರಲ್ಲಿ ಜನ ಸಂಖ್ಯೆಯ ಮಿತಿಯನ್ನು ಹೆಚ್ಚಿಸಿ, ಆಶಾಗಳನ್ನು ಕೈಬಿಡಲು ರಾಜ್ಯ ಸರ್ಕಾರ, ಆರೋಗ್ಯ ಇಲಾಖೆ ಹೊರಟಿದೆ' ಎಂದು ಹೋರಾಟಗಾರರು ಆಕ್ಷೇಪಿಸಿದರು. ಆಶಾಗಳನ್ನು ಕೈಬಿಡುವ ಪ್ರಕ್ರಿಯೆ ಕೂಡಲೇ ನಿಲ್ಲಿಸಬೇಕು. ಈ ಕುರಿತು ಅಧಿಕೃತ ಆದೇಶ ಹೊರಡಿಸಬೇಕು. ಪ್ರತಿ ತಿಂಗಳು 5ನೇ ತಾರೀಕಿನ ಒಳಗೆ ನಿಶ್ಚಿತ ಗೌರವ ಧನ, ಇನ್ಸೆಂಟೀವ್ ಹಣ ದೊರೆಯಬೇಕು. ವಿಳಂಬ ಆಗದಂತೆ ಕ್ರಮ ಕೈಗೊಳ್ಳಬೇಕು. ಜನವರಿ 2025ರಲ್ಲಿ ಮುಖ್ಯಮಂತ್ರಿ ನೀಡಿದ ಭರವಸೆಯಂತೆ ಪ್ರತಿ ಆಶಾಗೆ ಕನಿಷ್ಠ 10,000 ಗ್ಯಾರಂಟಿ ಮಾಡುವ ಕ್ರಮಕೈಗೊಳ್ಳಬೇಕು. ಈ ಕುರಿತು ಅಧಿಕೃತ ಆದೇಶ ನೀಡಬೇಕು ಎಂದು ಆಗ್ರಹಿಸಿದರು.

## ಸೀರೆ ಬೇಡ, ಗೌರವಧನ ಹೆಚ್ಚಿಸಿ

• **ಉದಯವಾಹಿನಿ, ಬಳ್ಳಾರಿ**

ಗೌರವಧನ ಹೆಚ್ಚಿಸದೆ ಕೇವಲ ಸೀರೆ ನೀಡುವ ಪ್ರಸ್ತಾವನೆಯನ್ನು ವಿರೋಧಿಸಿ ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಅಂಗನವಾಡಿ ಕಾರ್ಯಕರ್ತೆಯರ, ಸಹಾಯಕಿಯರ ಫೆಡರೇಷನ್‌ನ ಪದಾಧಿಕಾರಿಗಳು ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ, ಮನವಿ ಸಲ್ಲಿಸಿದರು. ಫೆಡರೇಷನ್ ಜಿಲ್ಲಾ ಘಟಕದ ಅಧ್ಯಕ್ಷೆ ಆರ್ಕಾಣಿ ಮಾತನಾಡಿ, ಚುನಾವಣಾ ಪೂರ್ವ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ 6ನೇ ಗ್ಯಾರಂಟಿಯಾಗಿ ಅಂಗನವಾಡಿ, ಆಶಾ ಕಾರ್ಯಕರ್ತೆಯರಿಗೆ ಮಾಸಿಕ 15,000 ಗೌರವಧನ ನೀಡಬೇಕು.

ಸರ್ಕಾರ ಬಂದು ಮೂರು ವರ್ಷ ಕಳೆದರೂ ಈ ಬೇಡಿಕೆ ಈಡೇರಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಜೆಟ್‌ನಲ್ಲಿ ಕೇವಲ 1,000 ಗೌರವಧನ ಹೆಚ್ಚಿಸಿರುವುದು ಕಾರ್ಯಕರ್ತೆಯರ ಶ್ರಮಕ್ಕೆ ಮಾಡಿದ ಅಪಮಾನ. ಬೆಲೆ ಏರಿಕೆಯ ಈ ಕಾಲದಲ್ಲಿ ಈ ಮೊತ್ತ ಜೀವನ ನಿರ್ವಹಣೆಗೆ ಸಾಲದು. 2011ರಿಂದ ನಿವೃತ್ತರಾದ ಕಾರ್ಯಕರ್ತೆಯರಿಗೆ ಗ್ರಾಚ್ಯುಟಿ ಸೌಲಭ್ಯ ನೀಡದೆ, ಕೇವಲ 2023ರ ನಂತರ ನಿವೃತ್ತರಾದವರಿಗೆ ಮಾತ್ರ ಅನ್ವಯಿಸಲಾಗಿದೆ. ಇದು 15 ರಿಂದ 20 ಸಾವಿರ ಹಿರಿಯ ಕಾರ್ಯಕರ್ತೆಯರಿಗೆ ಮಾಡುತ್ತಿರುವ ಅನ್ಯಾಯ ಎಂದು ದೂರಿದರು. ಗೌರವಧನ ಹೆಚ್ಚಿಸುವ ಬದಲು ಕೇವಲ ಸೀರೆ ನೀಡುವ ಮೂಲಕ ಸರ್ಕಾರವು ಕಾರ್ಯಕರ್ತೆಯರ ಹಾದಿ ತಪ್ಪಿಸುತ್ತಿದೆ. ನಮಗೆ ಸೀರೆಗಿಂತ ಗೌರವಯುತ ಬದುಕು ನಡೆಸಲು ಆರ್ಥಿಕ ಭದ್ರತೆ ಮುಖ್ಯ.



ಉದಯವಾಹಿನಿ ಚಿತ್ರ

ಈ ಬಾರಿಯ ಬಜೆಟ್‌ನಲ್ಲಿ ಗೌರವಧನವನ್ನು ಗಣನೀಯವಾಗಿ ಹೆಚ್ಚಿಸಬೇಕು. 2011ರಿಂದ ನಿವೃತ್ತರಾದ ಎಲ್ಲಾ ಕಾರ್ಯಕರ್ತೆಯರಿಗೂ ಕಾನೂನುಬದ್ಧ ಗ್ರಾಚ್ಯುಟಿ ವಿಸ್ತರಿಸಬೇಕು ಎಂದು ಒತ್ತಾಯಿಸಿದರು.

## ಮೀಸಲಾತಿಯಿಂದ ಹೊರಗಿಡಲು ಷಡ್ಯಂತ್ರ

• **ಉದಯವಾಹಿನಿ, ವಿಜಯಪುರ**

ಮೀಸಲಾತಿಯಿಂದ ರಾಜಕೀಯಕ್ಕೆ ಅಡ್ಡಿ ಬರುತ್ತಾರೆ, ಇವರು ಶಾಸಕರು, ಮಂತ್ರಿಗಳಾಗುತ್ತಾರೆ ಎಂಬ ಭಯದಿಂದ ಬಂಜಾರ, ಭೋವಿ ಸೇರಿದಂತೆ ಮೊದಲಾದ ಸಮಾಜಗಳನ್ನು ಮೀಸಲಾತಿಯಿಂದ ಹೊರಗಿಡುವ ಷಡ್ಯಂತ್ರ ನಡೆಯುತ್ತಿದೆ ಎಂದು ಸರ್ದಾರ್‌ಸೇವಾಲಾಲ್ ಸ್ವಾಮೀಜಿ ಆರೋಪಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ಅಸ್ಪೃಶ್ಯರು, ನಮ್ಮನ್ನು ಮುಟ್ಟಿಸಿಕೊಳ್ಳುವುದಿಲ್ಲ, ಹೊರಗಿಡುತ್ತಾರೆ ಎನ್ನುವ ಮಾತನ್ನು ಕೆಲವರು ಹೇಳುತ್ತಾರೆ ಆದರೆ ಕೇಂದ್ರದಲ್ಲಿ ನಾರಾಯಣಸ್ವಾಮಿ, ರಾಜ್ಯದಲ್ಲಿ ಎಚ್. ಆಂಜನೇಯ, ಕೆ.ಎಚ್.ಮುನಿಯಪ್ಪ, ಆರ್.ಬಿ.ತಿಮ್ಮಾಪುರ ಅವರು ಹೇಗೆ ಸಚಿವರಾದರು ಎಂದು ಪ್ರಶ್ನಿಸಿದರು. 'ಒಳ ಮೀಸಲಾತಿ ಅವೈಜ್ಞಾನಿಕವಾಗಿ ಜಾರಿಗೊಳಿಸುತ್ತಿರುವುದನ್ನು ವಿರೋಧಿಸಿ ಸರ್ಕಾರದ ಗಮನ ಸೆಳೆಯಲು ಮಾ.24ರಂದು ಬೆಂಗಳೂರು ಚಲೋ ಹಮ್ಮಿಕೊಳ್ಳಲಾಗಿದೆ' ಎಂದು ತಿಳಿಸಿದರು. ಅಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಒಳಮೀಸಲಾತಿ ಜಾರಿಯಿಂದ ಅನ್ಯಾಯಕ್ಕೊಳಗಾಗುವ ಸಮುದಾಯಗಳ ಲಕ್ಷಾಂತರ ಜನ ಸೇರಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮುಂದೆ ಹಕ್ಕೊತ್ತಾಯ ಮಂಡಿಸಲಿದ್ದೇವೆ ಎಂದರು.



> **ಭೋವಿ, ಲಂಬಾಣಿ, ಕೊರಮ, ಕೊರಚ, ಸುಡಗಾಡು ಸಿದ್ದ ಸೇರಿದಂತೆ ಹಲವು ಸೂಕ್ಷ್ಮ, ಅತಿಸೂಕ್ಷ್ಮ ಸಮುದಾಯಗಳಿಗೆ ಈವರೆಗೂ ಮೀಸಲಾತಿ ಸಮರ್ಪಕವಾಗಿ ತಲುಪೇ ಇಲ್ಲ, ಹೀಗಾಗಿ ಒಳಮೀಸಲಾತಿ ವಿಚಾರ ಮರುಪರಿಶೀಲನೆ ಮಾಡಿ ತಜ್ಞರ ಸಮಿತಿ ರಚಿಸಿ ನಮ್ಮ ಅಹವಾಲುಗಳನ್ನು ಸರ್ಕಾರದ ಮುಂದೆ ಇಡಲು ಅವಕಾಶ ಕಲ್ಪಿಸಿ ನಂತರ ಪರಿಶೀಲನೆ ಮಾಡಿ ಸಿ ಗುಂಪಿನಲ್ಲಿರುವ ಸಮುದಾಯಗಳನ್ನು ಎ ಗುಂಪಿಗೆ ಸೇರಿಸಬೇಕು.**
> **- ಆದರ್ಶ ಯಲ್ಲಪ್ಪ, ಮುಖಂಡ**

## ಬೇಸಿಗೆ ರಜೆ ಮಕ್ಕಳ ಬಗ್ಗೆ ಪೋಷಕರೇ ಎಚ್ಚರವಹಿಸಿ

• **ಉದಯವಾಹಿನಿ, ಸಿಂಧನೂರು**

• **ವೀರೇಶ್ ಹೊಸಳ್ಳಿ**

ಬೇಸಿಗೆ ರಜೆ ಆರಂಭವಾಗಿದೆ ಬಿಸಿಲ ತಾಪ ಏರುತ್ತಿರುವ ಬೆನ್ನಲ್ಲೇ ಮಕ್ಕಳ ಆಟ ಆಡುವ ನೆಪದಲ್ಲಿ ತಂಪು (ಪಾನೀಯ) ಪಡೆಯಬೇಕು ಎನ್ನುವ ಹಂಬಲದೊಂದಿಗೆ ನೀರಿನಲ್ಲಿ ಈಜಲು ಹೋಗುವ ಸಾಧ್ಯತೆಗಳು ಇರುತ್ತವೆ. ಆದ್ದರಿಂದ ಪೋಷಕರೇ ಚಿಕ್ಕ ಮಕ್ಕಳ ಚಲನವಲನಗಳ ಬಗ್ಗೆ ಎಚ್ಚರದಿಂದ ಜಾಗರೂಕರಾಗಿರಿ ಯಾವುದೇ ಕಾರಣಕ್ಕೂ ಮಕ್ಕಳನ್ನು ಕರೆ -ಕಟ್ಟೆಗಳು ಕೃಷಿ ಹೊಂಡಗಳು ಬಳಿ ಬಿಡಬೇಡಿ ಎಂದು ಐಕ್ಯೂ ಇಂಟರ್ನ್ಯಾಷನಲ್ ಶಾಲಾ ಸಂಸ್ಥೆ ಮುಖ್ಯಸ್ಥ ರಾಘವೇಂದ್ರ ಅವರು ತಿಳಿಸಿದರು.

ಬೇಸಿಗೆ ಕಾಲ ಪ್ರಾರಂಭಿಸಿದ್ದು, ಹಿನ್ನೆಲೆಯಲ್ಲಿ ಶಾಲೆಗಳಿಗೆ ಎರಡು ತಿಂಗಳ ರಜೆ ಘೋಷಿಸಲಾಗಿದೆ ಬೇಸಿಗೆ ರಜೆ ಬಂತೆಂದರೆ ಸಾಕು ತಂದೆ -ತಾಯಂದಿರು ಮಕ್ಕಳನ್ನು ಕರೆದುಕೊಂಡು ಹಳ್ಳಿಯಲ್ಲಿ ಇರುವ ಅಜ್ಜಿ- ತಾತ ಮನೆಗೆ ಹೋಗುವುದು ಬೇರೆ ಬೇರೆ ಊರುಗಳಲ್ಲಿ ಇರುವ ತಮ್ಮ ಸಂಬಂಧಿಕರ ಮನೆಗಳಿಗೆ ಮತ್ತು ತಮ್ಮ ತಮ್ಮ ಕುಟುಂಬಕ್ಕೂ ಹತ್ತಿರವಾಗಿರುವ ಸ್ನೇಹಿತರ ಮನೆಗಳಿಗೆ ಅಥವಾ ಬೇರೆ ಬೇರೆ ಊರುಗಳಿಗೆ ಹೋಗಿ ಎಲ್ಲರೊಂದಿಗೆ ನಗುನಗುತ್ತಲೇ ಸಲ್ಪ ದಿನಗಳ ಕಾಲ ಕಳೆಯುವುದಕ್ಕೆ ಹೋಗಿರುತ್ತಾರೆ. ಏಕೆಂದರೆ ಬೇಸಿಗೆ ಕಾಲ ತಾಪ ಏರುತ್ತಿರುವ ಬೆನ್ನಲ್ಲೇ ತಂಪು ಪಡೆಯಲು ಮಕ್ಕಳು ಕರೆ -ಕಟ್ಟೆಗಳು ತೋಟದ ಹೊಲದಲ್ಲಿ ಇರುವ ಕೃಷಿ ಹೊಂಡಗಳು ಮತ್ತು ಬಾವಿಯಲ್ಲಿ ನೀರು ಕುಡಿಯುವುದಕ್ಕೆ ಅಥವಾ ಅಧಿಕ ಬಿಸಿಲು ತಾಪ ಏರುತ್ತಿರುವ ಬೆನ್ನಲ್ಲೇ ಮಕ್ಕಳು ನೀರಿನಲ್ಲಿ ಈಜಲು ಹೋಗುವ ಸಾಧ್ಯತೆಗಳು ಇರುತ್ತದೆ. ಪೋಷಕರೇ ಚಿಕ್ಕ ಮಕ್ಕಳಗಳ ಚಲನವಲನಗಳ ಬಗ್ಗೆ ಎಚ್ಚರ ವಹಿಸಬೇಕು ಎಂದು ಐಕ್ಯೂ ಇಂಟರ್‌ನ್ಯಾಷನಲ್ ಶಾಲಾ ಸಂಸ್ಥೆ ಮುಖ್ಯಸ್ಥ ಆಡಳಿತ ಮಂಡಳಿ ಅಧಿಕಾರಿ ರಾಘವೇಂದ್ರ ಅವರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದರು.



ಉದಯವಾಹಿನಿ ಚಿತ್ರ



ಉದಯವಾಹಿನಿ ಚಿತ್ರ

## ಮಿನಿ ನ್ಯೂಸ್

### ಬೆಂಗಳೂರು ಚಲೋ ಇಂದು

• **ಉದಯವಾಹಿನಿ, ಗದಗ**

ರೈತರಿಗೆ ಮಾರಕವಾಗಿರುವ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆಯುವುದು, ರೈತರ ಸಂಪೂರ್ಣ ಸಾಲ ಮನ್ನಾ, ರೈತರ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ಸೇರಿದಂತೆ ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಶುಕ್ರವಾರ ಬೆಂಗಳೂರು ಚಲೋ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ನಟರಾಜ ಸವಡಿ ಹೇಳಿದರು. ಮಾಲಿನ್ಯಕಾರಕ ಕಾರ್ಖಾನೆಗಳ ಸ್ಥಾಪನೆ ಹಾಗೂ ವಿಸ್ತರಣೆ ಸ್ಥಗಿತಗೊಳಿಸಬೇಕು ಮತ್ತು ಪರಿಸರಸ್ನೇಹಿ ಉದ್ದಿಮೆಗಳ ಸ್ಥಾಪನೆಗೆ ಒತ್ತು ನೀಡಬೇಕು. ಉದ್ದಿಮೆಜನ್ಯ ಮಾಲಿನ್ಯ ನಿರ್ವಹಣೆಯನ್ನು ಪರಿಸರವಾದಿಗಳಿಗೆ ವಹಿಸುವುದು ಸೇರಿದಂತೆ ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಪ್ರತಿಭಟನೆ ವೇಳೆ ಒತ್ತಾಯಿಸಲಾಗುವುದು ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಆಲಮಟ್ಟಿ ಜಲಾಶಯವನ್ನು ಎತ್ತರಿಸಲು ಸರ್ಕಾರ ಕ್ರಮವಹಿಸಬೇಕು. ರೈತರ ಬೆಳೆಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕು. ಜಲ ಜೀವನ ಮಿಷನ್ ಅಡಿಯಲ್ಲಿ ಪ್ರತಿ ಹಳ್ಳಿಗೂ ಸಮರ್ಪಕವಾಗಿ ಕುಡಿಯುವ ನೀರು ಪೂರೈಕೆ ಮಾಡಬೇಕು ಎಂದು ಆಗ್ರಹಿಸಿದರು. ರೈತ ನಾಯಕಿ ರೇಖಾ ಜಡಿ ಮಾತನಾಡಿ, ರೈತರ ಹೊಲಗಳಿಗೆ ನದಿ ನೀರನ್ನು ಸಕಾಲಕ್ಕೆ ಪೂರೈಸುವುದು, ಕಾರ್ಖಾನೆಗಳ ಸುತ್ತಮುತ್ತ ವಾಯು ಗುಣಮಟ್ಟ ಮಾಪಕಗಳನ್ನು ಅಳವಡಿಸುವುದು, ಕಡಿಮೆ ಮೀಸಲಾತಿ ಸೌಲಭ್ಯ ಪಡೆದ ಕುಟುಂಬಕ್ಕೆ ಹೆಚ್ಚಿನ ಸವಲತ್ತುಗಳನ್ನು ನೀಡಲು ಸರ್ಕಾರ ಕ್ರಮವಹಿಸಬೇಕು' ಎಂದು ಹೇಳಿದರು. ಮಾಲಿನ್ಯ ನಿಯಂತ್ರಣ ಮಂಡಳಿಯ ಕಾರ್ಯನಿರ್ವಹಣೆ ಸರಿಪಡಿಸುವುದು, ರೈತರಿಗೆ ಸಾಕಾಗುವಷ್ಟು ಬೀಜಗೊಬ್ಬರಗಳನ್ನು ಸಕಾಲದಲ್ಲಿ ಪೂರೈಸಬೇಕು ಎಂದು ಹೇಳಿದರು.

### ಚಲವಾದಿ, ಮಾದಿಗರು ಸೌಹಾರ್ದದಿಂದ ಬದುಕಿ

• **ಉದಯವಾಹಿನಿ, ಹುಬ್ಬಳ್ಳಿ**

ಚಲವಾದಿ ಹಾಗೂ ಮಾದಿಗ ಸಮುದಾಯಗಳು ಸೌಹಾರ್ದದಿಂದ ಬಾಳುತ್ತಿವೆ. ಆದರೆ ಈಚೆಗೆ ರಾಜಕಾರಣಿಗಳು ಹಾಗೂ ಕೆಲವು ದಲಿತ ಮುಖಂಡರು ಈ ಎರಡು ಪ್ರಬಲ ಸಮುದಾಯಗಳನ್ನು ಒಡೆದು ಆಳುವ ಮನಸ್ಥಿತಿ ಹೊಂದಿದ್ದಾರೆ ಎಂದು ಕರ್ನಾಟಕ ರಾಜ್ಯ ಛಲವಾದಿ, ಮಾದಿಗ ಸಮನ್ವಯ ಸಮಿತಿ ಅಧ್ಯಕ್ಷ ಆನಂದ ಔದಿ ಆರೋಪಿಸಿದ್ದಾರೆ. ರಾಜಕೀಯ ಮಾಡುವ ದುಷ್ಟ ಶಕ್ತಿಗಳ ಕಾರಣದಿಂದ ಈ ಎರಡು ಸಮುದಾಯಗಳ ಜನರು ಬದ್ಧ ವೈರಿಗಳಂತೆ ಆಡುತ್ತಿದ್ದಾರೆ. ಇದರಿಂದ ಹೊರಬರಬೇಕು. ಎರಡೂ ಸಮುದಾಯಗಳ ಪ್ರಬಲ ನಾಯಕರು ಒಂದೇ ವೇದಿಕೆಯಲ್ಲಿ, ಎಲ್ಲರೂ ಒಂದು ಎಂಬ ಭಾವದಿಂದ ಕಾಣಿಸಿಕೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

### ಖಾಲಿ ಹುದ್ದೆ ಭರ್ತಿಗೆ ಮನವಿ

• **ಉದಯವಾಹಿನಿ, ಮುದ್ದೇಬಿಹಾಳ**

ರಾಜ್ಯ ಸರ್ಕಾರವು ನಿರುದ್ಯೋಗಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿ ಮುದ್ದೇಬಿಹಾಳ ತಹಶೀಲ್ದಾರ್ ಕಚೇರಿಯ ಮುಂದೆ ಜನ ಸಾಮಾನ್ಯರ ವೇದಿಕೆಯ ಹೋರಾಟಗಾರರು ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಕೀರ್ತಿ ಚಾಲಕ ಅವರಿಗೆ ಮನವಿ ಸಲ್ಲಿಸಿದರು. ನ್ಯಾಯವಾದಿ ಪಿ.ಬಿ.ಗೌಡರ, ಜನ ಸಾಮಾನ್ಯರ ವೇದಿಕೆ ಅಧ್ಯಕ್ಷ ಯಲ್ಲಪ್ಪ ಹೆಗಡೆ ಮಾತನಾಡಿ, ಕೇಂದ್ರ ಹಾಗೂ ಸರ್ಕಾರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ವಿಫಲವಾಗಿದೆ. ಆದ್ದರಿಂದ ಶೀಘ್ರವಾಗಿ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ರಾಜ್ಯದಲ್ಲಿ ವಿವಿಧ ಇಲಾಖೆಯಲ್ಲಿ ಖಾಲಿ ಇರುವ 2.84 ಹುದ್ದೆಗಳನ್ನು, ಕೇಂದ್ರದಲ್ಲಿ ಖಾಲಿ ಇರುವ 9.64 ಲಕ್ಷ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಬೇಕು ಎಂದರು. ಬಡ ವಿದ್ಯಾರ್ಥಿಗಳು ಈಗಾಗಲೇ ಶಿಕ್ಷಣ ಮುಗಿಸಿ ಸರ್ಕಾರಿ ಉದ್ಯೋಗಕ್ಕಾಗಿ ಕಾಯುತ್ತ ಕುಳಿತಿದ್ದಾರೆ ಎಂದರು.

### 12ಕ್ಕೂ ಹೆಚ್ಚು ಜನರ ಮೇಲೆ 'ಮುಸಿಯಾ' ದಾಳಿ

• **ಉದಯವಾಹಿನಿ, ಹರಪನಹಳ್ಳಿ**

ತಾಲ್ಲೂಕಿನ ಯರಬಾಳು ಗ್ರಾಮದಲ್ಲಿ ಮುಸಿಯಾ ದಾಳಿ ಮಾಡಿದ ಪರಿಣಾಮ ಐದು ತಿಂಗಳಲ್ಲಿ 12ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ. 5 ತಿಂಗಳಿಂದ ಗ್ರಾಮದಲ್ಲೇ ಬೀಡುಬಿಟ್ಟಿರುವ ಮುಸಿಯಾ, ಕಳೆದ ಒಂದು ತಿಂಗಳಲ್ಲಿ 8ಕ್ಕೂ ಹೆಚ್ಚು ಜನರಿಗೆ ಕಚ್ಚಿ ಗಾಯಗೊಳಿಸಿದೆ. ಇದರಿಂದಾಗಿ ಇಡೀ ಗ್ರಾಮಸ್ಥರು ಮನೆಯಿಂದ ಹೊರಬರಲು ಹಿಂದೇಟು ಹಾಕುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ವಿಪರೀತವಾಗಿ ವರ್ತಿಸುತ್ತಿರುವ ಮುಸಿಯಾ, ಕಂಡ ಕಂಡವರ ಮೇಲೆ ಎರಗುತ್ತಿದೆ. ಈಗಾಗಲೇ ಎನ್. ಮಂಜಪ್ಪ, ಹನುಮಂತಪ್ಪ, ಹಾಲನಗೌಡ, ಪ್ರಹ್ಲಾದ್, ನವೀನ್, ಬಸವರಾಜ್, ಪ್ರಕಾಶ್ ಸೇರಿದಂತೆ 12ಕ್ಕೂ ಹೆಚ್ಚು ಜನರಿಗೆ ಕಚ್ಚಿ ತೀವ್ರವಾಗಿ ಗಾಯಗೊಳಿಸಿದೆ. ಗಾಯಾಳುಗಳಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ರೈತರು ಟ್ರಾಕ್ಟರ್ ನಲ್ಲಿ ಜಮೀನಿಗೆ ಹೋಗುತ್ತಿರುವಾಗ ಹೆಚ್ಚಿನ ಸಲ ದಾಳಿ ಮಾಡಿದೆ ಎಂದು ಗಾಯಾಳು ಪ್ರಕಾಶ್ ತಿಳಿಸಿದರು.

ದಿನದಿಂದ ದಿನಕ್ಕೆ ಗಾಯಾಳುಗಳ ಸಂಖ್ಯೆ ಹೆಚ್ಚಾಗುತ್ತಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಮುಸಿಯಾವನ್ನು ಸೆರೆಹಿಡಿದು ನಮ್ಮ ಗ್ರಾಮಕ್ಕೆ ನೆಮ್ಮದಿ ಒದಗಿಸಬೇಕು ಎಂದು ಯರಬಾಳು ಗ್ರಾಮಸ್ಥರು ಒಕ್ಕೊರಲಿನಿಂದ ಆಗ್ರಹಿಸಿದ್ದಾರೆ.

# ದೇಗುಲಗಳಿಗೆ ಆದಾಯ ತುಂಬಿಸಿದ 'ಶಕ್ತಿ' ಯೋಜನೆ

### ಶಕ್ತಿ ಯೋಜನೆ ಜಾರಿ ಬಳಿಕ ಧಾರ್ಮಿಕ ಕೇಂದ್ರಗಳತ್ತ ಹೆಚ್ಚಿದ ಭಕ್ತರ ಚಿತ್ತ, ಎ, ಬಿ ವರ್ಗದ ದೇವಸ್ಥಾನಗಳಲ್ಲಿ ವರ್ಷದಿಂದ ವರ್ಷಕ್ಕೆ ಆದಾಯ ಹೆಚ್ಚು

• **ಉದಯವಾಹಿನಿ, ಬಳ್ಳಾರಿ**

ಗಣಿಗಾರಿಕೆ ಮೂಲಕ ರಾಜ್ಯದಲ್ಲಿಯೇ ಶ್ರೀಮಂತ ಜಿಲ್ಲೆಯಾಗಿರುವ ಬಳ್ಳಾರಿಯಲ್ಲಿ ಹಿಂದೂ ಮತ್ತು ಧಾರ್ಮಿಕ ದತ್ತಿ ಇಲಾಖೆ 'ಎ' ಮತ್ತು 'ಬಿ' ವರ್ಗದ ದೇವಸ್ಥಾನಗಳು ವರ್ಷದಿಂದ ವರ್ಷಕ್ಕೆ ಆದಾಯ ಹೆಚ್ಚಾಗುವ ಮೂಲಕ ಶ್ರೀಮಂತ ದೇವಸ್ಥಾನಗಳಾಗಿ ಹೊರಹೊಮ್ಮಿವೆ. ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ 'ಎ' ವರ್ಗದ 5, 'ಬಿ' ವರ್ಗದ 5 ಸೇರಿದಂತೆ ಒಟ್ಟು 1,299 ದೇವಸ್ಥಾನಗಳಿವೆ. ಅದರಲ್ಲಿ ಎ ಮತ್ತು ಬಿ ವರ್ಗದ ದೇವಸ್ಥಾನದಲ್ಲಿ ವರ್ಷದಿಂದ ವರ್ಷಕ್ಕೆ ಭಕ್ತರ ಸಂಖ್ಯೆ ಹೆಚ್ಚಾಗುತ್ತಿದೆ.

**ಎಲ್ಲೆಲ್ಲಿ ಎಷ್ಟೆಷ್ಟು ಆದಾಯ ಸಂಗ್ರಹ:** ಜಿಲ್ಲೆಯಲ್ಲಿರುವ ಎ ವರ್ಗದ ದೇವಸ್ಥಾನಗಳ ಪೈಕಿ ಬಳ್ಳಾರಿ ನಗರದಲ್ಲಿನ ಕನಕ ದುರ್ಗಮ್ಮ ದೇವಸ್ಥಾನದಲ್ಲಿ 2022-23ರಲ್ಲಿ 274.14 ಲಕ್ಷ ರೂ., 2023-24 ರಲ್ಲಿ 335.82ಲಕ್ಷ ರೂ., 2024-25 ರಲ್ಲಿ 347.51 ಲಕ್ಷ ರೂ. ಸೇರಿ ಒಟ್ಟು 957.47ಲಕ್ಷ ರೂ., ಕುರುಗೋಡು ದೊಡ್ಡ ಬಸವೇಶ್ವರ ದೇವಸ್ಥಾನದಲ್ಲಿ 2022-2025ರವರೆಗೆ 286.71ಲಕ್ಷ ರೂ., ಎತ್ತಿನಬೂದಿಹಾಳು ಗ್ರಾಮದ ಕಟ್ಟೆ ಬಸವೇಶ್ವರ ದೇವಾಲಯದಕ್ಕೆ 119.33ಲಕ್ಷ ರೂ. ಆದಾಯ ಬಂದಿದೆ. ಅದರ ಹೊರತಾಗಿ ಬಿ ವರ್ಗದ ದೇವಸ್ಥಾನಗಳಾದ ಕೋಟೆ ಮಲ್ಲೇಶ್ವರ ದೇವಸ್ಥಾನಕ್ಕೆ 75.6ಲಕ್ಷ ರೂ., ಸಿರುಗುಪ್ಪ ತಾಲ್ಲೂಕಿನ ದರೂರು ಗ್ರಾಮದ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ 23.31ಲಕ್ಷ ರೂ., ಬಳ್ಳಾರಿಯ ಕುಮಾರಸ್ವಾಮಿ ದೇವಸ್ಥಾನಕ್ಕೆ 79.18ಲಕ್ಷ ರೂ., ಬನ್ನಿಮಹಾಕಾಳಮ್ಮ ದೇವಸ್ಥಾನ 95.54ಲಕ್ಷ ರೂ., ಬಳ್ಳಾರಿ ನಗರದ ಶ್ರೀ ನಾಗೇಶ್ವರ ಸ್ವಾಮಿ ದೇವಾಲಯಕ್ಕೆ 11.96ಲಕ್ಷ ರೂ. ಆದಾಯ ಸಂಗ್ರಹವಾಗಿದೆ.



**ಎಲ್ಲೆಲ್ಲಿ ಎಷ್ಟು ಖರ್ಚು:** ಜಿಲ್ಲೆಯಲ್ಲಿರುವ ಎ ಮತ್ತು ಬಿ ವರ್ಗದ ದೇವಸ್ಥಾನಗಳಲ್ಲಿ ಅತಿಹೆಚ್ಚು ಆದಾಯ ಬರುವುದರೊಂದಿಗೆ ಪ್ರತಿ ವರ್ಷ ಅಷ್ಟೇ ಪ್ರಮಾಣದಲ್ಲಿ ಖರ್ಚು ಮಾಡಲಾಗುತ್ತಿದೆ. ದೇವಸ್ಥಾನಗಳ ನಿರ್ವಹಣೆ, ರಥೋತ್ಸವ, ಸಿಬ್ಬಂದಿ ವೆಚ್ಚ, ಅಭಿವೃದ್ಧಿ, ಜೀರ್ಣೋದ್ಧಾರ, ಮೂಲ ಸೌಕರ್ಯ ಸೇರಿ ನಾನಾ ಕಾರಣಗಳಿಗಾಗಿ ಹಣ ವ್ಯಯಿಸಲಾಗುತ್ತಿದೆ. ಅದರಲ್ಲಿ ಕಳೆದ ಮೂರು ವರ್ಷದಲ್ಲಿ ಕನಕ ದುರ್ಗಮ್ಮ ದೇವಸ್ಥಾನಕ್ಕೆ 1027.04ಲಕ್ಷ ರೂ., ದೊಡ್ಡಬಸವೇಶ್ವರ ದೇವಸ್ಥಾನಕ್ಕೆ 277.76ಲಕ್ಷ ರೂ., ಕಟ್ಟೆ ಬಸವೇಶ್ವರ ದೇವಾಲಯಕ್ಕೆ 118.86ಲಕ್ಷ ರೂ., ಹಾಗೂ ಬಿ ವರ್ಗ ದೇವಸ್ಥಾನಗಳಾದ ಕೋಟೆ ಮಲ್ಲೇಶ್ವರ ದೇವಸ್ಥಾನದಲ್ಲಿ 66.12ಲಕ್ಷ ರೂ., ದರೂರು ವೀರಭದ್ರೇಶ್ವರ ಸ್ವಾಮಿ ದೇವಸ್ಥಾನಕ್ಕೆ 15.75 ಲಕ್ಷ ರೂ., ಕುಮಾರಸ್ವಾಮಿ ದೇವಸ್ಥಾನಕ್ಕೆ 75.36ಲಕ್ಷ ರೂ., ಬನ್ನಿಮಹಾಕಾಳಮ್ಮ ದೇವಸ್ಥಾನಕ್ಕೆ 118.4ಲಕ್ಷ ರೂ., ಮತ್ತು ಶ್ರೀ ನಾಗೇಶ್ವರ ಸ್ವಾಮಿ ದೇವಾಲಯಕ್ಕೆ 7.32ಲಕ್ಷ ರೂ. ಅನುದಾನ ಖರ್ಚುಮಾಡಲಾಗಿದೆ.

**ಭಕ್ತರಿಗಿಲ್ಲ ಸೌಲಭ್ಯದ ದರ್ಶನ**

ಅತಿಹೆಚ್ಚು ಆದಾಯ ಗಳಿಸುವ ಎ ಮತ್ತು ಬಿ ವರ್ಗದ ದೇವಸ್ಥಾನಗಳಲ್ಲಿ ಭಕ್ತರಿಗೆ ಸೌಲಭ್ಯಗಳ ಕೊರತೆ ಇಂದಿಗೂ ಕಾಡುವಂತಾಗಿದೆ. ಪ್ರತಿ ವರ್ಷದಿಂದ ವರ್ಷಕ್ಕೆ ದೇವಸ್ಥಾನದಲ್ಲಿ ದರ್ಶನ ಪಡೆಯುವ ಭಕ್ತರ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಆದಾಯವೂ ಏರಿಕೆಯಾಗುತ್ತಿದೆ. ಆದರೆ, ಭಕ್ತರಿಗೆ ಮೂಲ ಸೌಕರ್ಯಗಳದ್ದೇ ಚಿಂತೆಯಾಗಿದೆ. ಅದರಲ್ಲೂ ಪ್ರಚಲಿತವಿರುವ ಅತಿಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡುವ ದೇವಸ್ಥಾನದಲ್ಲಿ ಭಕ್ತರಿಗೆ ವಸತಿ, ಶೌಚಾಗೃಹ, ಕುಡಿಯುವ ನೀರಿನ ಸೌಲಭ್ಯ ಹಾಗೂ ದೇವಸ್ಥಾನದ ಅಭಿವೃದ್ಧಿ ಸೇರಿ ನಾನಾ ಸೌಲಭ್ಯಗಳು ಕಲ್ಪಿಸುವ ಅಗತ್ಯವಿದೆ. ಇದರಿಂದ ದೇವಸ್ಥಾನದಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿದಲ್ಲಿ ಮತ್ತಷ್ಟು ಭಕ್ತ ಸಂಖ್ಯೆಯಲ್ಲಿ ಏರಿಕೆಯಾಗುವ ಸಾಧ್ಯತೆಯಿದೆ.

**ಶಕ್ತಿ ಯೋಜನೆಯಿಂದ ಭಕ್ತರ ಸಂಖ್ಯೆ ಹೆಚ್ಚಳ**

ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಶಕ್ತಿ ಯೋಜನೆ ಜಾರಿ ಬಳಿಕ ಧಾರ್ಮಿಕ ಕೇಂದ್ರಗಳಲ್ಲಿ ಭಕ್ತರ ಸಂಖ್ಯೆಯಲ್ಲಿ ಭಾರಿ ಚೇತರಿಕೆ ಕಂಡಿದೆ. ದೇವಾಲಯಗಳಿಗೆ ಭಕ್ತರು, ವಿಶೇಷವಾಗಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ತೆರಳುತ್ತಿರುವುದರಿಂದ ಪ್ರತಿಷ್ಠಿತ ದೇವಾಲಯಗಳ ಹುಂಡಿಗಳು ಬಹುಬೇಗ ಭರ್ತಿಯಾಗುತ್ತಿವೆ. ದೇವಾಲಯಗಳ ಆದಾಯ ಕಳೆದ ಮೂರು ವರ್ಷದಲ್ಲಿ ಒಂದೂವರೆಯಿಂದ ಎರಡು ಪಟ್ಟು ಏರಿಕೆಯಾಗಿದೆ. ಜಿಲ್ಲೆ ಅಲ್ಲದೇ ಬೇರೆ ಜಿಲ್ಲೆಯ ಭಕ್ತರು ಆಗಮಿಸಿ ದೇಗುಲಗಳಲ್ಲಿ ದರ್ಶನ ಪಡೆದು ದೇವರ ಕೃಪೆಗೆ ಪಾತ್ರರಾಗುವವರ ಸಂಖ್ಯೆ ದ್ವಿಗುಣಗೊಳ್ಳುತ್ತಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ವಯಸ್ಸಾದವರು ತಮ್ಮ ಆರೋಗ್ಯವನ್ನು ನೋಡಿಕೊಳ್ಳಬೇಕು. ಹಣದ ಪ್ರಾಮುಖ್ಯತೆ ನಿಮಗೆ ಚೆನ್ನಾಗಿ ಗೊತ್ತಿದೆ, ಆದ್ದರಿಂದ ಇಂದು ನಿಮ್ಮ ಮೂಲಕ ಉಳಿಸಲಾಗಿರುವ ಹಣ ನಿಮ್ಮ ತುಂಬಾ ಕೆಲಸಕ್ಕೆ ಬರಬಹುದು ಮತ್ತು ನೀವು ಯಾವುದೇ ದೊಡ್ಡ ಸಮಸ್ಯೆಯಿಂದ ಹೊರಬರಬಹುದು.

**ವೃಷಭ** ನೀವು ವಿರಾಮದ ಸಂತೋಷವನ್ನು ಅನುಭವಿಸಲಿದ್ದೀರಿ. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ಸಂತೋಷದ ಚೈತನ್ಯದಾಯಕ – ಪ್ರಿಯವಾದ ಚಿತ್ತದ – ನಿಮ್ಮ ಖುಷಿಯ ಸ್ವಭಾವ ನಿಮ್ಮ ಸುತ್ತಲಿನವರಿಗೆ ಸಂತೋಷ ಮತ್ತು ಖುಷಿಯನ್ನು ತರುತ್ತದೆ.

**ಮಿಥುನ** ಸಂಘರ್ಷವು ನಿಮ್ಮ ಅನಾರೋಗ್ಯವನ್ನು ಇನ್ನಷ್ಟು ಹಾಳುಮಾಡಬಹುದಾದ್ದರಿಂದ ಅದನ್ನು ತಪ್ಪಿಸಿ. ನಿಮ್ಮ ಹಣವನ್ನು ಸಂಗ್ರಹಿಸಿದಾಗ ಮಾತ್ರ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ. ಇದನ್ನು ನೀವು ಚೆನ್ನಾಗಿ ಅರ್ಥಮಾಡಿಕೊಳ್ಳಿ ಇಲ್ಲದಿದ್ದರೆ ನೀವು ಮುಂಬರುವ ಸಮಯದಲ್ಲಿ ವಿಷಾದಿಸಬೇಕಾಗುತ್ತದೆ.

**ಕರ್ಕಾಟಕ** ನೀವು ಒಂದು ದೀರ್ಘ ಪ್ರಯಾಣಕ್ಕೆ ಹೋಗಲು ಯೋಜನೆ ಹಾಕುತ್ತಿದ್ದ ಹಾಗೆ ನಿಮ್ಮ ಆರೋಗ್ಯ ಮತ್ತು ಇಂಧನ ಸಂರಕ್ಷಣೆಯ ಹವ್ಯಾಸ ನಿಮಗೆ ಅಪಾರವಾದ ಉಪಯೋಗವುಂಟುಮಾಡುತ್ತದೆ. ಬಿಡುವಿಲ್ಲದ ಕೆಲಸಗಳ ಹೊರತಾಗಿಯೂ ನೀವು ಆಯಾಸವನ್ನು ನಿಭಾಯಿಸಲು ಶಕ್ತರಾಗಿರುತ್ತೀರಿ.

**ಸಿಂಹ** ನಿಮ್ಮ ನಿರಾಶಾದಾಯಕ ನಡವಳಿಕೆಯಿಂದಾಗಿ ನೀವು ಯಾವುದೇ ಪ್ರಗತಿ ಅನ್ನು ಹೊಂದಲು ಸಾಧ್ಯವಾಗುವುದಿಲ್ಲ. ಚಿಂತೆ ನಿಮ್ಮ ಚಿಂತನಾ ಶಕ್ತಿಯನ್ನು ಕುಂಠಿತಗೊಳಿಸಿದೆಯೆಂದು ಕಂಡುಕೊಳ್ಳಲು ಇದು ಸಕಾಲ. ಸಕಾರಾತ್ಮಕವಾಗಿ ಆಲೋಚಿಸಿ ನಿಮ್ಮ ವಿವೇಚನೆಯಲ್ಲಿ ಗಮನಾರ್ಹ ಬದಲಾವಣೆ ಕಾಣುತ್ತದೆ.

**ಕನ್ಯಾ** ಒಬ್ಬ ಸಂತನ ಆಶೀರ್ವಾದದಿಂದ ಮನಶ್ಶಾಂತಿ. ಯಾರಾದರೂ ನಿಮ್ಮ ನೆರೆಹೊರೆಯವರು ಇಂದು ನಿಮ್ಮ ಹತ್ತಿರ ಹಣ ಸಾಲ ಕೇಳಲು ಬರಬಹುದು, ಅವರಿಗೆ ಸಾಲ ಕೊಡುವುದಕ್ಕಿಂತ ಮುಂಚೆ ಅವರ ನಂಬಿಕೆಯನ್ನು ಅಗತ್ಯವಾಗಿ ಪರೀಕ್ಷಿಸಿ, ಇಲ್ಲದಿದ್ದರೆ ಹಣದ ನಷ್ಟವಾಗುವ ಸಾಧ್ಯತೆ ಇದೆ.

**ತುಲಾ** ಇಂದು, ನಿಮ್ಮ ಆರೋಗ್ಯವು ಆರೋಗ್ಯಕರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ಇಂದು ನಿಮ್ಮ ಆಪ್ತರೊಂದಿಗೆ ಜಗಳವಾಗಬಹುದು ಮತ್ತು ವಿಷಯ ನ್ಯಾಯಾಲಯ ಕಚೇರಿಯ ವರೆಗೂ ಹೋಗಬಹುದು.ಇದರ ಕಾರಣದಿಂದ ನಿಮ್ಮ ವಿಶೇಷ ಹಣ ಖರ್ಚಾಗಬಹುದು.

**ವೃಶ್ಚಿಕ** ಆರೋಗ್ಯ ಪರಿಪೂರ್ಣವಾಗಿರುತ್ತದೆ. ನಿಮ್ಮ ಯಾವುದೇ ಹಳೆಯ ಸ್ನೇಹಿತ ಇಂದು ವ್ಯಾಪಾರದಲ್ಲಿ ಲಾಭಗಳಿಸಲು ನಿಮಗೆ ಸಲಹೆ ನೀಡಬಹುದು, ನೀವು ಈ ಸಲಹೆಯನ್ನು ಅನುಸರಿಸಿದರೆ, ನೀವು ಖಂಡಿತವಾಗಿಯೂ ಹಣಗಳಿಸುವಿರಿ. ಹೊಸ ಹೂಡಿಕೆಗಳನ್ನು ಮಾಡುವಾಗ ಸ್ವತಂತ್ರರಾಗಿರಿ, ನಿಮ್ಮ ಸ್ವಂತ ನಿರ್ಧಾರಗಳನ್ನು ಕೈಗೊಳ್ಳಿ.

**ಧನಸ್ಸು** ತೊಂದರೆಯಲ್ಲಿರುವ ಯಾರಿಗಾದರೂ ಸಹಾಯ ಮಾಡಲು ನಿಮ್ಮ ಚೈತನ್ಯವನ್ನು ಬಳಸಿ. ಲೋಕೋಪಕಾರಕ್ಕಾಗಲ್ಲದಿದ್ದಲ್ಲಿ ಈ ನಶ್ವರ ದೇಹದ ಉಪಯೋಗವಾದರೂ ಏನು. ದೀರ್ಘಕಾಲದ ದೃಷ್ಟಿಕೋನದಿಂದ ಹೂಡಿಕೆ ಮಾಡಬೇಕು. ಇಂದು ನೀವು ಸ್ವಲ್ಪ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

**ಮಕರ** ನೀವು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿದಲ್ಲಿ ಖಿನ್ನತೆಗೊಳಗಾಗಬೇಡಿ. ಆಹಾರದ ಸ್ವಾದಕ್ಕೆ ಉಪ್ಪು ಬೇಕಾದ ಹಾಗೆ ಅತೃಪ್ತಿಯಿಂದ ಮಾತ್ರ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ. ನಿಮ್ಮ ಮನಸ್ಥಿತಿಯನ್ನು ಬದಲಾಯಿಸಲು ಕೆಲವು ಸಾಮಾಜಿಕ ಸಮಾರಂಭಗಳಿಗೆ ಹಾಜರಾಗಿ.

**ಕುಂಭ** ಬೆನ್ನಿನಲ್ಲಿ ನಿರಂತರ ನೋವಿನಿಂದ ಬಳಲುವ ಸಾಧ್ಯತೆಯಿದೆ. ವಿಶೇಷವಾಗಿ ಇದರ ಜೊತೆ ಸಾಮಾನ್ಯ ದೌರ್ಬಲ್ಯವಿದ್ದಾಗ ಇದನ್ನು ನಿರ್ಲಕ್ಷಿಸದಿರಿ. ಇಂದು ವಿಶ್ರಾಂತಿ ಬಹಳ ಪ್ರಮುಖವಾಗಿರುತ್ತದೆ. ಇಂದು ನೀವು ನಿಮ್ಮ ಹಣವನ್ನು ಖರ್ಚು ಮಾಡುವ ಅಗತ್ಯವಿಲ್ಲ, ಏಕೆಂದರೆ ಮನೆಯ ಯಾವುದೇ ಹಿರಿಯ ಸದಸ್ಯ ಇಂದು ನಿಮಗೆ ಹಣ ನೀಡಬಹುದು.

**ಮೀನ** ಕೆಲವು ಬಿಕ್ಕಟ್ಟುಗಳು ಮತ್ತು ಭಿನ್ನಾಭಿಪ್ರಾಯಗಳು ನಿಮಗೆ ಕಿರಿಕಿರಿ, ಆತಂಕವನ್ನು ತರಬಹುದು. ಆರ್ಥಿಕ ಜೀವನದಲ್ಲಿ ಇಂದು ಸಂತೋಷ ಉಳಿದಿರುತ್ತದೆ.ಇದರೊಂದಿಗೆ ನೀವು ಇಂದು ಸಾಲಗಳಿಂದ ಮುಕ್ತರಾಗಬಹುದು. ಕೃತಕತೆ ನಿಮಗೆ ಯಾವ ಲಾಭವನ್ನೂ ತರದಿರುವುದರಿಂದ ನಿಮ್ಮ ಸಂಭಾಷಣೆಯಲ್ಲಿ ನೈಜತೆಯಿರಲಿ.

### ಗೃಹಲಕ್ಷ್ಮಿ ಯೋಜನೆಯ 29ನೇ ಕಂತು ಬಿಡುಗಡೆ, ಶೀಘ್ರವೇ ಮಹಿಳೆಯರ ಖಾತೆಗೆ ಹಣ ಜಮಾ

# ಗೃಹಲಕ್ಷ್ಮಿ ಯೋಜನೆ ಮಹಿಳಾ ಸಬಲೀಕರಣದ ಹೊಸ ದಿಕ್ಕು

• ಉದಯವಾಹಿನಿ, ಚಿತ್ರದುರ್ಗ



ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಗೃಹಲಕ್ಷ್ಮಿ ಯೋಜನೆಯ 29ನೇ ಕಂತಿನ ಹಣ ಬಿಡುಗಡೆಯಾಗಿದ್ದು, ಮುಂದಿನ ಎರಡ್ಮೂರು ದಿನಗಳಲ್ಲಿ ಜಿಲ್ಲೆಯ ಅರ್ಹ ಮಹಿಳೆಯರ ಬ್ಯಾಂಕ್ ಖಾತೆಗೆ ಜಮಾ ಆಗಲಿದೆ ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಆರ್. ಶಿವಣ್ಣ ಗಂಜಿಗಟ್ಟೆ ತಿಳಿಸಿದ್ದಾರೆ.

**ಸರ್ಕಾರದಿಂದ ನೇರ ಸಹಾಯ**

**ಈ ಯೋಜನೆಯ ಪ್ರಮುಖ ಉದ್ದೇಶ ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವುದು. ಮನೆ ನಡೆಸುವ ಹೊಣೆಗಾರಿಕೆಯನ್ನು ಹೊತ್ತಿರುವ ಮಹಿಳೆಯರಿಗೆ ಸರ್ಕಾರದಿಂದ ನೇರ ಸಹಾಯ ದೊರಕುವುದರಿಂದ ಅವರ ಆತ್ಮವಿಶ್ವಾಸವೂ ಹೆಚ್ಚಾಗಿದೆ. ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಅನೇಕ ಮಹಿಳೆಯರು ಈ ಹಣವನ್ನು ಮನೆಯ ಖರ್ಚು, ಮಕ್ಕಳ ಶಿಕ್ಷಣ, ಆರೋಗ್ಯ, ಸಣ್ಣ ಉಳಿತಾಯಕ್ಕೆ ಬಳಸುತ್ತಿದ್ದಾರೆ.**

**ಗೃಹಲಕ್ಷ್ಮಿ ಯೋಜನೆ ಆರಂಭವಾದ ನಂತರ ಮಹಿಳೆಯರ ಜೀವನದಲ್ಲಿ ಗಮನಾರ್ಹ ಬದಲಾವಣೆ ಕಂಡುಬಂದಿದೆ. ಹಲವು ಕುಟುಂಬಗಳಲ್ಲಿ ಮಹಿಳೆಯರ ಮಾತಿಗೆ ಹೆಚ್ಚಿನ ಗೌರವ ದೊರಕುತ್ತಿದೆ. ಆರ್ಥಿಕ ಸಹಾಯದಿಂದ ಅವರು ತಮ್ಮ ಅಗತ್ಯಗಳನ್ನು ಸ್ವತಂತ್ರವಾಗಿ ಪೂರೈಸಿಕೊಳ್ಳುವ ಅವಕಾಶ ಪಡೆದಿದ್ದಾರೆ. ಈ ಯೋಜನೆಯ ಮೂಲಕ ರಾಜ್ಯ ಸರ್ಕಾರ ಮಹಿಳಾ ಸಬಲೀಕರಣದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆ ಇಟ್ಟಿದೆ. ಗೃಹಲಕ್ಷ್ಮಿ ಯೋಜನೆ ಕೇವಲ ಹಣಕಾಸಿನ ಸಹಾಯವಲ್ಲ, ಮಹಿಳೆಯರ ಗೌರವ ಮತ್ತು ಆತ್ಮಸ್ಥೈರ್ಯ ಹೆಚ್ಚಿಸುವ ಸಾಮಾಜಿಕ ಕ್ರಾಂತಿಯಾಗಿದೆ. ಒಟ್ಟಿನಲ್ಲಿ, ಗೃಹಲಕ್ಷ್ಮಿ ಯೋಜನೆ ಕರ್ನಾಟಕದ ಮಹಿಳೆಯರಿಗೆ ಆಶಾಕಿರಣವಾಗಿದ್ದು, ಕುಟುಂಬಗಳ ಆರ್ಥಿಕ ಸ್ಥಿರತೆ ಹಾಗೂ ಸಮಾಜದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುತ್ತಿದೆ. ಮುಂದಿನ ದಿನಗಳಲ್ಲಿ ಈ ಯೋಜನೆ ಇನ್ನಷ್ಟು ಮಹಿಳೆಯರ ಬದುಕನ್ನು ಉತ್ತಮಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುವುದು ಖಚಿತ.**

**–ಆರ್.ಶಿವಣ್ಣ ಗಂಜಿಗಟ್ಟೆ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ**

**ಆರ್ಥಿಕ ಭದ್ರತೆಯ ಬೆಳಕು**

ಚಿತ್ರದುರ್ಗ ಜಿಲ್ಲೆಯ ಒಟ್ಟು 3,88,341 ಫಲಾನುಭವಿಗಳಿಗೆ ಈ ಯೋಜನೆಯ ಲಾಭ ದೊರೆಯಲಿದ್ದು, ಈ ಕಂತಿಗಾಗಿ ಸರ್ಕಾರ ಒಟ್ಟು ರೂ.77,66,82,000/– ರೂಪಾಯಿಗಳನ್ನು ಬಿಡುಗಡೆ ಮಾಡಿದೆ.

ರಾಜ್ಯ ಸರ್ಕಾರ ಮಹಿಳೆಯರ ಆರ್ಥಿಕ ಸ್ಥಿತಿಯನ್ನು ಬಲಪಡಿಸುವ ಉದ್ದೇಶದಿಂದ ಜಾರಿಗೆ ತಂದಿರುವ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾಗಿರುವ ಗೃಹಲಕ್ಷ್ಮಿ ಯೋಜನೆ.

ಕುಟುಂಬದ ಮುಖ್ಯ ಮಹಿಳೆಗೆ ಪ್ರತಿ ತಿಂಗಳು ರೂ.2000/– ಹಣವನ್ನು ನೇರವಾಗಿ ಬ್ಯಾಂಕ್ ಖಾತೆಗೆ ಜಮಾ ಮಾಡುವ ಮೂಲಕ ಈ ಯೋಜನೆ ಲಕ್ಷಾಂತರ ಮಹಿಳೆಯರ ಜೀವನದಲ್ಲಿ ಆರ್ಥಿಕ ಭದ್ರತೆಯ ಬೆಳಕು ತಂದಿದೆ.

## ಅಕ್ಕಮಹಾದೇವಿ ಜಯಂತಿ, ವಿಶ್ವ ಮಹಿಳಾ ದಿನಾಚರಣೆ

• ಉದಯವಾಹಿನಿ, ಬಸವನಬಾಗೇವಾಡಿ

ತಾಲ್ಲೂಕಾ ಶರಣ ಸಾಹಿತ್ಯ ಪರಿಷತ್ತು, ಕದಳಿ ವೇದಿಕೆ ಸಹಯೋಗದಲ್ಲಿ ಶಿವಶರಣೆ ಅಕ್ಕಮಹಾದೇವಿ ಜಯಂತಿ ಹಾಗೂ ವಿಶ್ವ ಮಹಿಳಾ ದಿನಾಚರಣೆಯನ್ನು ಎ. 2 ಗುರುವಾರ ಸಂಜೆ ಆರು ಗಂಟೆಗೆ ಪಟ್ಟಣದ ನಂದಿ ಬಡಾವಣೆಯ ಮಾರುತೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಾನಿಧ್ಯವನ್ನು ಸ್ಥಳೀಯ ವಿರಕ್ತಮಠದ ಸಿದ್ದಲಿಂಗ ಶ್ರೀಗಳು ವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಶರಣ ಸಾಹಿತ್ಯ ಪರಿಷತ್ತಿನ ತಾಲ್ಲೂಕಾಧ್ಯಕ್ಷರಾದ ವೀರಣ್ಣ. ಬಿ ಮರ್ತುರ ವಹಿಸಿಕೊಳ್ಳಲಿದ್ದಾರೆ. ಉದ್ಘಾಟನೆಯನ್ನು ಹಿರಿಯರಾದ ನಿರ್ಮಲಾ ತಾಂಬೆ ನೆರವೇರಿಸಲಿದ್ದಾರೆ.

ಕದಳಿ ವೇದಿಕೆ ಅಧ್ಯಕ್ಷರಾದ ಸಾವಿತ್ರಿ ಕಲ್ಯಾಣಶೆಟ್ಟಿ ಆಶಯ ನುಡಿಗಳನ್ನು ಆಡಲಿದ್ದಾರೆ. ಜಾನಪದ ಸಾಹಿತ್ಯ ಪರಿಷತ್ತಿನ ತಾಲ್ಲೂಕಾಧ್ಯಕ್ಷ ದೇವೇಂದ್ರ ಗೋನಾಳ ಉಪನ್ಯಾಸ ನೀಡಲಿದ್ದಾರೆ. ಶಿಕ್ಷಕಿ ಸರ್ವಮಂಗಳ ಕಡಿವಾಲ, ಗುರುಮಾತೆ ಕಮಲಾ ಪದರಾ ಆಗಮಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಶಶಿಕಲಾ ದೆಗಿನಾಳ, ಲಕ್ಷ್ಮೀಬಾಯಿ ಹಳ್ಳಿ, ಶಿವಪ್ಪ ಮುತ್ತಗಿ, ನಿರ್ಮಲಾ ಅಂಗಡಿ, ಮಹಾದೇವಿ ಕೊಪ್ಪದ, ಪುಷ್ಪ ಕುಲಕರ್ಣಿ ಅವರನ್ನು ಸನ್ಮಾನಿಸಲಾಗುವುದು ಎಂದು ವೇದಿಕೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಕನ್ನಡದಲ್ಲಿ ರೈಲ್ವೆ ಇಲಾಖೆ ಪರೀಕ್ಷೆಗೆ ಒತ್ತಾಯ

• ಉದಯವಾಹಿನಿ, ಬಾದಾಮಿ

ರೈಲ್ವೆ ಇಲಾಖೆಯ ಪರೀಕ್ಷೆಯಲ್ಲಿ ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ. ರಾಜ್ಯದಲ್ಲಿ ನಡೆಯುವ ರೈಲ್ವೆ ಇಲಾಖೆ ಪರೀಕ್ಷೆಯನ್ನು ಕನ್ನಡ ಭಾಷೆಯಲ್ಲಿ ನಡೆಸಬೇಕು ಎಂದು ಕೇಂದ್ರದ ರೈಲ್ವೆ ಸಚಿವ ವಿ.ಸೋಮಣ್ಣ ಅವರಿಗೆ ಮಂಡ್ಯದ ಕದಂಬಸೈನ್ಯ ರಾಜ್ಯ ಘಟಕದ ಅಧ್ಯಕ್ಷ ಬೇಕ್ರಿ ರಮೇಶ ತಹಶೀಲ್ದಾರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು. ರಾಜ್ಯ, ಜಿಲ್ಲಾ, ತಾಲ್ಲೂಕು ಘಟಕದ ಕನ್ನಡ ಸಂಘಟನೆಯ ಕದಂಬಸೈನ್ಯದ ವತಿಯಿಂದ ಮನವಿ ಸಲ್ಲಿಸಲಾಯಿತು.

ದಕ್ಷಿಣ ರೈಲ್ವೆ ಇಲಾಖೆಯು ತಮಿಳುನಾಡು, ಅಂಧ್ರಪ್ರದೇಶದಲ್ಲಿ ದಶಕಗಳಿಂದ ತಮಿಳು, ತೆಲುಗು ಭಾಷೆಯಲ್ಲಿ ಪರೀಕ್ಷೆಯನ್ನು ನಡೆಸುತ್ತಿದ್ದಾರೆ. ನೈರುತ್ಯ ವಲಯ ಕನ್ನಡದಲ್ಲಿ ಪರೀಕ್ಷೆಯನ್ನು ಯಾಕೆ ನಡೆಸುತ್ತಿಲ್ಲ ಎಂದು ಮನವಿಯಲ್ಲಿ ಪ್ರಶ್ನಿಸಿ ನೈರುತ್ಯ ರೈಲ್ವೆ ಕನ್ನಡಿಗರಿಗೆ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ. ಕನ್ನಡಿಗರಿಗೆ ಉದ್ಯೋಗ ದೊರೆಯಲು ಕನ್ನಡದಲ್ಲಿಯೇ ಪರೀಕ್ಷೆ ನಡೆಸಬೇಕು. ಸೂಕ್ತ ಕ್ರಮವನ್ನು ಕೈಗೊಳ್ಳದಿದ್ದರೆ ರಾಜ್ಯದಾದ್ಯಂತ ಹೋರಾಟವನ್ನು ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

## ಬಡವರ ಕಷ್ಟಗಳಿಗೆ ಸ್ಪಂದಿಸುವ ಜನಪ್ರತಿನಿಧಿಯ ಆಯ್ಕೆ ಮಾಡಿ

• ಉದಯವಾಹಿನಿ, ಹಿರಿಯೂರು

ದೀನ–ದಲಿತರು, ಬಡವರು, ದನಿ ಇಲ್ಲದವರಿಗೆ ಸ್ಪಂದಿಸುವ, ಕಷ್ಟದ ಸಮಯದಲ್ಲಿ ನಾನಿದ್ದೇನೆಂದು ಧೈರ್ಯ ತುಂಬುವ ಜನಪ್ರತಿನಿಧಿಯನ್ನು ಆಯ್ಕೆ ಮಾಡಬೇಕು ಎಂದು ಯುವ ಮುಖಂಡ ಸತೀಶ್ ಗೌಡ ಹೇಳಿದರು.

ನಗರದ ಹುಳಿಯಾರು ರಸ್ತೆಯಲ್ಲಿರುವ ಗಾಡಿ ಬಸವಣ್ಣ ಬಡಾವಣೆಯಲ್ಲಿ ಈಚೆಗೆ ತಮ್ಮ ಜನಸಂಪರ್ಕ ಕಚೇರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ಚುನಾವಣೆ ಘೋಷಣೆಯಾದಾಗ ಜನರ ಬಳಿ ಬಂದು, ಹಣ ಕೊಟ್ಟು ಗೆಲ್ಲುವ ಮೂಲಕ ಮತದಾರರನ್ನು ಅವಮಾನಿಸುವ ಮುಖಂಡರಿಗೆ ಮುಂಬರುವ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕು.

ಹಣಕ್ಕಿಂತ ಜನರಿಗೆ ಸ್ಪಂದಿಸುವ ಗುಣಕ್ಕೆ ಮತದಾರರ ಒಲವು ಎಂಬುದನ್ನು ಸಾಬೀತುಪಡಿಸಬೇಕು ಎಂದು ಮನವಿ ಮಾಡಿದರು. ಕ್ಷೇತ್ರದಲ್ಲಿ ಜ್ವಲಂತ ಸಮಸ್ಯೆಗಳ ದೊಡ್ಡ ಪಟ್ಟಿಯೇ ಇದೆ. ಅಧಿಕಾರದಲ್ಲಿರುವವರನ್ನು ಪ್ರಶ್ನಿಸುವ ಮನೋಭಾವ ಇಲ್ಲವಾಗಿರುವುದು ಪ್ರಜಾಪ್ರಭುತ್ವದ ಅಣಕ. ನೂತನ ಹೈಟೆಕ್ ಆಸ್ಪತ್ರೆ, ತಾಲ್ಲೂಕು ಪಂಚಾಯಿತಿ ಕಚೇರಿ, ತಾಲ್ಲೂಕು ಸೌಧ ಕಟ್ಟಡಗಳು ನಿರ್ಮಾಣಗೊಂಡು ಎರಡು ವರ್ಷವಾದರೂ ಉದ್ಘಾಟನೆ ಭಾಗ್ಯ ಕಂಡಿಲ್ಲ. ವಾಣಿವಿಲಾಸ ಅಣೆಕಟ್ಟೆಯ ಎರಡೂ ನಾಲೆಗಳು ದುರಸ್ತಿಯಾಗದ ಕಾರಣ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಹರಿಸಲು 20 ದಿನ ತೆಗೆದುಕೊಳ್ಳುತ್ತಿದ್ದ ಕಡೆ 30 ದಿನಗಳಾದರೂ ನೀರು ಮುಟ್ಟುತ್ತಿಲ್ಲ ಎಂದು ದೂರಿದರು.

ಹೆಸರಿಗೆ ಕೆಎಸ್ಆರ್‌ಟಿಸಿ ಡಿಪೊ ಬಂದಿದ್ದು, ಒಂದೇ ಒಂದು ಹೊಸ ಬಸ್ ಬಿಟ್ಟಿಲ್ಲ. ಗ್ರಾಮೀಣ ಪ್ರದೇಶದ ಜನರು ಸಾರಿಗೆ ವ್ಯವಸ್ಥೆ ಇಲ್ಲದೆ ಆಡಳಿತ ವ್ಯವಸ್ಥೆಯನ್ನು ಶಪಿಸುತ್ತಿದ್ದಾರೆ. ಜನಸಂಪರ್ಕ ಕಚೇರಿ ಆರಂಭವಾದ ನಂತರ ಕ್ಷೇತ್ರದ ಸಮಸ್ಯೆಗಳ ಪರಿಹಾರಕ್ಕೆ ಜನಾಂದೋಲನ ನಡೆಸಲಾಗುವುದು. ಪ್ರಮುಖವಾಗಿ ಆರೋಗ್ಯ, ಶಿಕ್ಷಣ, ಕುಡಿಯುವ ನೀರು, ಸಾರಿಗೆ ಸಂಪರ್ಕ, ರಸ್ತೆ ಸುಧಾರಣೆ, ಸಕ್ಕರೆ ಕಾರ್ಖಾನೆ ಪುನರಾರಂಭ, ಸರ್ಕಾರಿ ಕಚೇರಿಗಳಲ್ಲಿನ ಭ್ರಷ್ಟಾಚಾರದ ವಿರುದ್ಧ ನಮ್ಮ ಹೋರಾಟ ನಡೆಯಲಿದೆ ಎಂದು ಸ್ಪಷ್ಟಪಡಿಸಿದರು.

## ಕಳವು ಆರೋಪಿ ಬಂಧನ ಚಿನ್ನಾಭರಣ ಜಪ್ತಿ

• ಉದಯವಾಹಿನಿ, ಸವದತ್ತಿ

ತಾಲ್ಲೂಕಿನ ಯಲ್ಲಮ್ಮ ದೇವಸ್ಥಾನದಲ್ಲಿ ಸುಲಿಗೆ ಮಾಡಲಾದ ಚಿನ್ನಾಭರಣ ಹಾಗೂ ಠಾಣೆಯಲ್ಲಿ ದಾಖಲಿದ್ದ 4 ಮನೆ ಕಳವು ಪ್ರಕರಣಗಳನ್ನು ಬೇಧಿಸಿ, ಒಬ್ಬ ಆರೋಪಿ ಹಾಗೂ ಲಕ್ಷಾಂತರ ಮೌಲ್ಯದ ಚಿನ್ನಾಭರಣಗಳನ್ನು ಸವದತ್ತಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ತಾಲ್ಲೂಕಿನ ಯಲ್ಲಮ್ಮನ ಜಾತ್ರೆಗೆ ಜ.4 ರಂದು ಬಂದಿದ್ದ ಬೈಲಹೊಂಗಲ ತಾಲ್ಲೂಕು ಬೆಳವಡಿ ಗ್ರಾಮದ ರೇಣುಕಾ ನಂದಿ ಅವರ ಹತ್ತಿರವಿದ್ದ 80 ಸಾವಿರ ಮೌಲ್ಯದ ಚಿನ್ನದ ಮಾಂಗಲ್ಯ ಸರವನ್ನು ಬೆದರಿಸಿ ಕಿತ್ತುಕೊಂಡು ಪರಾರಿಯಾಗಿದ್ದನು. ಸವದತ್ತಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು.


ಮಾರ್ಚ್ 29 ರಂದು ಕಳವು ಮಾಡಿದ ಆರೋಪಿ ಗದಗ ಜಿಲ್ಲೆಯ ಲಕ್ಷ್ಮೇಶ್ವರದ ಪಕ್ಕೀರೇಶ (ದರ್ಶನ) ಗಂಗಪ್ಪ ಕಂಬಳಿ ಈತನನ್ನು ಬಂಧಿಸಿ 6.90 ಲಕ್ಷ ಮೌಲ್ಯದ 46 ಗ್ರಾಂ ಚಿನ್ನಾಭರಣ, 1.55 ಲಕ್ಷ ಮೌಲ್ಯದ 675 ಗ್ರಾಂ ಬೆಳ್ಳಿ ಆಭರಣ, 50 ಸಾವಿರ ಮೌಲ್ಯದ ದ್ವಿಚಕ್ರ ವಾಹನ ಹಾಗೂ ಕೃತ್ಯಕ್ಕೆ ಬಳಸಿದ ಆಯುಧ ಸೇರಿ ಒಟ್ಟು 8.95 ಲಕ್ಷ ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆದು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪಿಐ ಸುರೇಶ ಬೆಂಡೆಗುಂಬಳ ತಿಳಿಸಿದ್ದಾರೆ.

## ತೊಟ್ಟಿ ಜಾತಿ ಪ್ರಮಾಣಪತ್ರ ತಡೆಗೆ ಆಗ್ರಹ

• ಉದಯವಾಹಿನಿ, ಬೆಳಗಾವಿ

ಪರಿಶಿಷ್ಟ ಪಂಗಡ ಎಂದು ನಕಲಿ ಜಾತಿ ಪ್ರಮಾಣಪತ್ರ ಪಡೆಯುತ್ತಿರುವುದನ್ನು ತಡೆಗಟ್ಟಬೇಕು ಎಂದು ಒತ್ತಾಯಿಸಿ ಉತ್ತರ ಕರ್ನಾಟಕ ಪ್ರದೇಶ ವಾಲ್ಮೀಕಿ ನಾಯಕ ಸಮಾಜದ ಕಾರ್ಯಕರ್ತರು ಗುರುವಾರ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರ ಮನೆ ಎದುರು ಧರಣಿ ನಡೆಸಿದರು.

ವಾಲ್ಮೀಕಿ, ನಾಯಕ ಸಮುದಾಯ ಹೊರತುಪಡಿಸಿ, ಬೇರೆ ಸಮುದಾಯದವರೂ ಪರಿಶಿಷ್ಟ ಪಂಗಡ ಎಂದು ಬೊಟ್ಟಿ ಜಾತಿ ಪ್ರಮಾಣ ಪತ್ರ ಪಡೆಯುತ್ತಿದ್ದಾರೆ. ಅವುಗಳನ್ನು ಪಡೆಯುತ್ತಿರುವವರು ಮತ್ತು ನೀಡುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು' ಎಂದು ಒತ್ತಾಯಿಸಿದರು.



ಉದಯವಾಹಿನಿ ಚಿತ್ರ

ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮಕ್ಕೆ 1 ಸಾವಿರ ಕೋಟಿ ಅನುದಾನ ಕೊಡಬೇಕು ಎಂದು ಒತ್ತಾಯಿಸಿದರು. ಯಾದಗಿರಿಯ ಮುಖಂಡ ಸಿದ್ದಲಿಂಗಪ್ಪ ನಾಯಕ ಮಾತನಾಡಿ, ನಕಲಿ ಜಾತಿ ಪ್ರಮಾಣಪತ್ರ ಪಡೆದವರು ಸರ್ಕಾರಿ ಸೌಲಭ್ಯ ಅನುಭವಿಸುತ್ತಿರುವ ಕಾರಣ, ವಾಲ್ಮೀಕಿ, ನಾಯಕ ಸಮುದಾಯದವರಿಗೆ ಅನ್ಯಾಯವಾಗುತ್ತಿದೆ. ಹಾಗಾಗಿ ಪರಿಶಿಷ್ಟ ಪಂಗಡದ ಶಾಸಕರ ಮನೆ ಎದುರು ಪ್ರತಿಭಟನೆ ಮಾಡುತ್ತಿದ್ದೇವೆ. ನಮಗೆ ನ್ಯಾಯ ದೊರಕಿಸಿಕೊಡಲು ಶಾಸಕರು ವಿಧಾನಸಭೆಯಲ್ಲಿ ಧ್ವನಿ ಎತ್ತಬೇಕು ಎಂದು ಬಯಸುತ್ತೇವೆ ಎಂದು ಒತ್ತಾಯಿಸಿದರು. ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನಮ್ಮ ಸಮುದಾಯದ ಬೇಡಿಕೆಗಳನ್ನು ಈಡೇರಿಸಿಲ್ಲ ಎಂದು ದೂರಿದರು.

## ಹೋಟೆಲ್ ಮಾಲೀಕರು ಕಟ್ಟಿಗೆ ಒಲೆಗೆ ಮೊರೆ

• ಉದಯವಾಹಿನಿ, ಚನ್ನಮ್ಮನ ಕಿತ್ತೂರು

ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬಳಕೆಗೆ ತೊಂದರೆ ಇಲ್ಲ ಎಂಬ ಸರ್ಕಾರದ ಭರವಸೆ ಮಧ್ಯೆಯೇ ಸಿಲಿಂಡರ್ ಪೂರೈಕೆಯಲ್ಲಿನ ವ್ಯತ್ಯಯದಿಂದಾಗಿ ಅನೇಕ ಹೋಟೆಲ್ ಮಾಲೀಕರು ಕಟ್ಟಿಗೆ ಒಲೆಯ ಮೊರೆ ಹೋಗುತ್ತಿದ್ದಾರೆ. ಚನ್ನಮ್ಮನ ಕಿತ್ತೂರು ಪಟ್ಟಣದ ಹಳೇ ತಹಶೀಲ್ದಾರ್ ಕಚೇರಿ ಬಳಿ ಇರುವ ಇಂದಿರಾ ಕ್ಯಾಂಟೀನ್ ಸಿಬ್ಬಂದಿಯೂ ಕಟ್ಟಿಗೆಯಿಂದ ಖಾದ್ಯ ತಯಾರಿಕೆಗೆ ಹರಸಾಹಸ ಪಟ್ಟರು.

ತಾಲ್ಲೂಕಿನ ಹೊಸ ಕಾದ್ರೊಳ್ಳಿ ಬಳಿ ಇರುವ ಹೋಟೆಲ್ ಒಂದರ ಮಾಲೀಕ ಸಹ ಸೋಮವಾರ ಪುರಿ, ಭಾಜಿ ಸಿದ್ಧಪಡಿಸಲು ಕಟ್ಟಿಗೆ ಒಲೆಯ ಮೊರೆ ಹೋಗಿದ್ದರು. ಬ್ಯಾಟರಿ ರೀಚಾರ್ಜ್ ಒಲೆ ಬಳಸುತ್ತಿದ್ದು. ಒಮ್ಮೆ ಚಾರ್ಜ್ ಮಾಡಿದರೆ ಎರಡೂರು ಗಂಟೆಗಳ ಕಾಲ ಕಾರ್ಯ ನಿರ್ವಹಿಸುತ್ತದೆ. ಒಲೆ ಊದುವುದು ತಪ್ಪುತ್ತದೆ ಎಂದು ತಿಳಿಸಿದರು.

## ಜನರಿಂದ ಕಾಂಗ್ರೇಸ್ಸಿಗೆ ತಕ್ಕ ಪಾಠ: ಕಾರಜೋಳ

• ಉದಯವಾಹಿನಿ, ಬಾಗಲಕೋಟೆ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸುಳ್ಳು ಭರವಸೆ ನೀಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್, ಜನರ ಆಶೋತ್ತರಗಳಿಗೆ ಸ್ಪಂದಿಸುತ್ತಿಲ್ಲ. ನುಡಿದಂತೆ ನಡೆಯದ ಸರ್ಕಾರಕ್ಕೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯನವರಷ್ಟು ಮಹಾಮೋಸಗಾರ ಯಾರೂ ಇಲ್ಲ ಹೊಸಪೇಟೆಯಿಂದ ಕೂಡಲ ಸಂಗಮವರೆಗೆ ಪಾದಯಾತ್ರೆ ಮಾಡಿ, ಕೃಷ್ಣಾ ಮೇಲ್ದಂಡೆ ಯೋಜನೆ ಪೂರ್ಣಗೊಳಿಸುತ್ತೇನೆ ಎಂದಿದ್ದರು. ಅಧಿಕಾರ ಬಂದ ಮೇಲೆ ಏನೂ ಮಾಡಲಿಲ್ಲ. ಈ ಬಾರಿಯೂ ಪ್ರತಿ ವರ್ಷ 40 ಸಾವಿರ ಕೋಟಿ ನೀಡುವುದಾಗಿ ಹೇಳಿದ್ದರು. ಈಗಲೂ ನೀಡಲಿಲ್ಲ ಎಂದು ಟೀಕಿಸಿದರು.

2014–15ರಲ್ಲಿ ಘೋಷಣೆ ಮಾಡಿದ್ದ ಸರ್ಕಾರಿ ವೈದ್ಯಕೀಯ ಕಾಲೇಜಿಗೆ ಚುನಾವಣೆ ಬಂದಿದೆ ಎಂದು ಈಗ ಶಂಕುಸ್ಥಾಪನೆ ಮಾಡಲಾಗಿದೆ. ಅವರಿಗೆ ಬದ್ಧತೆ ಇದ್ದರೆ, ಇಷ್ಟೊತ್ತಿಗೆ ಉದ್ಘಾಟನೆಯಾಗಬೇಕಿತ್ತು. ಇದೊಂದು ಚುನಾವಣೆ ಗಿಮಿಕ್ ಎಂದು ವಾಗ್ದಾಳಿ ನಡೆಸಿದರು. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಿಸಬೇಕಿತ್ತು. ಆದರೆ, ಈ ವಿಷಯವಲ್ಲಿ ಕೋರ್ಟ್‌ನಲ್ಲಿ ವಾದ ಮಾಡದೇ ತಡೆಯಾಜ್ಞೆ ಸಿಗುವಂತೆ ಸರ್ಕಾರ ನೋಡಿಕೊಂಡಿತು. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಕುರ್ಚಿ ಕಿತ್ತಾಟದಲ್ಲಿಯೇ ಮುಳುಗಿದ್ದಾರೆ. ಸಿ.ಎಂ ಅವರದು ಒಂದು ಗುಂಪಾದರೆ, ಡಿಸಿಎಂ ಅವರದ್ದು ಮತ್ತೊಂದು ಗುಂಪು, ಪರಮೇಶ್ವರ, ಮುನಿಯಪ್ಪನವರದ್ದೂ ಮಗದೊಂದು ಗುಂಪಾಗಿದೆ ಎಂದು ಟೀಕಿಸಿದರು.

ನವನಗರದ ಅಭಿವೃದ್ಧಿಗೆ ವೀರಣ್ಣ ಚರಂತಿಮಠ 3 ಸಾವಿರ ಕೋಟಿ ಅನುದಾನ ತಂದು ಅಭಿವೃದ್ಧಿ ಮಾಡಿದ್ದಾರೆ. ಮೂರು ವರ್ಷಗಳಲ್ಲಿ ಕಾಂಗ್ರೆಸ್ ಏನೂ ಮಾಡಿಲ್ಲ. ಬಾಗಲಕೋಟೆ ಜನರಿಗೆ ಕಾಂಗ್ರೆಸ್ ಗೆಲ್ಲಿಸಿ ಮೋಸ ಹೋಗಿರುವುದು ಅರಿವಾಗಿದೆ ಚುನಾವಣೆಯಲ್ಲಿ ಪಾಠ ಕಲಿಸಲಿದ್ದಾರೆ ಎಂದರು.

ಸಣ್ಣಪುಟ್ಟ ಕಾರಣಗಳಿಗೆ ಪಕ್ಷ ಬಿಟ್ಟವರು, ಮನೆಯಲ್ಲಿ ಕುಳಿತವರು ಮತ್ತೆ ಪಕ್ಷಕ್ಕೆ ಬಂದು ಬಲ ತುಂಬುವಂತೆ ವಿನಂತಿ ಮಾಡಲಾಗುವುದು ಎಂದು ಹೇಳಿದರು. ಚುನಾವಣಾ ಉಸ್ತುವಾರಿ ಅರುಣ ಶಹಾಪುರ ಮಾತನಾಡಿ, ಅನಿವಾರ್ಯ ಕಾರಣಗಳಿಂದ ಪಕ್ಷ ಬಿಟ್ಟು ಹೋದವರನ್ನು ಮತ್ತೇ ಪಕ್ಷಕ್ಕೆ ತರುವ ಕೆಲಸವನ್ನು ಮಾಡಲಾಗುತ್ತಿದೆ. ಕಟ್ಟಿ ಕಲ್ಲನ್ನು ಕಟ್ಟಿಗೆ ಹೊಂದಿಸಲಾಗುತ್ತಿದೆ ಎಂದು ಹೇಳಿದರು.

## ರಾಜ್ಯ ಸರ್ಕಾರದ ಯೋಜನೆ ಜನರಿಗೆ ತಿಳಿಸಿ




ಉದಯವಾಹಿನಿ ಚಿತ್ರ

• ಉದಯವಾಹಿನಿ, ರಾಣೆಬೆನ್ನೂರು

ಪ್ರತಿಯೊಬ್ಬರೂ ತಮ್ಮ ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿ ತ ಮಾಡಬೇಕು. ಚುನಾವಣೆ ಸಂದರ್ಭದಲ್ಲಿ ರಾಜ್ಯದ ಜನತೆಗೆ ಕೊಟ್ಟ ಎಲ್ಲಾ ಭರವಸೆಗಳನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈಡೇರಿಸಿದ್ದೇವೆ ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು. ಇಲ್ಲಿನ ಬಳ್ಳಾರಿ ಕಲ್ಯಾಣ ಮಂಟಪದಲ್ಲಿ ರಾಣೆಬೆನ್ನೂರು ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್‌ನ ತಾಲ್ಲೂಕು ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮುಂಬರುವ ಗ್ರಾಮ ಪಂಚಾಯಿತಿ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆ ಹಿನ್ನೆಲೆಯಲ್ಲಿ ಸರ್ಕಾರದ ಕೊಟ್ಟಿರುವ ಯೋಜನೆಗಳನ್ನು ಜನತೆಗೆ ಮುಟ್ಟಿಸಲು ಪ್ರಯತ್ನಿಸಬೇಕು ಎಂದರು. ಕಾಂಗ್ರೆಸ್‌ನ ಪಂಚ ಗ್ಯಾರಂಟಿ ಯೋಜನೆಗಳ ಬಗ್ಗೆ ಬಿಜೆಪಿ ಅಪಪ್ರಚಾರ ಮಾಡುತ್ತಿದೆ. ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕೊಟ್ಟ ಗ್ಯಾರಂಟಿ ಯೋಜನೆಗಳಿಂದ ಪ್ರತಿಯೊಬ್ಬರಿಗೂ ಅನುಕೂಲವಾಗಿದೆ. ಎಲ್ಲರೂ ಪಕ್ಷದ ಒಳಿತಿಗಾಗಿ ದುಡಿಯಬೇಕು ಎಂದು ತಿಳಿಸಿದರು. ನಗರ ಬ್ಲಾಕ್ ಕಾಂಗ್ರೆಸ್ ನೂತನ ಅಧ್ಯಕ್ಷ ಪುಟ್ಟಪ್ಪ ಮರಿಯಮ್ಮನವರ ಅವರಿಗೆ ನಿಕಟ ಪೂರ್ವ ಅಧ್ಯಕ್ಷ ಶೇರ್ ಖಾನ್ ಕಾಬೂಲಿ ಹಾಗೂ ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಪ್ಪ ಬೇಡರ ಅವರಿಗೆ ನಿಕಟ ಪೂರ್ವ ಅಧ್ಯಕ್ಷ ಮಂಜನಗೌಡ ಪಾಟೀಲ ಅವರು ಅಧಿಕಾರ ಹಸ್ತಾಂತರಿಸಿದರು.

ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಸಂಜೀವ ನೀರಲಗಿ ಅವರು ನೂತನ ಪದಾಧಿಕಾರಿಗಳಿಗೆ ಆದೇಶ ಪತ್ರ ವಿತರಿಸಿ ಶುಭಕೋರಿದರು. ಇದೇ ಸಂದರ್ಭದಲ್ಲಿ ತಾಲ್ಲೂಕು ಗ್ಯಾರಂಟಿ ಯೋಜನೆ ಅಧ್ಯಕ್ಷ ಮಂಜುನಾಥ ನಲವಾಗಲ ಅವ, ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ನೂತನ ಪದಾಧಿಕಾರಿಗಳನ್ನು ಪಕ್ಷದಿಂದ ಸನ್ಮಾನಿಸಲಾಯಿತು. ವಿಧಾನ ಸಭೆ ಮಾಜಿ ಅಧ್ಯಕ್ಷ ಕೆ.ಬಿ.ಕೋಳಿವಾಡ ಮತ್ತು ಮಾಜಿ ಸಚಿವ ಆರ್.ಶಂಕರ ಮಾತನಾಡಿದರು. ನಗರ ಘಟಕದ ನೂತನ ಅಧ್ಯಕ್ಷ ಪುಟ್ಟಪ್ಪ ಮರಿಯಮ್ಮನವರ ಮಾತನಾಡಿ, ನಗರ ಮತ್ತು ಗ್ರಾಮೀಣ ಬ್ಲಾಕ್ ಕಾಂಗ್ರೆಸ್‌ನ ಎಲ್ಲರನ್ನು ಪ್ರೀತಿ– ವಿಶ್ವಾಸದಿಂದ ಗ್ರಾಮೀಣ ಪ್ರದೇಶದ ಬೂತ್ ಮಟ್ಟದಲ್ಲಿ ಬಲಿಷ್ಠ ತಂಡ ಕಟ್ಟುವುದೇ ನಮ್ಮ ಗುರಿಯಾಗಿದೆ ಎಂದು ತಿಳಿಸಿದರು.

## ಯುಕೆಪಿಗೆ 25 ಸಾವಿರ ಕೋಟಿ ರೂ. ನೀಡಿ

• ಉದಯವಾಹಿನಿ, ಬೀಳಗಿ

ಬಜೆಟ್‌ನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ (ಯುಕೆಪಿ) ಕನಿಷ್ಠ 25 ಸಾವಿರ ಕೋಟಿ ಅನುದಾನವನ್ನು ಮುಳುಗಡೆ ಜಮೀನಿಗೆ ಪರಿಹಾರ ನೀಡಲು ತೆಗೆದಿರಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ ಆಗ್ರಹಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು, ಚುನಾವಣೆ ಸಂದರ್ಭದಲ್ಲಿ ಪ್ರತಿ ವರ್ಷ 40 ಸಾವಿರ ಕೋಟಿ ನೀಡುವುದಾಗಿ ಭರವಸೆ ನೀಡಲಾಗಿತ್ತು. ಮೂರು ವರ್ಷಗಳಲ್ಲಿ ಯುಕೆಪಿಗೆ ಪ್ರಾಧಾನ್ಯ ನೀಡಿಲ್ಲ ಎಂದು ದೂರಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹೊಸ ಪರಿಹಾರ ಘೋಷಣೆ ಮಾಡಿ ಆರು ತಿಂಗಳು ಕಳೆದರೂ ಪರಿಹಾರ ನೀಡಿಲ್ಲ. ಈಗಲಾದರೂ ಪರಿಹಾರ ಹಣ ನೀಡಬೇಕು. ಆ ಮೂಲಕ ಯೋಜನೆ ಪೂರ್ಣಗೊಳಿಸಬೇಕು ಮುಂದಾಗಬೇಕು ಎಂದು ಮನವಿ ಮಾಡಿದ್ದಾರೆ.

## ರಾಜಾಪುರ ಬ್ಯಾರೇಜ್‌ನಿಂದ ಕೃಷ್ಣಾ ನದಿಗೆ ನೀರು

• ಉದಯವಾಹಿನಿ, ರಬಕವಿ ಬನಹಟ್ಟಿ

ನೆರೆಯ ಮಹಾರಾಷ್ಟ್ರದ ರಾಜಾಪುರ ಬ್ಯಾರೇಜ್‌ನಿಂದ ಕೃಷ್ಣಾ ನದಿಗೆ ನೀರು ಹರಿದು ಬರುತ್ತಿದ್ದು. ಸಮೀಪದ ಹಿಪ್ಪರಗಿ ಬ್ಯಾರೇಜಲ್ಲಿ ನೀರಿನ ಪ್ರಮಾಣ ಹೆಚ್ಚು ಆಗುತ್ತಿದೆ ಎಂದು ಹಿಪ್ಪರಗಿ ಬ್ಯಾರೇಜ್ ಜಲಾಶಯದ ಮೂಲಗಳು ತಿಳಿಸಿವೆ. ಮಹಾರಾಷ್ಟ್ರದ ಗಡಿ ಭಾಗಗಳ ಪ್ರದೇಶಗಳಿಗೆ ಅಲ್ಲಿಯ ಸರ್ಕಾರ ನೀರು ಬಿಡುಗಡೆ ಮಾಡಿದ್ದು, ಹೆಚ್ಚುವರಿ ನೀರು ನದಿಗೆ ಹರಿದು ಬರುತ್ತಿದೆ. ಹೆಚ್ಚುವರಿ ನೀರು ಹಿಪ್ಪರಗಿ ಬ್ಯಾರೇಜ್‌ಗೆ ಬಂದು ತಲುಪಿದೆ. ಭಾನುವಾರ ನೀರಿನ ಸಂಗ್ರಹ 2.21 ಟಿಎಂಸಿ ಅಡಿ ಇದ್ದು, ಸೋಮವಾರ ಬ್ಯಾರೇಜ್ ನಲ್ಲಿ 2.31 ಟಿಎಂಸಿ ಅಡಿ ನೀರಿನ ಸಂಗ್ರಹವಿದೆ ಎಂದು ಬ್ಯಾರೇಜ್‌ನ ಸಹಾಯಕ ಇಂಜಿನಿಯರ್ ವಿ.ಎನ್. ನಾಯಕ ತಿಳಿಸಿದರು.

# ಚಾರ್ಮಾಡಿ ಘಾಟಿಯ ಅಭಿವೃದ್ಧಿ ಕಾಮಗಾರಿ ವಿಳಂಬ


### ಅರಣ್ಯ ಇಲಾಖೆಯಿಂದ ಸಿಗದ ಅನುಮತಿ ; ಚಾರ್ಮಾಡಿ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗೆ ತೊಡಕು

• ಉದಯವಾಹಿನಿ, ಬೆಳ್ತಂಗಡಿ

ಈಗಾಗಲೇ ಆರಂಭವಾಗಬೇಕಾಗಿದ್ದ ಚಾರ್ಮಾಡಿ ಘಾಟಿಯ ಅಭಿವೃದ್ಧಿ ಕಾಮಗಾರಿ ಈ ಬಾರಿಯ ಮಳೆಗಾಲಕ್ಕೂ ಮುನ್ನ ಆರಂಭವಾಗುವ ಲಕ್ಷಣಗಳು ಕಂಡು ಬರುತ್ತಿಲ್ಲ. ಅರಣ್ಯ ಇಲಾಖೆಯಿಂದ ಅನುಮತಿ ಸಿಗದಿರುವುದು ಕಾಮಗಾರಿ ಆರಂಭಕ್ಕೆ ತೊಡಕಾಗಿದೆ. ಮಂಗಳೂರು–ವಿಲ್ಲುಪುರಂ ರಾಷ್ಟ್ರೀಯ ಹೆದ್ದಾರಿ 73ರ ಚಾರ್ಮಾಡಿ ಘಾಟಿ ವಿಭಾಗದ ದಕ ಜಿಲ್ಲೆಯ 11 ಕಿ.ಮೀ. ವ್ಯಾಪ್ತಿಯಲ್ಲಿ ಸರಾಸರಿ 10 ಮೀ. ವರೆಗೆ ರಸ್ತೆಯನ್ನು ಅಗಲಗೊಳಿಸುವ ಕೇಂದ್ರ ಸರಕಾರದ ಯೋಜನೆಗೆ 343 ಕೋಟಿ ರೂ. ಮೀಸಲಿರಿಸಿದ್ದು, ಶೇ.41 ರಷ್ಟು ಕಡಿಮೆ ಮೌಲ್ಯಕ್ಕೆ ಎಸ್‌ಎಲ್‌ವಿ ಕನ್‌ಸ್ಟ್ರಕ್ಷನ್ ಕಂಪನಿಗೆ ಕಾಮಗಾರಿ ದೊರಕಿದೆ.

ಈ ಕುರಿತು ಕಾರ್ಯಾದೇಶ ನೀಡಲಾಗಿದ್ದು, ಇಷ್ಟರೊಳಗೆ ಕಾಮಗಾರಿ ಆರಂಭವಾಗಬೇಕಿತ್ತು. ಚಾರ್ಮಾಡಿ ಘಾಟಿ ವಿಭಾಗದ 25 ಕಿ.ಮೀ. ವ್ಯಾಪ್ತಿ ಇದ್ದು 11 ಕಿ.ಮೀ. ದಕ ಜಿಲ್ಲೆ ಹಾಗೂ ಉಳಿದ ಭಾಗ ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿದೆ. 2019ರ ಭಾರಿ ಮಳೆ, ಪ್ರವಾಹದ ವೇಳೆ ಚಾರ್ಮಾಡಿ ಘಾಟಿ ಸಂಪೂರ್ಣ ಹಾನಿಗೊಳಗಾಗಿತ್ತು. ಬಳಿಕ ಸುಮಾರು ಒಂದು ವರ್ಷ ಕಾಲ ವಾಹನ ಸಂಚಾರಕ್ಕೆ ನಿಷೇಧ ಹೇರಿ ಕಾಮಗಾರಿ ನಡೆಸಲಾಗಿತ್ತು. ಮೊದಲಿಗೆ ಬೆಳಗ್ಗೆ 6 ರಿಂದ ಸಂಜೆ 6 ರ ತನಕ ಬಳಿಕ ದಿನದ 24 ಗಂಟೆಯೂ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಚಾರ್ಮಾಡಿ ಘಾಟಿ ಭಾಗವನ್ನು ಆ ಸಮಯ ಸಾಕಷ್ಟು ಅಗಲಗೊಳಿಸಲಾಗಿದೆ. ಈ ಕಾಮಗಾರಿ ಬಳಿಕ ಘಾಟಿ ವಿಭಾಗದ ಓಡಾಟಕ್ಕೆ ಅನುಕೂಲವಾಗಿದೆ ಹಾಗೂ ಮಳೆಗಾಲದಲ್ಲೂ ಹೆಚ್ಚಿನ ಸಮಸ್ಯೆಗಳು ಕಂಡುಬಂದಿಲ್ಲ.

**ಅರಣ್ಯ ಇಲಾಖೆಯಿಂದ ಸಿಗದ ಅನುಮತಿ :** ಚಾರ್ಮಾಡಿ ಘಾಟಿ ಅಭಿವೃದ್ಧಿಗೆ ಹಲವಾರು ಮರಗಳು ತೆರವುಗೊಳ್ಳಬೇಕಿದ್ದು, ಇದಕ್ಕೆ ಅರಣ್ಯ ಇಲಾಖೆ ಅನುಮತಿ ಅಗತ್ಯವಾಗಿದೆ. ಈ ಘಾಟಿಯಲ್ಲಿ ಸಾಕಷ್ಟು ವನ್ಯಜೀವಿಗಳು ತಿರುಗಾಡುತ್ತಿದ್ದು ವನ್ಯಜೀವಿಗಳ ಸಂಚಾರಕ್ಕೆ ಬೇಕಾದ ಯೋಜನೆ, ಮಣ್ಣಿನ ಪರೀಕ್ಷೆ ಇತ್ಯಾದಿ ನಡೆಸುವುದು ಅಗತ್ಯವಾಗಿದೆ. ಮರಗಳನ್ನು ಕಡಿಯುವ ಪ್ರಕ್ರಿಯೆಗೆ ಗಿಡಗಳನ್ನು ನೆಡಲು ಕಂದಾಯ ಭೂಮಿ ಒದಗಿಸಬೇಕು. ಈ ಎಲ್ಲಾ ಪ್ರಕ್ರಿಯೆಗಳ ಕುರಿತು ರಾಷ್ಟ್ರೀಯ ಹೆದ್ದಾರಿ ಇಲಾಖೆಯಿಂದ ಕೇಂದ್ರ ಸರಕಾರ ಸಹಿತ ಅರಣ್ಯ ಇಲಾಖೆಗೆ ಅರ್ಜಿ ಸಲ್ಲಿಸಲಾಗಿದೆ.ಆದರೆ ಇನ್ನೂ ಕೂಡ ಅನುಮತಿ ಸಿಕ್ಕಿಲ್ಲ.



**ಚಾರ್ಮಾಡಿ ಘಾಟಿ ವಿಭಾಗದ ಅಭಿವೃದ್ಧಿ ವೇಳೆ ತೆರವುಗೊಳ್ಳಬೇಕಾದ ಮರಗಳ ಸಮೀಕ್ಷೆ ನಡೆಸಲಾಗಿದೆ. ಸಂಬಂಧಪಟ್ಟವರಿಗೆ ಪೂರಕ ದಾಖಲೆ ವರದಿಗಳನ್ನು ನೀಡಲಾಗಿದೆ. ಅನುಮತಿ ಸಿಕ್ಕ ತಕ್ಷಣ ಕಾಮಗಾರಿ ಆರಂಭವಾಗಲಿದೆ. ಅನುಮತಿಗಾಗಿ ಕಾಯಲಾಗುತ್ತಿದೆ.**

**–ಕೆ.ಟಿ.ಚಂದ್ರಶೇಖರ್, ಇಇ, ರಾಷ್ಟ್ರೀಯ ಹೆದ್ದಾರಿ ಇಲಾಖೆ, ದಕ್ಷಿಣ ಕನ್ನಡ**

**ಕಾಮಗಾರಿ ಸವಾಲು**

- **ಘಾಟಿ ರಸ್ತೆಯನ್ನು ಅಭಿವೃದ್ಧಿಪಡಿಸುವ ವೇಳೆ ವಾಹನ ಸಂಚಾರಕ್ಕೆ ನಿಷೇಧ ಹೇರಲಾಗುತ್ತಿದೆಯೋ ಎಂಬುದಕ್ಕೆ ಸಮರ್ಪಕ ಉತ್ತರ ಸಿಗುತ್ತಿಲ್ಲ.**
- **ವನ್ಯಜೀವಿ ಪರಿಸರಕ್ಕೆ ತೊಂದರೆ ಉಂಟಾಗದಂತೆ ಕಾಮಗಾರಿ ನಡೆಸಬೇಕಿದೆ.**
- **ಘಾಟಿ ಭಾಗದ 1ಕಿಮೀ. ದೂರದಲ್ಲಿ ಮನೆಗಳಿದ್ದು ಅವುಗಳ ತೆರವು, ಭೂಸ್ವಾಧೀನ ಆಗಬೇಕಿದೆ.**
- **ಪ್ರಸ್ತುತ ಆರು ಚಕ್ರದವರೆಗಿನ ವಾಹನಗಳಿಗೆ ಮಾತ್ರ ಚಾರ್ಮಾಡಿ ಘಾಟಿಯಲ್ಲಿ ಪ್ರವೇಶಾವಕಾಶ ಇದೆ.**
- **ಹೆದ್ದಾರಿ ಭಾಗವನ್ನು ಮುಖ್ಯ ಗುತ್ತಿಗೆದಾರರಿಗೆ ವಹಿಸಿದ ಬಳಿಕ ಇದರ ನಿರ್ವಹಣೆ ಜವಾಬ್ದಾರಿಯು ಅವರದೇ ಆಗಿದೆ ಎಂದು ಹೇಳಲಾಗಿದೆ.**

**ಘಾಟಿ ವಿಭಾಗದ ಅಭಿವೃದ್ಧಿ ಉತ್ತಮ ವಿಚಾರ. ಇದರಿಂದ ವಾಹನ ಸವಾರರಿಗೂ ಅನುಕೂಲವಾಗಲಿದೆ. ಆದರೆ ಪರಿಸರ, ವನ್ಯಜೀವಿಗಳಿಗೆ ತೊಂದರೆ ಉಂಟಾಗದಂತೆ ಕಾಮಗಾರಿ, ರಸ್ತೆ ನಿರ್ಮಾಣ ನಡೆಯಬೇಕಿದೆ. ಮಳೆಗಾಲದಲ್ಲಿ ಕಾಮಗಾರಿ ಆರಂಭಿಸಿದರೆ ಸಮಸ್ಯೆಗಳು ಹೆಚ್ಚಲಿವೆ.**

**–ಸಚಿನ್ ಭಿಡೆ, ಪರಿಸರ ಪ್ರೇಮಿ, ಬೆಳ್ತಂಗಡಿ**

ಏಪ್ರಿಲ್ ಮೇ ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಾಗ ಮಳೆ ಸುರಿಯುತ್ತದೆ. ಜೂನ್ ವೇಳೆಗೆ ಮಳೆಗಾಲ ಆರಂಭವಾಗುತ್ತದೆ. ಮಳೆ ಆರಂಭವಾದ ಬಳಿಕ ಕಾಮಗಾರಿ ನಡೆಸುವುದು ಕಷ್ಟಸಾಧ್ಯ. ಇದರಿಂದ ಘಾಟಿ ಅಭಿವೃದ್ಧಿ ಕಾಮಗಾರಿ ಈ ಬಾರಿ ಆರಂಭವಾಗುವ ಸಾಧ್ಯತೆ ತೀರಾ ಕಡಿಮೆ.

**ಸಂಪರ್ಕ ರಸ್ತೆ:** ಚಾರ್ಮಾಡಿ ಘಾಟಿಗೆ ಸಂಪರ್ಕ ಕಲ್ಪಿಸುವ ಪುಂಜಾಲಕಟ್ಟೆ–ಚಾರ್ಮಾಡಿ ರಸ್ತೆಯ ಅಭಿವೃದ್ಧಿ ಕಾಮಗಾರಿ ಕಳೆದ ಎರಡೂವರೆ ವರ್ಷಗಳಿಂದ ನಡೆಯುತ್ತಿದೆ.

ಇದು ಇನ್ನೂ ಕೂಡ ಪೂರ್ಣಗೊಂಡಿಲ್ಲ. ಮುಂದಿನ ಒಂದೆರಡು ತಿಂಗಳಲ್ಲಿ ಬಹುತೇಕ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಈ ಕಾಮಗಾರಿ ಪೂರ್ಣಗೊಳ್ಳುವ ಮೊದಲು ಘಾಟಿ ವಿಭಾಗದಲ್ಲಿ ಕಾಮಗಾರಿ ಆರಂಭವಾದರೆ ಈ ರಸ್ತೆಯಲ್ಲಿ ಪ್ರಯಾಣಿಸುವ ಪ್ರಯಾಣಿಕರಿಗೂ ತೀವ್ರ ಕಿರಿಕಿರಿ ಉಂಟಾಗಲಿದೆ.

## ಕಬ್ಬಿನ ಬಿಲ್ ಬಾಕಿ: ಅಹೋರಾತ್ರಿ ಧರಣಿ

• ಉದಯವಾಹಿನಿ, ಜಮಖಂಡಿ

2025–26ನೇ ಸಾಲಿನ ಕಬ್ಬಿನ ಬಾಕಿ ಬಿಲ್ ನೀಡಬೇಕು ಎಂದು ಒತ್ತಾಯಿಸಿ ರೈತ ಸಂಘ ಹಾಗೂ ಕಬ್ಬು ಬೆಳೆಗಾರರ ಸಂಘದಿಂದ ಸದಸ್ಯರು ದೇಸಾಯಿ ವೃತ್ತದಲ್ಲಿ ಪ್ರತಿಭಟನೆ ಮಾಡಿ ತಾಲ್ಲೂಕು ಆಡಳಿತ ಸೌಧದ ಮುಂದೆ ಅಹೋರಾತ್ರಿ ಧರಣಿ ಮಾಡಿದ್ದು ತಾಲ್ಲೂಕು ಆಡಳಿತ ಸೌಧದ ಮುಂದೆಯೇ ಸೌದೆ ಒಲೆ ಹೊತ್ತಿಸಿ ಅಡುಗೆಮಾಡಿ ಊಟ ಮಾಡಿದ್ದಾರೆ.

ಕಬ್ಬು ಬೆಳೆಗಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಚೂನಪ್ಪ ಪೂಜಾರ ಮಾತನಾಡಿ, ಸಕ್ಕರೆ ಕಾರ್ಖಾನೆ ಮಾಲೀಕರ ವಿರುದ್ಧ ಜಿಲ್ಲಾಡಳಿತ ಕೂಡಲೇ ಕ್ರಮ ಕೈಗೊಳ್ಳಬೇಕು, 14 ದಿನದಲ್ಲಿ ಬಾಕಿ ಪಾವತಿ ಮಾಡಬೇಕು ಎಂದು ಕಾನೂನು ಇದ್ದರೂ ಯಾಕೆ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ ಎಂದರು.

ಮತದಾನ ಮಾಡುವಾಗ ಎಚ್ಚರಿಕೆಯಿಂದ ಮಾಡಬೇಕಾಗಿದೆ, ಯಾವ ಪಕ್ಷ ಅಧಿಕಾರಕ್ಕೆ ಬಂದರು ರೈತರನ್ನು ಉದ್ಧಾರ ಮಾಡುವುದಿಲ್ಲ, ಬೀದಿಯಲ್ಲಿ ನಿಂತು ಕಬ್ಬಿನ ಬಿಲ್‌ಗಾಗಿ ಪರದಾಡುವಂತಾಗಿದೆ. ರಾಜ್ಯದಲ್ಲಿ 3500ಕೋಟಿಗೂ ಅಧಿಕ ಬಾಕಿ ನೀಡಬೇಕಾಗಿದೆ, ಸಕ್ಕರೆ ಮಂತ್ರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಹೋರಾಟ ಮಾಡಬೇಕಾಗುತ್ತದೆ ಎಂದರು.

# ಇಂಧನ ಬಿಕ್ಕಟ್ಟಿನ ಮಧ್ಯೆ ಪಾಕ್‌ನ ಬಲೂಚಿಸ್ತಾನದಲ್ಲಿ ಅನಿಲ ಪೈಪ್ ಲೈನ್ ಸ್ಫೋಟ



**ಇಸ್ಲಾಮಾಬಾದ್:** ಮಧ್ಯಪ್ರಾಚ್ಯದಲ್ಲಿನ ಯುದ್ಧದಿಂದಾಗಿ ಇಡೀ ಜಗತ್ತೇ ಇಂಧನ ಅನಿಶ್ಚಿತತೆಯಿಂದ ನಲುಗುತ್ತಿರುವಾಗ ಪಾಕಿಸ್ತಾನದ ಅತ್ಯಂತ ಪ್ರಕ್ಷುಬ್ಧ ಪ್ರಾಂತ್ಯವಾಗಿರುವ ಬಲೂಚಿಸ್ತಾನದಲ್ಲಿ ಮತ್ತೆ ದಾಳಿಯೊಂದು ನಡೆದಿದ್ದು, ಗುರುತು ತಿಳಿಯದ ಗುಂಪೊಂದು ಕ್ವೆಟ್ಟಾದ ಹೊರವಲಯದಲ್ಲಿನ ಅನಿಲ ಪೈಪ್ ಲೈನ್ ಸ್ಫೋಟಿಸಿದ್ದಾರೆ.

**ಬಲೂಚಿಸ್ತಾನದಲ್ಲಿ ಅನಿಲ ಪೈಪ್ ಲೈನ್ ಮೇಲೆ ದಾಳಿ:** ಇಂಧನ ಅನಿಶ್ಚಿತತೆ ನಡುವೆ ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದ ನಿರಂತರವಾಗಿ ನಡೆಯುವ ದಾಳಿಗಳ ಸರಣಿ ನಡುವೆ ಅದರ ರಾಜಧಾನಿ ಕ್ವೆಟ್ಟಾ ನಗರದ ಹೊರವಲಯದಲ್ಲಿರುವ ಅಖ್ತರಾಬಾದ್‌ನಲ್ಲಿನ 18 ಇಂಚು ವ್ಯಾಸದ ನೈಸರ್ಗಿಕ ಅನಿಲ ಪೈಪ್ ಲೈನ್ ಅಪರಿಚಿತ ವ್ಯಕ್ತಿಗಳು ರಾತ್ರಿ ವೇಳೆಗೆ ಸ್ಫೋಟಿಸಿದ್ದು, ದಾಳಿಕೋರರು ಈ ಪೈಪ್ ಲೈನ್ ಕೆಳಗೆ ಸ್ಫೋಟಕಗಳನ್ನು ಇಟ್ಟಿದ್ದರು ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ. ಇರಾನ್, ಅಫ್ಘಾನಿಸ್ತಾನದ ಗಡಿ ಪ್ರದೇಶದಲ್ಲಿರುವ ಪ್ರಾಂತ್ಯದಲ್ಲಿನ ನಡೆದ ಈ ಸ್ಫೋಟದಿಂದಾಗಿ ಕ್ವೆಟ್ಟಾ, ಹಜಾರಾ ಟೌನ್, ಹಜರ್‌ಗಂಜಿ, ಖೈಜಿ, ನೊಹ್ಸರ್, ಪಿಶಿನ್, ಜಿಯಾರತ್, ಕಲಾತ್, ಮಸ್ತುಂಗ್ ಮತ್ತು ಕುಚ್ಲಾಕ್ ನಗರ ಸೇರಿದಂತೆ ಸುತ್ತಲಿನ 5ಕ್ಕೂ ಹೆಚ್ಚು ಪ್ರದೇಶಗಳಲ್ಲಿ ಅನಿಲ ಪೂರೈಕೆ ಸ್ಥಗಿತಗೊಂಡಿದ್ದು, ಈ ಪೈಪ್ ಲೈನ್ ದುರಸ್ತಿ ಕಾರ್ಯಕ್ಕಾಗಿ ಎಸ್ ಎಸ್‌ಜಿಸಿ ಸಿಬ್ಬಂದಿ ಸ್ಥಳಕ್ಕೆ ತಲುಪಿದ್ದು, ಭದ್ರತಾ ಅನುಮತಿ ನೀಡಿದ ನಂತರ ದುರಸ್ತಿ ಕಾರ್ಯ ಆರಂಭವಾಗಲಿದೆ ಎಂದು ಸುಯಿ ಸದರ್ನ್ ಗ್ಯಾಸ್ ಕಂಪನಿ ವಕ್ತಾರರು ತಿಳಿಸಿದ್ದಾರೆ.

**ಗ್ಯಾಸ್ ಪೂರೈಕೆ ಸ್ಥಗಿತ**

**ಸಂಭಾವ್ಯ ಉಗ್ರ ದಾಳಿಯ ಶಂಕೆ:** ಈ ಘಟನೆ ಕುರಿತು ತನಿಖೆ ನಡೆಸಿರುವ ಬಾಂಬ್ ನಿಷ್ಕ್ರಿಯ ದಳದ ಅಧಿಕಾರಿಗಳ ಪ್ರಾಥಮಿಕ ತನಿಖೆಗಳು ಇದು ಸಂಭಾವ್ಯ ವಿಧ್ವಂಸಕ ಕೃತ್ಯವಾಗಿರಬಹುದು ಎಂದು ತಿಳಿಸಿರುವುದಾಗಿ ವರದಿಯಾಗಿದೆ. ಆದಾಗ್ಯೂ, ಈ ದಾಳಿಯ ಹೊಣೆಯನ್ನು ಈವರೆಗೂ ಅಲ್ಲಿನ ಯಾವ ಸಂಘಟನೆಗಳು ಹೊತ್ತುಕೊಂಡಿಲ್ಲ.

**ಬಲೂಚಿಸ್ತಾನದಲ್ಲಿ ಮುಂದುವರೆದ ಬಂಡುಕೋರರ ಅಟ್ಟಹಾಸ:** ಬಲೂಚಿಸ್ತಾನ ಪ್ರಾಂತ್ಯದಲ್ಲಿ ಈ ಹಿಂದೆಯಿಂದಲೂ ಅನಿಲ ಪೈಪ್ ಲೈನ್‌ಗಳು, ರೈಲ್ವೆಗಳು ಮತ್ತು ಇತರ ಮೂಲಸೌಕರ್ಯಗಳ ಮೇಲೆ ಪದೇ ಪದೇ ದಾಳಿಗಳು ವರದಿಯಾಗುತ್ತಿದೆ ಇತ್ತೀಚೆಗೆ ಡೇರಾ ಬುಗ್ಟಿಯಲ್ಲಿ, ಸುಯಿಯಲ್ಲಿರುವ ಮುಹಮ್ಮದ್‌ಕಾಲೋನಿ ಬಳಿಯ ಅನಿಲ ಪೈಪ್‌ಲೈನ್ ಬಾಂಬ್ ಸ್ಫೋಟದಲ್ಲಿ ಹಾನಿಗೊಳಗಾಗಿದೆ ಎಂದು ವರದಿಯಾಗಿತ್ತು.

ಇನ್ನು, ಬಹಳ ಹಿಂದಿನಿಂದಲೂ ಖನಿಜ ಸಮೃದ್ಧವಾಗಿದ್ದರೂ ಸಹ ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಈ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಇಂತಹ ದಾಳಿಗಳು ಕಂಡುಬರುತ್ತಿದ್ದು, ಪ್ರತ್ಯೇಕ ಬಲೂಚ್ ದೇಶಕ್ಕಾಗಿ ಅಲ್ಲಿನ ಬಂಡುಕೋರ ಪಡೆಗಳು ಇಂತಹ ವಿಧ್ವಂಸಕ ಕೃತ್ಯಗಳನ್ನು ಎಸಗುತ್ತಿದ್ದು, ಇದೀಗ ಇಂಧನ ಅನಿಶ್ಚಿತತೆ ನಡುವೆ ಈ ಪ್ರಾಂತ್ಯದ ಲಕ್ಷಾಂತರ ಜನರಿಗೆ ಆಹಾರವನ್ನುಣಿಸುತ್ತಿದ್ದ ಅನಿಲ ಪೈಪ್ ಲೈನ್ ಮೇಲಿನ ದಾಳಿಗಳು ಅಲ್ಲಿನ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುವಂತೆ ಮಾಡಿದೆ.

## ಇಂದು ಚಂದ್ರನೆಡೆಗೆ ಸಾಗಲಿದೆ ಹ್ಯೂಮಾನಿಟಿ ರಾಕೆಟ್



**ಕೇಪ್ ಕೆನವೆರಲ್:** ಸತತ 53 ವರ್ಷಗಳಲ್ಲಿ ಚಂದ್ರನಿಗೆ ಹ್ಯೂಮಾನಿಟಿ ರಾಕೆಟ್ ಉಡಾವಣೆಗೆ ನಾಸಾ ಕ್ಷಣಗಣನೆ ಪ್ರಾರಂಭಿಸಿದೆ. 32 ಅಂತಸ್ತಿನ ಬಾಹ್ಯಾಕಾಶ ಉಡಾವಣಾ ವ್ಯವಸ್ಥೆಯ ರಾಕೆಟ್ ಬುಧವಾರ ಸಂಜೆ ನಾಲ್ಕು ಗಗನಯಾತ್ರಿಗಳೊಂದಿಗೆ ಉಡಾವಣೆಗೊಳ್ಳಲು ಸಜ್ಜಾಗಿದೆ. ಭೂಮಿಯ ಸುತ್ತ ಕಕ್ಷೆಯಲ್ಲಿ ಒಂದು ದಿನದ ನಂತರ, ಅವರ ಓರಿಯನ್ ಕ್ಯಾಪ್ಸುಲ್ ಅವುಗಳನ್ನು ಚಂದ್ರನಿಗೆ ಮತ್ತು ಹಿಂದಕ್ಕೆ ತಳ್ಳುತ್ತದೆ.ಯಾವುದೇ ನಿಲುಗಡೆಗಳಿಲ್ಲ, ಚಂದ್ರನ ಸುತ್ತ ತ್ವರಿತ ಯು-ಟರ್ನ್ ಮಾತ್ರ ಇರುತ್ತದೆ ಸುಮಾರು 10 ದಿನಗಳ ಹಾರಾಟವು ಪೆಸಿಫಿಕ್‌ನಲ್ಲಿ ಸ್ಪ್ಲಾಶ್ ಡೌನ್‌ನೊಂದಿಗೆ ಕೊನೆಗೊಳ್ಳುತ್ತದೆ.ಇತ್ತೀಚಿನ ಸುತ್ತಿನ ದುರಸ್ತಿಗಳ ನಂತರ ರಾಕೆಟ್ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ವ್ಯವಸ್ಥಾಪಕರು ಹೇಳಿದರು. ಹವಾಮಾನವು ಸಹಕರಿಸಬೇಕು ಎಂದು ಮುನ್ಸೂಚಕರು ಹೇಳಿದರು. ನಾಸಾದ ಆರ್ಟೆಮಿಸ್ ಮಿಷನ್ ಫೆಬ್ರವರಿಯಲ್ಲಿ ಗಗನಕ್ಕೇರಬೇಕಿತ್ತು, ಆದರೆ ಹೈಡ್ರೋಜನ್ ಇಂಧನ ಸೋರಿಕೆಯಿಂದ ನೆಲಕ್ಕೆ ಇಳಿಯಿತು. ಸೋರಿಕೆಗಳನ್ನು ಸರಿಪಡಿಸಲಾಯಿತು, ಆದರೆ ನಂತರ ಹೀಲಿಯಂ ಒತ್ತಡದ ರೇಖೆಯು ಮುಚ್ಚಿಹೋಗಿತ್ತು, ಕಳೆದ ತಿಂಗಳ ಕೊನೆಯಲ್ಲಿ ಹ್ಯಾಂಗರ್‌ಗೆ ಹಿಂತಿರುಗಬೇಕಾಯಿತು.

ರಾಕೆಟ್ 1 1/2 ವಾರಗಳ ಹಿಂದೆ ಪ್ಯಾಡ್‌ಗೆ ಮರಳಿತು, ಅದರ ಯುಎಸ್-ಕೆನಡಾ ಸಿಬ್ಬಂದಿ ಶುಕ್ರವಾರ ಉಡಾವಣಾ ಸ್ಥಳಕ್ಕೆ ಬಂದರು. 1968 ರಿಂದ 1972 ರವರೆಗೆ ಪುರುಷರನ್ನು ಮಾತ್ರ ಚಂದ್ರನಿಗೆ ಕಳುಹಿಸಿದ ಅಪೊಲೊಗಿಂತ ಭಿನ್ನವಾಗಿ, ಆರ್ಟೆಮಿಸ್‌ನ ಚೊಚ್ಚಲ ತಂಡವು ಒಬ್ಬ ಮಹಿಳೆ, ವರ್ಣೀಯ ವ್ಯಕ್ತಿ ಮತ್ತು ಯುಎಸ್ ನಾಗರಿಕರಲ್ಲದವರನ್ನು ಒಳಗೊಂಡಿದೆ. ಆರ್ಟೆಮಿಸ್‌ರ ಪೈಲಟ್ ವಿಕ್ಟರ್ ಗ್ಲೋವರ್ ವಾರಾಂತ್ಯದಲ್ಲಿ ಯುವಜನರು ಅವರನ್ನು ನೋಡಿ ಹುಡುಗಿಯ ಶಕ್ತಿ ಮತ್ತು ಅದು ಅದ್ಭುತವಾಗಿದೆ, ಮತ್ತು ಆ ಯುವ ಕಂದು ಬಣ್ಣದ ಹುಡುಗರು ಮತ್ತು ಹುಡುಗಿಯರು ನನ್ನನ್ನು ನೋಡಿ ಹೋಗಬಹುದು ಹೇ, ಅವನು ನನ್ನಂತೆ ಕಾಣುತ್ತಾನೆ ಮತ್ತು ಅವನು ಏನು ಮಾಡುತ್ತಿದ್ದಾನೆ ಎಂದು ಯೋಚಿಸಬೇಕೆಂದು ಅವರು ಬಯಸುತ್ತಾರೆ ಎಂದು ಹೇಳಿದರು. ಅದೇ ಸಮಯದಲ್ಲಿ, ಕಪ್ಪು ಬಣ್ಣದ ಗ್ಲೋವರ್ ಒಂದು ದಿನ ನಾವು ಈ ಮೊದಲಗಳ ಬಗ್ಗೆ ಮಾತನಾಡಬೇಕಾಗಿಲ್ಲ ಮತ್ತು ಬ್ರಹ್ಮಾಂಡವನ್ನು ಅನ್ವೇಷಿಸುವುದು ಸಮಗ್ರ ಮಾನವ ಇತಿಹಾಸವಾಗುವವರೆಗೆ ಎದುರು ನೋಡುತ್ತಿದ್ದಾರೆ. ನಾಸಾ ಏಪ್ರಿಲ್‌ನ ಮೊದಲ ಆರು ದಿನಗಳಲ್ಲಿ ಆರ್ಟೆಮಿಸ್ 11 ಅನ್ನು ಉಡಾವಣೆ ಮಾಡಲು ಮತ್ತು ತಿಂಗಳ ಅಂತ್ಯದವರೆಗೆ ನಿಲ್ಲಲು ಅವಕಾಶವಿದೆ.

# ಫ್ಲೋರಿಡಾ ವಿಮಾನ ನಿಲ್ದಾಣಕ್ಕೆ ಟ್ರಂಪ್ ಹೆಸರು

## ಇಂಡಿಯನ್ಸ್ ಅಂದರು ನಮ್ಮಲ್ಲಿ ಮೋದಿ ಸ್ಟೇಡಿಯಂ ಇದೆ ಗುರು

**ಫ್ಲೋರಿಡಾ:** ಅಮೆರಿಕದ ರಾಜಕಾರಣದಲ್ಲಿ ಡೊನಾಲ್ಡ್ ಟ್ರಂಪ್ ಎಂಬ ಹೆಸರು ಸದಾ ಒಂದಲ್ಲಾ ಒಂದು ಕಾರಣಕ್ಕೆ ಸದ್ದು ಮಾಡುತ್ತಲೇ ಇರುತ್ತದೆ. ಜಾಗತಿಕ ಮಟ್ಟದಲ್ಲಿ ತಮ್ಮದೇ ಆದ ಪ್ರಭಾವ ಹೊಂದಿರುವ ಟ್ರಂಪ್, ಇದೀಗ ಆ ಪ್ರಭಾವಕ್ಕೆ ತಕ್ಕ ಪ್ರತಿಫಲವನ್ನು ಪಡೆದುಕೊಂಡಿದ್ದಾರೆ. ಹೌದು, ಅಮೆರಿಕದ ಇತಿಹಾಸದಲ್ಲಿ ಅಧ್ಯಕ್ಷರೊಬ್ಬರ ಹೆಸರನ್ನು ಸಾರ್ವಜನಿಕ ಮೂಲಸೌಕರ್ಯಗಳಿಗೆ, ಅದರಲ್ಲೂ ಪ್ರಮುಖ ವಿಮಾನ ನಿಲ್ದಾಣವೊಂದಕ್ಕೆ ಇಡುವುದು ಗೌರವದ ಸಂಕೇತ. ಇದೀಗ ಅಂತದ್ದೇ ಗೌರವಕ್ಕೆ ಡೊನಾಲ್ಡ್ ಟ್ರಂಪ್ ಕೂಡ ಪಾತ್ರರಾಗಿದ್ದಾರೆ.

- ಪ್ರೆಸಿಡೆಂಟ್ ಡೊನಾಲ್ಡ್ ಜೆ. ಟ್ರಂಪ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸ್ವಾಗತ.
- ಫ್ಲೋರಿಡಾ ಪಾಮ್ ಬೀಚ್ ವಿಮಾನ ನಿಲ್ದಾಣಕ್ಕೆ ಡೊನಾಲ್ಡ್ ಟ್ರಂಪ್ ಹೆಸರು.
- ಅಮೆರಿಕನ್ನರಿಗೆ ನರೇಂದ್ರ ಮೋದಿ ಸ್ಟೇಡಿಯಂ ನೆನೆಪಿಸಿದ ಭಾರತೀಯರು.

ಅಮೆರಿಕದ ಪ್ರತಿಷ್ಠಿತ ಸ್ಥಳಗಳಲ್ಲಿ ಒಂದಾಗಿರುವ ಫ್ಲೋರಿಡಾದ ಸುಪ್ರಸಿದ್ಧ ಪಾಮ್ ಬೀಚ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಇನ್ನು ಮುಂದೆ ಪ್ರೆಸಿಡೆಂಟ್ ಡೊನಾಲ್ಡ್ ಜೆ. ಟ್ರಂಪ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಕರೆಸಿಕೊಳ್ಳಲಿದೆ.

ಈ ವಿಮಾನ ನಿಲ್ದಾಣಕ್ಕೆ ಡೊನಾಲ್ಡ್ ಟ್ರಂಪ್ ಅವರ ಹೆಸರಿಡುವ ನಿರ್ಧಾರವನ್ನು ಅಧಿಕೃತವಾಗಿ ಘೋಷಣೆ ಮಾಡಲಾಗಿದೆ. ಮುಂಬರುವ ಜುಲೈ 1ರಿಂದ ವಿಮಾನ ನಿಲ್ದಾಣದ ಹೆಸರು ಅಧಿಕೃತವಾಗಿ ಬದಲಾಗಲಿದೆ. ಫ್ಲೋರಿಡಾದೊಂದಿಗೆ ಡೊನಾಲ್ಡ್ ಟ್ರಂಪ್ ಹೊಂದಿರುವ ಭಾವನಾತ್ಮಕ ಬೆಸುಗೆಯನ್ನು ಗೌರವಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಮೂಲಗಳು ಖಚಿತಪಡಿಸಿವೆ. ಈ ಸಂತಸದ ವಿಚಾರವನ್ನು ಸ್ವತಃ ಡೊನಾಲ್ಡ್ ಟ್ರಂಪ್ ಅವರ ಪುತ್ರ ಎರಿಕ್ ಟ್ರಂಪ್ ಜಗತ್ತಿನ ಮುಂದೆ ಹೆಮ್ಮೆಯಿಂದ ಹಂಚಿಕೊಂಡಿದ್ದಾರೆ.



ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಪಾಮ್ ಬೀಚ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಈಗ ಅಧಿಕೃತವಾಗಿ ಪ್ರೆಸಿಡೆಂಟ್ ಡೊನಾಲ್ಡ್ ಜೆ. ಟ್ರಂಪ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಬದಲಾಗಿದೆ. ಈ ಐತಿಹಾಸಿಕ ಕಾರ್ಯದಲ್ಲಿ ನಾನು ಕೂಡ ಸಣ್ಣ ಪಾತ್ರ ವಹಿಸಿದ್ದೇನೆ ಎಂಬುದು ನನಗೆ ಅತ್ಯಂತ ಹೆಮ್ಮೆಯ ವಿಚಾರವಾಗಿದೆ. ಈ ಪ್ರಯತ್ನಕ್ಕೆ ಬೆಂಬಲ ನೀಡಿದ ಫ್ಲೋರಿಡಾದ ಶಾಸಕರು ಹಾಗೂ ಅಟಾರ್ನಿ ಜನರಲ್ ಜೇಮ್ಸ್ ಉತ್ಮೀಯರ್ ಸೇರಿದಂತೆ ರಾಜ್ಯದ ಪ್ರಮುಖ ಅಧಿಕಾರಿಗಳಿಗೆ ಕೃತಜ್ಞತೆಗಳು ಎಂದಿದ್ದಾರೆ. ಅಮೆರಿಕ ಅಧ್ಯಕ್ಷರ ಬೆಂಬಲಿಗರ ಕನಸು ಇದೀಗ ನನಸಾಗುತ್ತಿದ್ದು, ಫ್ಲೋರಿಡಾ ಪಾಮ್ ಬೀಚ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ, ಡೊನಾಲ್ಡ್ ಟ್ರಂಪ್ ಅವರ ಹೆಸರನ್ನು ಇಡಲಾಗಿದೆ. ಫ್ಲೋರಿಡಾದ ಶಾಸಕರು ಈ ಕುರಿತಾದ ಮಸೂದೆಯನ್ನು ಇತ್ತೀಚೆಗೆ ಪಾಸ್ ಮಾಡಿದ್ದು, ಗವರ್ನರ್ ರಾನ್ ಡಿಸ್ಯಾಂಟಿಸ್ ಈ ಮಸೂದೆಗೆ ಅಧಿಕೃತವಾಗಿ ಸಹಿ ಹಾಕಿದ್ದಾರೆ. ಈ ಮೂಲಕ ಟ್ರಂಪ್ ಅಭಿಮಾನಿಗಳ ಬಹುದಿನಗಳ ಬೇಡಿಕೆ ಈಡೇರಿದಂತಾಗಿದೆ. ಫ್ಲೋರಿಡಾದಲ್ಲಿ ಟ್ರಂಪ್ ಅವರ ಜನಪ್ರಿಯತೆ ಎಷ್ಟಿದೆ ಎಂಬುದಕ್ಕೆ ಈ ನಿರ್ಧಾರವೇ ಸಾಕ್ಷಿ. ಇದೇ ವರ್ಷದ ಜುಲೈ 1ರಿಂದ ಈ ಹೊಸ ಹೆಸರು ಅಧಿಕೃತವಾಗಿ ಚಾಲ್ತಿಗೆ ಬರಲಿದೆ.

**ಭಾರತೀಯರ ಪ್ರತಿಕ್ರಿಯೆ:** ಇನ್ನು ಫ್ಲೋರಿಡಾ ವಿಮಾನ ನಿಲ್ದಾಣಕ್ಕೆ ಡೊನಾಲ್ಡ್ ಟ್ರಂಪ್ ಹೆಸರಿಡುವ ನಿರ್ಧಾರಕ್ಕೆ ಭಾರತೀಯರು ತಮಾಷೆಯಾಗಿ ಪ್ರತಿಕ್ರಿಯಿಸಿದ್ದಾರೆ ಕೆಲವರು ಭಾರತದ ಬಹುತೇಕ ಬೀದಿಗಳಿಗೆ ರಾಷ್ಟ್ರೀಯ ನಾಯಕರು ಹೆಸರುಗಳಿರುವುದನ್ನು ನೆನಪಿಸಿದ್ದರೆ, ಮತ್ತೆ ಕೆಲವರು ಗುಜರಾತ್‌ನ ಅಹಮಾಬದ್‌ನಲ್ಲಿರುವ ನರೇಂದ್ರ ಮೋದಿ ಸ್ಟೇಡಿಯಂ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.ಇನ್ನೂ ಕೆಲವರು ಡೊನಾಲ್ಡ್ ಟ್ರಂಪ್ ಅವರನ್ನು ವಜಾಗೊಳಿಸಿದ ನಂತರ, ಅವರನ್ನು ದೋಷಾರೋಪಣೆಗೆ ಗುರಿಪಡಿಸಿದ ನಂತರ ಅಥವಾ ಅವರ ಅವಧಿ ಮುಗಿದ ನಂತರ ವಿಮಾನ ನಿಲ್ದಾಣದ ಹೆಸರು ಬದಲಾಗಲಿದೆಯೇ? ಎಂದು ವ್ಯಂಗ್ಯಭರಿತ ಧಾಟಿಯಲ್ಲಿ ಪ್ರಶ್ನಿಸಿದ್ದಾರೆ.

ಮತ್ತೆ ಕೆಲವರು ನೊಬೆಲ್ ಶಾಂತಿ ಪ್ರಶಸ್ತಿ ಕೈತಪ್ಪಿದ್ದಕ್ಕೆ ಬೇಸರಗೊಂಡಿರುವ ಡೊನಾಲ್ಡ್ ಟ್ರಂಪ್ ಅವರಿಗೆ, ಫ್ಲೋರಿಡಾ ಪಾಮ್ ಬೀಚ್ ವಿಮಾನ ನಿಲ್ದಾಣವನ್ನು ಉಡುಗೊರೆಯಾಗಿ ನೀಡಲಾಗಿದೆ ಎಂದು ತಮಾಷೆ ಮಾಡಿದ್ದಾರೆ.

### ಭಾರತೀಯರಿಗೆ ಹೊಸದೇನಲ್ಲ

**ನಿರ್ದಿಷ್ಟ ಸ್ಥಳಗಳಿಗೆ, ವಿಮಾನ, ರೈಲು ಮತ್ತು ಬಸ್ ನಿಲ್ದಾಣಗಳಿಗೆ, ಆಟದ ಮೈದಾನಕ್ಕೆ, ಶಿಕ್ಷಣ ಸಂಸ್ಥೆಗಳಿಗೆ ಹೀಗೆ ಬಯಸಿದ್ದಕ್ಕೆ ರಾಷ್ಟ್ರೀಯ ನಾಯರ ಹೆಸರು ಇಡುವುದು ಭಾರತೀಯರಿಗೆ ಹೊಸದೇನಲ್ಲ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಾವು ಇಂತಹ ಹೆಸರುಗಳ ಸಾವಿರಾರು ಸ್ಥಳಗಳನ್ನು ನೋಡಿದ್ದೇವೆ. ಅಮೆರಿಕದಲ್ಲೂ ಈ ಪದ್ಧತಿ ಇದೆಯಾದರೂ, ಭಾರತದಷ್ಟು ಪ್ರಚಲಿತದಲ್ಲಿಲ್ಲ. ಆದರೆ ಇದೀಗ ಫ್ಲೋರಿಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೆಸರಿಡಲಾಗಿದ್ದು, ಭಾರತೀಯರು ಇದಕ್ಕೆ ನಮ್ಮಲ್ಲಿ ನರೇಂದ್ರ ಮೋದಿ ಸ್ಟೇಡಿಯಂ ಇರುವುದಾಗಿ ಪ್ರತಿಕ್ರಿಯೆ ನೀಡಿದ್ದಾರೆ.**

### ಫ್ಲೋರಿಡಾ ಇಷ್ಟಪಡುವ ಟ್ರಂಪ್

**ಫ್ಲೋರಿಡಾ ಎಂದರೆ ಡೊನಾಲ್ಡ್ ಟ್ರಂಪ್ ಅವರಿಗೆ ಅತ್ಯಂತ ಅಚ್ಚುಮೆಚ್ಚಿನ ತಾಣ ಎಂಬುದರಲ್ಲಿ ಎರಡು ಮಾತಿಲ್ಲ. ನ್ಯೂಯಾರ್ಕ್ ಮೂಲದವರಾಗಿದ್ದರೂ, ತಮ್ಮ ರಾಜಕೀಯ ಮತ್ತು ವಾಣಿಜ್ಯ ಸಾಮ್ರಾಜ್ಯದ ಕೇಂದ್ರಬಿಂದುವಾಗಿ ಅವರು ಫ್ಲೋರಿಡಾವನ್ನು ಆರಿಸಿಕೊಂಡಿದ್ದಾರೆ. ಅವರ ಬಹುಪಾಲು ಸಮಯ ಕಳೆಯುವ ಪ್ರಖ್ಯಾತ ಮಾರ್-ಎ-ಲಾಗೋ ರೆಸಾರ್ಟ್ ಇರುವುದು ಇದೇ ಪಾಮ್ ಬೀಚ್ ಪ್ರದೇಶದಲ್ಲಿ. ಈ ರೆಸಾರ್ಟ್‌ನ್ನು ಕಳೆದ ಹಲವು ವರ್ಷಗಳಿಂದ, ಅಮೆರಿಕದ ಪರ್ಯಾಯ ಶ್ವೇತಭವನ ಎಂದೇ ಕರೆಯಲ್ಪಡುತ್ತಿದೆ. ಈ ಕಾರಣಕ್ಕಾಗಿ ಪಾಮ್ ಬೀಚ್ ವಿಮಾನ ನಿಲ್ದಾಣಕ್ಕೆ ಟ್ರಂಪ್ ಅವರ ಹೆಸರಿಡಬೇಕು ಎಂಬ ಬೇಡಿಕೆ ಅವರ ಬೆಂಬಲಿಗರಿಂದ ಹಿಂದಿನಿಂದಲೂ ಕೇಳಿಬರುತ್ತಿತ್ತು.**

## ಮಿನಿ ನ್ಯೂಸ್

### ಜೈಶ್ ಮುಖ್ಯಸ್ಥ ಮಸೂದ್ ಅಜರ್‌ನ ಸಹೋದರ ತಾಹಿರ್ ಸಾವು

**ಲಾಹೋರ್:** ಜೈಶ್-ಎ-ಮೊಹಮ್ಮದ್ ಮುಖ್ಯಸ್ಥ ಮಸೂದ್ ಅಜರ್‌ನ ಸಹೋದರ ಮೊಹಮ್ಮದ್ ತಾಹಿರ್ ಅನ್ವರ್ ಪಾಕಿಸ್ತಾನದಲ್ಲಿ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ ಆದರೆ, ಅವರ ಸಾವಿಗೆ ಕಾರಣ ಇನ್ನೂ ಸ್ಪಷ್ಟವಾಗಿಲ್ಲ. ತಾಹಿರ್ ಅನ್ವರ್ ಜೈಶ್-ಎ-ಮೊಹಮ್ಮದ್ ಜೊತೆ ನಿಕಟ ಸಂಬಂಧ ಹೊಂದಿದ್ದರು ಮತ್ತು ವರ್ಷಗಳಿಂದ ಸಂಘಟನೆಯ ಕಾರ್ಯಾಚರಣೆಗಳಲ್ಲಿ ಸಕ್ರಿಯರಾಗಿದ್ದರು. ಅವರ ಸಾವನ್ನು ಗುಂಪಿನ ಅಧಿಕೃತ ಚಾನೆಲ್ ಮೂಲಕ ದೃಢಪಡಿಸಲಾಗಿದೆ ತಡರಾತ್ರಿ ಬಹಾವಲ್ಪುರದ ಜಾಮಿಯಾ ಮಸೀದಿ ಉಸ್ಮಾನ್‌ವಾಲಿಯಲ್ಲಿ ಅವರ ಅಂತ್ಯಕ್ರಿಯೆ ನಡೆದಿದೆ ಎಂದು ತಿಳಿದುಬಂದಿದೆ. ತಾಹಿರ್ ಅನ್ವರ್ ಅವರ ಸಾವಿನ ಕಾರಣದ ಬಗ್ಗೆ ಇನ್ನೂ ಯಾವುದೇ ಅಧಿಕೃತ ಮಾಹಿತಿ ಇಲ್ಲ, ಇಲ್ಲಿಯವರೆಗೆ ಅನಾರೋಗ್ಯ, ಯಾವುದೇ ನಿರ್ದಿಷ್ಟ ಘಟನೆಯ ಬಗ್ಗೆ ಯಾವುದೇ ಉಲ್ಲೇಖವಿಲ್ಲ ಎಂದು ಮೂಲಗಳು ತಿಳಿಸಿವೆ, ಇದು ಹಲವಾರು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಜೈಶ್-ಎ-ಮೊಹಮ್ಮದ್ ಒಂದು ಉಗ್ರ ಸಂಘಟನೆಯಾಗಿದೆ. 2001 ರ ಸಂಸತ್ತಿನ ದಾಳಿ, 2016 ರ ಪಠಾಣ್‌ಕೋಟ್ ವಾಯುನೆಲೆಯ ದಾಳಿ, 19 ಸೈನಿಕರನ್ನು ಕೊಂದ ಉರಿ ದಾಳಿ ಮತ್ತು 40 ಸಿಆರ್‌ಪಿಎಫ್ ಸಿಬ್ಬಂದಿಯನ್ನು ಕೊಂದ 2019 ರ ಪುಲ್ವಾಮಾ ದಾಳಿ ಸೇರಿದಂತೆ ಭಾರತದಲ್ಲಿ ನಡೆದ ಹಲವಾರು ಪ್ರಮುಖ ದಾಳಿಗಳಿಗೆ ಈ ಸಂಘಟನೆ ಸಂಬಂಧ ಹೊಂದಿದೆ. ಭಾರತೀಯ ಪಡೆಗಳು ಪಾಕಿಸ್ತಾನದೊಳಗಿನ ಜೈಶ್ ನೆಲೆಗಳ ಮೇಲೆ ದಾಳಿ ನಡೆಸಿದ್ದ ಸಂದರ್ಭದಲ್ಲಿ ಅಜರ್‌ನ ಹಲವಾರು ನಿಕಟ ಸಂಬಂಧಿಗಳು ಸಾವನ್ನಪ್ಪಿದರು. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ, ಜೈಶ್ ಮೊದಲ ಬಾರಿಗೆ ಈ ನಷ್ಟಗಳನ್ನು ಪರೋಕ್ಷವಾಗಿ ಒಪ್ಪಿಕೊಂಡಿದ್ದರು. ಆಪರೇಷನ್ ಸಿಂಧೂರ್ ಅಡಿಯಲ್ಲಿ ಬಹಾವಲ್‌ಪುರದ ಮೇಲೆ ಭಾರತ ನಡೆಸಿದ ದಾಳಿಯ ಸಮಯದಲ್ಲಿ ಅಜರ್‌ನ ಕುಟುಂಬದ ಸದಸ್ಯರು ಕೊಲ್ಲಲ್ಪಟ್ಟರು ಎಂದು ಸಂಘಟನೆಯ ಹಿರಿಯ ಕಮಾಂಡರ್ ಒಪ್ಪಿಕೊಂಡಿದ್ದರು.

### ಭಾರತದತ್ತ ತೆರಳುತ್ತಿದ್ದ ಇರಾನ್ ವಿಮಾನದ ಮೇಲೆ ದಾಳಿ

**ಟೆಹ್ರಾನ್:** ಪರಿಹಾರ ತರಲು ಭಾರತದತ್ತ ಪ್ರಯಾಣ ಮಾಡಲು ಸಿದ್ದವಾಗಿದ್ದ ಇರಾನ್ ವಿಮಾನದ ಮೇಲೆ ಅಮೆರಿಕ ದಾಳಿ ನಡೆಸಿದೆ. ಇರಾನ್‌ನ ಮಶಾದ್ ವಿಮಾನ ನಿಲ್ದಾಣದಲ್ಲಿ ಮಹಾನ್ ಏರ್ ವಿಮಾನವು ಅಮೆರಿಕದ ವೈಮಾನಿಕ ದಾಳಿಯಲ್ಲಿ ಹಾನಿಗೊಳಗಾಗಿದೆ. ವಿಮಾನವು ಪರಿಹಾರ ಸಾಮಗ್ರಿಗಳನ್ನು ಪಡೆಯಲು ನವದೆಹಲಿಗೆ ತೆರಳುತ್ತಿತ್ತು. ಬುಧವಾರ ಬೆಳಗ್ಗೆ 4 ಗಂಟೆಗೆ ವಿಮಾನ ಆಗಮಿಸಬೇಕಿತ್ತು ಎಂದು ವರದಿಯಾಗಿದೆ. ಈ ಘಟನೆಯು ದೇಶದಲ್ಲಿ ನಾಗರಿಕ ವಿಮಾನಯಾನ ಸುರಕ್ಷತೆಯ ಬಗ್ಗೆ ಕಳವಳವನ್ನು ಹುಟ್ಟುಹಾಕಿದೆ. ಮಹನ್ ಏರ್ ಖಾಸಗಿ ಒಡೆತನದ ಇರಾನಿನ ವಿಮಾನಯಾನ ಸಂಸ್ಥೆಯಾಗಿದ್ದು, ಇದು ಪಶ್ಚಿಮ ಏಷ್ಯಾ, ಮಧ್ಯ ಏಷ್ಯಾ, ದಕ್ಷಿಣ ಏಷ್ಯಾ, ಆಗ್ನೇಯ ಏಷ್ಯಾ, ಪೂರ್ವ ಏಷ್ಯಾದ ಹಲವಾರು ದೇಶಗಳಿಗೆ ವಿಮಾನಗಳನ್ನು ನಿರ್ವಹಿಸುತ್ತದೆ. ಯುದ್ಧದ ಆರಂಭದಲ್ಲಿ ಇಸ್ರೇಲಿ ನಡೆಸಿದ ದಾಳಿಯಲ್ಲಿ ಮೆಹ್ರಾಬಾದ್ ವಿಮಾನ ನಿಲ್ದಾಣದಲ್ಲಿ ಸುಮಾರು 16-17 ಪ್ರಯಾಣಿಕ, ಸರಕು ವಿಮಾನಗಳು ನಾಶವಾಗಿತ್ತು. ಈ ವಿಮಾನಗಳು ಇರಾನಿನ ಕ್ರಾಂತಿಕಾರಿ ಗಾರ್ಡ್ ಕಾರ್ಪ್ಸ್‌ಗೆ ಸೇರಿವೆ, ಭಯೋತ್ಪಾದಕರಿಗೆ ಶಸ್ತ್ರಾಸ್ತ್ರಗಳನ್ನು ಸಾಗಿಸಲು ಕುಡ್ಸ್ ಫೋರ್ಸ್ ಬಳಸುತ್ತಿತ್ತು ಎಂದು ಇಸ್ರೇಲ್ ಹೇಳಿಕೊಂಡಿದೆ. ಉಕ್ರೇನ್ ಯುದ್ಧಕ್ಕಾಗಿ ರಷ್ಯಾಕ್ಕೆ ಶಸ್ತ್ರಾಸ್ತ್ರಗಳನ್ನು ಸಾಗಿಸಲು ಇರಾನ್ ಏರ್, ಮಹಾನ್ ಏರ್ ನಂತಹ ವಾಣಿಜ್ಯ ವಿಮಾನಗಳನ್ನು ಬಳಸಲಾಗುತ್ತಿತ್ತು ಎಂದು ಇಸ್ರೇಲ್ ಹೇಳಿದೆ. ಭಾರತದಿಂದ ಇರಾನ್‌ಗೆ ಔಷಧಿಗಳು ಸೇರಿದಂತೆ 11 ಟನ್‌ಗಳಷ್ಟು ಮಾನವೀಯ ನೆರವನ್ನು ಸಾಗಿಸಬೇಕಿತ್ತು. ಹಿಂದಿನ ಸಾಗಣೆಗಳಲ್ಲಿಯೂ ಭಾರತೀಯ ವಿಮಾನಗಳನ್ನು ಬಳಸಿರಲಿಲ್ಲ. ವಿಮಾನವು ದೆಹಲಿಗೆ ತೆರಳುತ್ತಿತ್ತು, ಯುದ್ಧ ಸಂತ್ರಸ್ತರಿಗೆ 11 ಟನ್‌ಗಳಿಗೂ ಹೆಚ್ಚು ಮಾನವೀಯ ಔಷಧಿಗಳನ್ನು ಹೊತ್ತುಕೊಂಡು ಇರಾನ್‌ಗೆ ಹಿಂತಿರುಗಬೇಕಿತ್ತು.

### ಪಶ್ಚಿಮ ಏಷ್ಯಾ ಸಂಘರ್ಷದ ಕುರಿತು ನೆದರ್ಲೆಂಡ್ ಪ್ರಧಾನಿಯೊಂದಿಗೆ ಮೋದಿ ಮಾತುಕತೆ

**ನವದೆಹಲಿ:** ಪಶ್ಚಿಮ ಏಷ್ಯಾದಲ್ಲಿ ಯುದ್ಧದಿಂದ ಅಪಾರ ಪ್ರಮಾಣದ ಹಾನಿಯಾಗಿದ್ದು, ಆ ಪ್ರದೇಶದಲ್ಲಿ ಶಾಂತಿ ಮರುಸ್ಥಾಪನೆಯ ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ನೆದರ್ಲೆಂಡ್ ಪ್ರಧಾನಿ ರಾಬ್ ಜೆಟ್ಟೆನ್ ಅವರೊಂದಿಗಿನ ಸಂಭಾಷಣೆಯಲ್ಲಿ ಹೇಳಿದ್ದಾರೆ. ಫೋನ್ ಕರೆಯಲ್ಲಿ ಉಭಯ ದೇಶಗಳ ನಾಯಕರು ಭಾರತ ಮತ್ತು ನೆದರ್ಲೆಂಡ್ ನಡುವಿನ ದ್ವಿಪಕ್ಷೀಯ ಸಂಬಂಧ ಹಾಗೂ ಪಶ್ಚಿಮ ಏಷ್ಯಾ ಸಂಘರ್ಷದ ಕುರಿತು ಮಾತನಾಡಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, ಡಚ್ ಪ್ರಧಾನಿಯೊಂದಿಗೆ ಫೋನ್ ಕರೆಯಲ್ಲಿ ಮಾತನಾಡಿದ್ದು, ಸೆಮಿಕಂಡಕ್ಟರ್, ಬೃಹತ್ ನೀರಾವರಿ ಯೋಜನೆ, ಗ್ರೀನ್ ಹೈಡ್ರೋಜನ್, ವ್ಯಾಪಾರ ಹಾಗೂ ರಕ್ಷಣಾ ವಲಯದ ಕುರಿತು ಚರ್ಚೆ ನಡೆಸಲಾಗಿದೆ ಎಂದು ತಿಳಿಸಿದ್ದಾರೆ. ಇದೇ ವೇಳೆ ಪಶ್ಚಿಮ ಏಷ್ಯಾ ಸಂಘರ್ಷದ ಕುರಿತು ಉಭಯ ನಾಯಕರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

## ಭಾರತದತ್ತ ಇಂಧನ ತರಲು ರೆಡಿಯಾಗಿದ್ದ ಹಡಗುಗಳು ಕೊಲ್ಲಿಯಲ್ಲಿ ಬ್ಲಾಕ್



**ನವದೆಹಲಿ:** ಭಾರತಕ್ಕೆ ಇಂಧನ ಸರಬರಾಜುಗಳನ್ನು ಸಾಗಿಸುವ ಕನಿಷ್ಠ 10 ವಿದೇಶಿ ಧ್ವಜ ಹೊಂದಿರುವ ಹಡಗುಗಳು ಪರ್ಷಿಯನ್ ಕೊಲ್ಲಿಯಲ್ಲಿ ಸಿಲುಕಿಕೊಂಡಿವೆ ಎಂದು ಸರ್ಕಾರ ತಿಳಿಸಿದೆ. ಮಧ್ಯಪ್ರಾಚ್ಯ ಯುದ್ಧದಿಂದ ವಾಸ್ತವಿಕವಾಗಿ ನಿಷ್ಕ್ರಿಯಗೊಂಡ ನಿರ್ಣಾಯಕ ಹಡಗು ಮಾರ್ಗವಾದ ಹಾರ್ಮುಜ್‌ಜಲಸಂಧಿಯ ಪಶ್ಚಿಮಕ್ಕೆ ಲಂಗರು ಹಾಕಿರುವ ಎಲ್‌ಪಿಜಿ, ಕಚ್ಚಾ ತೈಲ ಮತ್ತು ಎಲ್‌ಎನ್‌ಜಿ ಹೊಂದಿರುವ 18 ಭಾರತ ಧ್ವಜ ಹೊಂದಿರುವ ಹಡಗುಗಳ ಜೊತೆಗೆ ಇದು ಸೇರಿದೆ. ಪಶ್ಚಿಮ ಏಷ್ಯಾದಲ್ಲಿನ ಬೆಳವಣಿಗೆಗಳ ಪರಿಣಾಮಗಳ ಕುರಿತು ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಬಂದರುಗಳು, ಹಡಗು ಸಾಗಣೆ ಮತ್ತು ಜಲಮಾರ್ಗಗಳ ಸಚಿವಾಲಯದ ವಿಶೇಷ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿನ್ಹಾ ಅವರು, ಭಾರತಕ್ಕೆ ತೆರಳುವ 10 ವಿದೇಶಿ ಧ್ವಜ ಹೊಂದಿರುವ ಹಡಗುಗಳ ಬಗ್ಗೆ ಮಾತನಾಡುತ್ತಾ, ಮೂರು ನಿರ್ಣಾಯಕ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ), ನಾಲ್ಕು ಕಚ್ಚಾ ತೈಲ ಟ್ಯಾಂಕರ್‌ಗಳು ಮತ್ತು ಮೂರು ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ವಾಹಕಗಳಾಗಿವೆ. ಭಾರತ ಧ್ವಜ ಹೊಂದಿರುವ 18 ಹಡಗುಗಳಲ್ಲಿ, ಮೂರು ಎಲ್‌ಪಿಜಿ ಟ್ಯಾಂಕರ್‌ಗಳು, ಒಂದು ಎಲ್‌ಎನ್‌ಜಿ ವಾಹಕ, ನಾಲ್ಕು ಕಚ್ಚಾ ತೈಲ ಟ್ಯಾಂಕರ್‌ಗಳು.

ಒಂದು ಖಾಲಿ ಟ್ಯಾಂಕರ್‌ಗೆ ಎಲ್‌ಪಿಜಿ ತುಂಬಿಸಲಾಗುತ್ತಿದೆ ಎಂದು ಅವರು ಹೇಳಿದರು, ಈ ಹಡಗುಗಳಲ್ಲಿ 485 ನಾವಿಕರು ಇದ್ದಾರೆ ಎಂದು ಅವರು ಹೇಳಿದರು. ಪಶ್ಚಿಮ ಏಷ್ಯಾ ಸಂಘರ್ಷ ಹೆಚ್ಚುತ್ತಿರುವ ಮಧ್ಯೆ ಕಿರಿದಾದ ಜಲಸಂಧಿಯಲ್ಲಿ ಸಿಲುಕಿದ 500 ಹಡಗುಗಳಲ್ಲಿ ಈ ಹಡಗುಗಳು ಸೇರಿವೆ.

ಭಾರತಕ್ಕೆ ಹೋಗುವ ಸರಕುಗಳನ್ನು ಸಾಗಿಸುವ ಭಾರತೀಯ ಧ್ವಜ ಹೊಂದಿರುವ ಹಡಗುಗಳು ಹಾರ್ಮುಜ್ ಜಲಸಂಧಿಯ ಮೂಲಕ ಹಾದು ಹೋಗಲು ಅವಕಾಶ ನೀಡುವುದನ್ನು ಖಚಿತಪಡಿಸಿಕೊಳ್ಳುವುದು ಸರ್ಕಾರದ ಆದ್ಯತೆಯಾಗಿದೆ ಎಂದು ಸಿನ್ಹಾ ಒತ್ತಿ ಹೇಳಿದರು.

## ಉಚಿತ ಸಿಲಿಂಡರ್ ಸೇರಿ ಎನ್‌ಡಿಎಯಿಂದ ಭರವಸೆ

**ತಿರುವನಂತಪುರ:** ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ಕೇರಳ ವಿಧಾನಸಭೆ ಚುನಾವಣೆಗೆ ಮಂಗಳವಾರ ತನ್ನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ. ನಿರ್ಗತಿಕ ಮಹಿಳೆಯರು ಮತ್ತು 70 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಆರ್ಥಿಕ ಸಹಾಯ, ಬಡ ಕುಟುಂಬಗಳಿಗೆ ವರ್ಷಕ್ಕೆ ಎರಡು ಉಚಿತ ಎಲ್‌ಪಿಜಿ ಸಿಲಿಂಡರ್‌ಗಳು, ಕೇರಳಕ್ಕೆ ಏಮ್ಸ್, ರಾಜ್ಯದ ಪೂಜಾಸ್ಥಳಗಳ ರಕ್ಷಣೆ ಭರವಸೆ ನೀಡಲಾಗಿದೆ. ಇಲ್ಲಿ ನಡೆದ ಎನ್‌ಡಿಎ ಕಾರ್ಯಕ್ರಮದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಪ್ರಣಾಳಿಕೆ ಬಿಡುಗಡೆ ಮಾಡಿದರು.

ರಾಜ್ಯ ರಾಜಧಾನಿಯನ್ನು ಕಣ್ಣೂರಿನೊಂದಿಗೆ ಸಂಪರ್ಕಿಸುವ ಹೈಸ್ಪೀಡ್ ರೈಲು ಜಾಲ, ಪ್ರತಿ ಮನೆಗೆ 20,000 ಲೀಟರ್ ಉಚಿತ ನೀರು ಮತ್ತು ಮುಲ್ಲಪೆರಿಯಾರ್ ಅಣೆಕಟ್ಟೆಗೆ ಸಂಬಂಧಿಸಿದಂತೆ ತಮಿಳುನಾಡಿಗೆ ನೀರು, ಕೇರಳಕ್ಕೆ ಸುರಕ್ಷೆ ಎಂಬ ಭರವಸೆಯೂ ಸೇರಿದೆ. ಬಡ ಮತ್ತು ಬಿಪಿಎಲ್ ಕುಟುಂಬಗಳ ಪ್ರತಿಯೊಬ್ಬ ಮಹಿಳೆಗೆ ಮಾಸಿಕ 2,500 ರೀಚಾರ್ಜ್‌ನೊಂದಿಗೆ ಭಕ್ಷ್ಯ ಆರೋಗ್ಯ ಸುರಕ್ಷಾ ಕಾರ್ಡ್ ನೀಡಲಾಗುವುದು ಎಂದು ಪ್ರಣಾಳಿಕೆಯಲ್ಲಿ ಭರವಸೆ ನೀಡಲಾಗಿದೆ. ಇದನ್ನು ಮಹಿಳೆಯರು ಔಷಧಾಲಯಗಳು, ದಿನಸಿ ಅಂಗಡಿಗಳಲ್ಲಿ ಬಳಸಬಹುದು. ಇದರ ಜೊತೆಗೆ, ಬಡ ಕುಟುಂಬಗಳ ಮಹಿಳಾ ಮುಖ್ಯಸ್ಥೆಗೆ, ವಿಧವೆಯರು, 70 ವರ್ಷಕ್ಕಿಂತ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ತಿಂಗಳಿಗೆ 3,000ಗಳ ಪಿಂಚಣಿ ನೀಡಲಾಗುವುದು.

ಹೆಚ್ಚುವರಿಯಾಗಿ, ಓಣಂ, ಕ್ರಿಸ್‌ಮಸ್ ಸಮಯದಲ್ಲಿ ಬಡ ಕುಟುಂಬಗಳಿಗೆ ತಲಾ ಒಂದು ಉಚಿತ ಎಲ್‌ಪಿಜಿ ಸಿಲಿಂಡರ್ ನೀಡಲಾಗುವುದು ಎಂದು ಪ್ರಣಾಳಿಕೆಯಲ್ಲಿ ಹೇಳಲಾಗಿದೆ. ಬೆಟ್ಟದ ತುದಿಯಲ್ಲಿರುವ ದೇವಾಲಯದಲ್ಲಿ ದೊಡ್ಡ ಪ್ರಮಾಣದ ಭಕ್ತರ ಕೇಂದ್ರಿತ ಮೂಲಸೌಕರ್ಯ ಅಭಿವೃದ್ಧಿಯನ್ನು ಕೈಗೊಳ್ಳಲು ಶಬರಿಮಲೆ ಮೂಲಸೌಕರ್ಯ ಅಭಿವೃದ್ಧಿ ಮಿಷನ್‌ಅನ್ನು ಪ್ರಾರಂಭಿಸುವುದಾಗಿಯೂ ಅದು ಭರವಸೆ ನೀಡಿದೆ.

# ಬಿಹಾರದ ಮಾತಾ ದೇವಾಲಯದಲ್ಲಿ ಕಾಲ್ತುಳಿತ : 8 ಮಂದಿ ಸಾವು




**ಪಾಟ್ನಾ:** ಬಿಹಾರದ ನಳಂದಾ ಜಿಲ್ಲೆಯಲ್ಲಿ ಶೀತಲ ಮಾತಾ ದೇವಾಲಯದಲ್ಲಿ ಭಕ್ತರ ನುಗ್ಗುವಿಕೆಯಿಂದ ಉಂಟಾದ ಕಾಲ್ತುಳಿತದಲ್ಲಿ 8 ಮಂದಿ ಸಾವನ್ನಪ್ಪಿ, ಹಲವಾರು ಮಂದಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ. 12ಕ್ಕೂ ಹೆಚ್ಚು ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಈ ಪೈಕಿ ಎಂಟು ಮಂದಿ ಮೃತಪಟ್ಟಿದ್ದು, ನಾಲ್ವರ ಸ್ಥಿತಿ ಗಂಭೀರವಾಗಿದೆ ಸಾವಿನ ಸಂಖ್ಯೆ ಇನ್ನಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎಂದು ವೈದ್ಯರು ಹೇಳಿದ್ದಾರೆ. ಚೈತ್ರ ಮಾಸದ ಕೊನೆಯ ಮಂಗಳವಾರ ಭಕ್ತರ ಬೃಹತ್ ಗುಂಪು ನೆರೆದಿತ್ತು. ಸರತಿ ಸಾಲು ಕಾಯ್ದುಕೊಳ್ಳದೆ ಏಕಾಏಕಿ ಭಕ್ತರು ದೇವಾಲಯದೊಳಗೆ ನುಗ್ಗಿದ್ದರಿಂದ ತೀವ್ರ ನೂಕುನುಗ್ಗಲು ಉಂಟಾಗಿದೆ.

ಭಕ್ತರ ನುಗ್ಗುವಿಕೆಯಿಂದ ಉಂಟಾದ ಕಾಲ್ತುಳಿತದಲ್ಲಿ ಎಂಟು ಜನರು ಸಾವನ್ನಪ್ಪಿದ್ದಾರೆ. ಘಟನೆಯ ಬಗ್ಗೆ ಮಾಹಿತಿ ಪಡೆದ ಪೊಲೀಸರು ಸ್ಥಳಕ್ಕೆ ಆಗಮಿಸಿ ರಕ್ಷಣಾ ಕಾರ್ಯಾಚರಣೆ ಕೈಗೊಂಡಿದ್ದು, ದೇವರ ದರ್ಶನ ಪಡೆಯುವ ಆತುರದಲ್ಲಿ ಕೆಲವು ಭಕ್ತರು ಸರತಿ ಸಾಲನ್ನು ಮುರಿದು ಒಬ್ಬರ ಮೇಲೊಬ್ಬರು ಹತ್ತಲು ಪ್ರಾರಂಭಿಸಿದರು. ಇದು ಅಸ್ತವ್ಯಸ್ತ ಪರಿಸ್ಥಿತಿಯನ್ನು ಸೃಷ್ಟಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಘಟನೆಯ ನಂತರ ದೇಗುಲದ ಆಡಳಿತದ ನಿರ್ಲಕ್ಷ್ಯದ ಬಗ್ಗೆ ಪೊಲೀಸ್ ಆಡಳಿತದ ಬಗ್ಗೆ ಪ್ರಶ್ನೆಗಳು ಎದ್ದಿವೆ. ಪ್ರತ್ಯಕ್ಷದರ್ಶಿಗಳು ಈ ಘಟನೆಗೆ ದೇವಸ್ಥಾನದ ಆಡಳಿತ ಮಂಡಳಿಯ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿದ್ದಾರೆ. ಘಟನೆಯ ಸುದ್ದಿ ತಿಳಿದ ತಕ್ಷಣ ಬಿಹಾರ ಸರ್ಕಾರ ತೀವ್ರ ಕ್ರಮ ಕೈಗೊಂಡಿದೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಘಟನೆಯ ಬಗ್ಗೆ ಆಘಾತ ವ್ಯಕ್ತಪಡಿಸಿ, ಸಂತ್ರಸ್ತ ಕುಟುಂಬಗಳಿಗೆ ಸಹಾಯ ನೀಡುವಂತೆ ಸೂಚಿಸಿದ್ದಾರೆ. ಜಿಲ್ಲಾಡಳಿತವು ಘಟನೆಯ ಕುರಿತು ವಿಚಾರಣೆ ಆರಂಭಿಸಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಕೂಡ ನಳಂದದಲ್ಲಿದ್ದರು. ನಳಂದ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಆಗಮಿಸಿದ್ದರು.

# 80ರ ದಶಕದಲ್ಲೇ ಇರಾನ್ ತೈಲದ ಮೇಲೆ ಟ್ರಂಪ್ ಕಣ್ಣು

## ಖಾರ್ಗ್ ದ್ವೀಪದ ದಾಳಿ ಹೇಳಿಕೆ ನಡುವೆ ಹಳೆ ವಿಡಿಯೋ ಹಂಚಿಕೊಂಡ ಯುಎಸ್ ಅಧ್ಯಕ್ಷ



**ವಾಷಿಂಗ್ಟನ್:** ಇರಾನ್ ಮೇಲೆ ಅಮೆರಿಕಾ ದಾಳಿಗಳು ಹೆಚ್ಚಾಗುತ್ತಿದ್ದು, ಈಗಾಗಲೇ ಇರಾನ್ ನ ಆರ್ಥಿಕತೆಯ ಬೆನ್ನೆಲುಬಾಗಿರುವ ತೈಲವನ್ನು ವಶಪಡಿಸಿಕೊಳ್ಳುವುದೇ ಅಮೆರಿಕಾದ ಆದ್ಯತೆ ಎಂದು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಹಿರಂಗವಾಗಿ ತಿಳಿಸಿದ್ದಾರೆ.

ಈ ಬೆನ್ನಲ್ಲೇ, ಈ ಹೇಳಿಕೆಗಳಿಗೆ ಪುಷ್ಠಿ ನೀಡುವಂತೆ ಅಮೆರಿಕಾ ಅಧ್ಯಕ್ಷ ಇರಾನ್ ತೈಲ ನಿಕ್ಷೇಪಗಳನ್ನು ವಶಪಡಿಸಿಕೊಳ್ಳುವ ಕುರಿತು ದಶಕಗಳ ಹಿಂದೆ ಪ್ರತಿಪಾದಿಸಿದ ತಮ್ಮ ಹಳೆಯ ವಿಡಿಯೋವನ್ನು ಹಂಚಿಕೊಂಡಿದ್ದಾರೆ.

**ಇರಾನ್ ತೈಲದ ಬಗ್ಗೆ ದಶಕಗಳ ಹಿಂದೆಯೇ ಟ್ರಂಪ್ ಹೇಳಿಕೆ:** ಇರಾನ್ ತೈಲದ ಬಗ್ಗೆ ಇರುವ ತಮ್ಮ ಅಭಿಪ್ರಾಯದ ಕುರಿತು 1987ರಲ್ಲಿ 20/20 ಕಾರ್ಯಕ್ರಮದಲ್ಲಿ ಪತ್ರಕರ್ತೆ ಬಾರ್ಬರಾ ವಾಲ್ಟರ್ಸ್ ಅವರೊಂದಿಗಿನ ಸಂದರ್ಶನದ ವಿಡಿಯೋವೊಂದನ್ನು ಟ್ರಂಪ್ ತಮ್ಮ ಟ್ರುತ್ ಸೋಶೀಯಲ್‌ನಲ್ಲಿ ಹಂಚಿಕೊಂಡಿದ್ದಾರೆ. ಇದರಲ್ಲಿ 41 ವರ್ಷದ ಡೊನಾಲ್ಡ್ ಟ್ರಂಪ್ ಇರಾನ್ ಹಾಗೂ ಇರಾಕ್ ಯುದ್ಧ ಸಂದರ್ಭದಲ್ಲಿ ಅಮೆರಿಕಾದ ಕಾರ್ಯತಂತ್ರದ ಕುರಿತು ಹೇಳಿಕೆ ನೀಡಿದ್ದಾರೆ.



- ದಶಕಗಳ ಹಿಂದೆಯೇ ಇರಾನ್ ತೈಲದ ಮೇಲೆ ಬಿದ್ದಿತ್ತು ಡೊನಾಲ್ಡ್ ಟ್ರಂಪ್
- ಇರಾನ್ ತೈಲವನ್ನು ವಶಪಡಿಸಿಕೊಳ್ಳಿ ಎಂದು 80ದಶಕದಲ್ಲೇ ಹೇಳಿದ್ದ ಹಳೆಯ ವಿಡಿಯೋ ಹಂಚಿಕೊಂಡ ಟ್ರಂಪ್
- ಅಮೆರಿಕಾದೊಂದಿಗೆ ಯಾವುದೇ ಮಾತುಕತೆ ಇಲ್ಲ ಎಂದ ಇರಾನ್ ಹೇಳಿದ್ದೇನು?

**ಟ್ರಂಪ್ ಹಂಚಿಕೊಂಡ ಹಳೆಯ ವಿಡಿಯೋದಲ್ಲೇನಿದೆ?:** 80ರ ದಶಕದಲ್ಲಿ ರಾಜಕೀಯ ರಂಗ ಪ್ರವೇಶಕ್ಕೆ ಸಿದ್ಧತೆ ನಡೆಸುತ್ತಿದ್ದ ಟ್ರಂಪ್ ಇರಾನ್-ಇರಾಕ್ ಯುದ್ಧದಲ್ಲಿ ಹೊರ್ಮುಜ್ ಜಲಸಂಧಿಯಲ್ಲಿನ ಜಾಗತಿಕ ತೈಲ ಹಡಗುಗಳ ಮೇಲೆ ಇರಾನ್ ದಾಳಿ ನಡೆಸಿದ ಸಂದರ್ಭದಲ್ಲಿ ಸಂದರ್ಶನ ನಡೆಸಿದ್ದು, ಅಮೆರಿಕಾದ ಕಾರ್ಯತಂತ್ರದಲ್ಲಿನ ದೌರ್ಬಲ್ಯವನ್ನು ಪ್ರಶ್ನಿಸಿದ್ದಾರೆ. ಅಲ್ಲದೆ, ಇರಾನ್ ವಿರುದ್ಧ ಅಮೆರಿಕಾ ನಿಲುವು ಹೇಗಿರಬೇಕು ಎಂದು ತಿಳಿಸುತ್ತಾ ಇರಾನಿನ ಕ್ರಮಗಳಿಗೆ ಪ್ರತಿಕ್ರಿಯಿಸಲು ತನ್ನ ತೈಲ ಮೂಲಸೌಕರ್ಯವನ್ನು ನಿಯಂತ್ರಿಸಬೇಕು. ಈ ಮೂಲಕ ನಷ್ಟವನ್ನು ಅವರ ತೈಲದಿಂದಲೇ ಭರಿಸುವಂತೆ ಮಾಡಬೇಕು ಎಂದು ಪ್ರತಿಪಾದಿಸಿದ್ದಾರೆ. ಅಲ್ಲದೆ, ಮುಂದಿನ ಬಾರಿ ಇರಾನ್ ಅಮೆರಿಕಾ ಮೇಲೆ ದಾಳಿಯನ್ನು ಮಾಡಿದರೆ, ಒಳಗೆ ಹೋಗಿ ಅವರ ದೊಡ್ಡ ತೈಲ ಸ್ಥಾವರಗಳಲ್ಲಿ ಒಂದನ್ನು ವಶಪಡಿಸಿಕೊಳ್ಳಿ, ನಾನು ಹೇಳುತ್ತಿರುವುದೇನೆಂದರೆ ಅದನ್ನು ವಶಪಡಿಸಿಕೊಳ್ಳಿ ಮತ್ತು ಇಟ್ಟುಕೊಳ್ಳಿ ಮತ್ತು ನಿಮ್ಮ ನಷ್ಟವನ್ನು ಮರಳಿ ಪಡೆಯಿರಿ, ಏಕೆಂದರೆ ಇರಾನ್‌ನಿಂದಾಗಿ ಈ ದೇಶವು ಬಹಳಷ್ಟು ಕಳೆದುಕೊಂಡಿದೆ ಎಂದಿದ್ದಾರೆ.

### ಯಾವುದೇ ಮಾತುಕತೆ ನಡೆಸಿಲ್ಲ

**ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ನ ತೈಲದ ಮೇಲೆ ಕಣ್ಣಿಟ್ಟಿರುವುದಾಗಿ ಬಹಿರಂಗವಾಗಿ ಹೇಳಿಕೆ ನೀಡಿದ್ದಾರೆ. ಈ ಬೆನ್ನಲ್ಲೇ, ಇರಾನ್ ತೈಲ ನಿಕ್ಷೇಪದ ಕುರಿತು ಅಮೆರಿಕಾ ನಡೆ ಹೇಗಿರಬೇಕು ಎಂಬುದರ ಕುರಿತು ದಶಕಗಳ ಹಿಂದೆಯೇ ಹೇಳಿಕೆ ನೀಡಿದ ಸಂದರ್ಶನದ ವಿಡಿಯೋವೊಂದನ್ನು ಸ್ವತಃ ಟ್ರಂಪ್ ಹಂಚಿಕೊಂಡಿದ್ದು, ಈ ಮೂಲಕ ಇರಾನ್ ತೈಲ ವಶಪಡಿಸಿಕೊಳ್ಳುವ ಸಾಧ್ಯತೆಗಳಿಗೆ ಪುಷ್ಠಿ ನೀಡಿದ್ದಾರೆ. ಇತ್ತ ಇರಾನ್ ಅಮೆರಿಕಾದೊಂದಿಗೆ ಯಾವುದೇ ಮಾತುಕತೆ ನಡೆಸಿಲ್ಲ ಎಂದಿದೆ.**

ಇನ್ನು, ಈ ವಿಡಿಯೋ ಟ್ರಂಪ್ ಯಾವುದೇ ಶೀರ್ಷಿಕೆ ನೀಡಿಲ್ಲ, ಆದಾಗ್ಯೂ, ಇರಾನ್ ನೊಂದಿಗೆ ಮಾತುಕತೆ ಸಫಲವಾಗದೆ ಇದ್ದಲ್ಲಿ ಹೊರ್ಮುಜ್ ಜಲಸಂಧಿ ಹಾಗೂ ಖಾರ್ಗ್ ದ್ವೀಪದಲ್ಲಿರುವ ಇರಾನ್ ತೈಲವನ್ನು ಅಮೆರಿಕಾ ವಶಪಡಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಟ್ರಂಪ್ ಹೇಳಿಕೆ ನೀಡಿದ ಬೆನ್ನಲ್ಲೇ, ಈ ವಿಡಿಯೋ ಹರಿಬಿಟ್ಟಿರುವುದು ಇದರ ಸಾಧ್ಯತೆಯನ್ನು ಹೆಚ್ಚಿಸುವುದಕ್ಕೆ ಪುಷ್ಠಿಕರಣ ನೀಡುವಂತಿದೆ.

**ಅಮೆರಿಕಾದೊಂದಿಗೆ ನಾವು ಯಾವುದೇ ಮಾತುಕತೆ ನಡೆಸಿಲ್ಲ ಎಂದ ಇರಾನ್:** ಇತ್ತ, ಇರಾನ್ ನಿರಂತರವಾಗಿ ಅಮೆರಿಕಾದ ಮಾತುಕತೆ ಎಂಬ ಹೇಳಿಕೆಗಳನ್ನು ತಳ್ಳಿಹಾಕುತ್ತಿದೆ. ಇದೀಗ ಮತ್ತೊಮ್ಮೆ ಇರಾನ್‌ನ ವಿದೇಶಾಂಗ ಸಚಿವಾಲಯವು ಈ ಕುರಿತು ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದು, ಫೆಬ್ರವರಿ 28 ರಂದು ಯುದ್ಧ ಪ್ರಾರಂಭವಾದಾಗಿನಿಂದ 31 ದಿನಗಳ ಸಂಘರ್ಷದ ಸಮಯದಲ್ಲಿ, ಅಮೆರಿಕಾದೊಂದಿಗೆ ಯಾವುದೇ ಮಾತುಕತೆಗಳು ನಡೆದಿಲ್ಲ.

ಬದಲಾಗಿ ಪಾಕಿಸ್ತಾನ ಸೇರಿದಂತೆ ಮಧ್ಯವರ್ತಿಗಳ ಮೂಲಕ ಪ್ರಸ್ತಾವನೆಗಳೊಂದಿಗೆ ಮಾತುಕತೆಗಾಗಿ ವಿನಂತಿಯನ್ನು ಸಲ್ಲಿಸುವುದು ಮಾತ್ರ ವಾಷಿಂಗ್ಟನ್ ಮಾಡಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಕೈ ಎಕ್ಸ್ ಪೋಸ್ಟ್ ಮೂಲಕ ತಿಳಿಸಿದ್ದಾರೆ. ಅಲ್ಲದೆ, ಅಮೆರಿಕಾದ ರಾಜತಾಂತ್ರಿಕ ಮಾತುಕತೆಗಳ ಕುರಿತು ನಮ್ಮ ನಿಲುವು ತುಂಬಾ ಸ್ಪಷ್ಟವಾಗಿದ್ದು, ಅಮೆರಿಕಾದ ಮಿಲಿಟರಿ ದಾಳಿ ಮತ್ತು ಆಕ್ರಮಣವು ಪೂರ್ಣ ತೀವ್ರತೆಯಿಂದ ಮುಂದುವರಿದಂತೆ, ಇರಾನ್ ತನ್ನ ಎಲ್ಲಾ ಸಾಮರ್ಥ್ಯವನ್ನು ಬಳಸಿ ದೇಶದ ರಕ್ಷಣೆಗೆ ನಿಂತಿದೆ. ಏಕೆಂದರೆ, ಈ ಹಿಂದೆ ಕೇವಲ ಒಂದು ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿ ನಡೆದ 2 ಸಂದರ್ಭಗಳಲ್ಲಿ ನಡೆದ ರಾಜತಾಂತ್ರಿಕ ಮಾತುಕತೆಗಳ ಸಮಯದಲ್ಲಿ ಅವರು ಮಾಡಿ ದ್ರೋಹವನ್ನು ನಾವು ನಮ್ಮ ದೇಹದ ಅಣುಅಣುವಿನಲ್ಲಿ ಅನುಭವಿಸಿದ್ದೇವೆ. ಈ ದ್ರೋಹವನ್ನು ನಾವು ಮರೆಯುವುದಿಲ್ಲ ಎಂದು ತಿಳಿಸಿದ್ದಾರೆ.

